ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 2 ಭಾನುವಾರ 2023

ಸಂಪುಟ: 44 | ಸಂಚಿಕೆ: 77 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಜು.1ರಿಂದಲೇ ಹಣ ಕೊಡ್ತೀವಿ ಅಂತ ಹೇಳಿಲ್ಲ; ಜು.10ರಿಂದ ಕೊಡಬಹುದು



ಬೆಂಗಳೂರು: ಅನ್ನ ಭಾಗ್ಯ ಯೋಜನೆ ಫಲಾನುಭವಿಗಳಿಗೆ ಜುಲೈ 1ರಿಂದಲೇ ಹಣ ನೀಡುತ್ತೇವೆ ಎಂದು ಹೇಳಿಲ್ಲ. ಈ ತಿಂಗಳೇ 5 ಕೆಜಿ ಅಕ್ಕಿ ಬದಲಿಗೆ ಹಣ ಕೊಡುತ್ತೇವೆ. ಬಹುಶಃ ಜುಲೈ 10ರಿಂದ ಹಣ ನೀಡುವ ಪ್ರಕ್ರಿಯೆ ಪ್ರಾರಂಭವಾಗಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಜುಲೈ ತಿಂಗಳಿನಿಂದಲೇ ಅನ್ನ ಭಾಗ್ಯ ಯೋಜನೆಯಡಿ ಫಲಾನುಭವಿಗಳ ಖಾತೆಗೆ ಹಣ ಹಾಕುತ್ತೇವೆ. ಹಾಗೆಂದು ಇಂದಿನಿಂದಲೇ ಹಾಕುತ್ತೇವೆ ಎಂದು ಹೇಳಿಲ್ಲ. ಗೃಹ ಜ್ಯೋತಿ ಯೋಜನೆ ಇಂದು ಜಾರಿಗೆ ಬರಲಿದ್ದು ಈ ತಿಂಗಳಿನಿಂದ ಉಚಿತ ವಿದ್ಯುತ್ ಸಿಗಲಿದೆ. ಆಗಸ್ಟ್ ತಿಂಗಳ ಬಿಲ್‌ನಲ್ಲಿ 200 ಯೂನಿಟ್ ಒಳಗೆ ಬಳಸಿದವರಿಗೆ ಶೂನ್ಯ ಮೊತ್ತ ಬರುತ್ತದೆ ಎಂದರು.

'ಗೃಹಜ್ಯೋತಿ'ಗೆ ಡೆಡ್‌ಲೈನ್ ಇಲ್ಲ

ಚಿಕ್ಕಮಗಳೂರು: 200 ಯೂನಿಟ್ ಒಳಗೆ ವಿದ್ಯುತ್ ಬಳಸುವ ರಾಜ್ಯದ ಎಲ್ಲಾ ನಾಗರಿಕರಿಗೂ ಈ ತಿಂಗಳಿನಿಂದ ಉಚಿತ ವಿದ್ಯುತ್ ದೊರಕಲಿದ್ದು ನಾಗರಿಕರು ಆದಷ್ಟು ಶೀಘ್ರ ಅರ್ಜಿ ಸಲ್ಲಿಸಿದರೆ ಒಳ್ಳೆಯದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಚಿಕ್ಕಮಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಗೃಹಜ್ಯೋತಿಗೆ ಅರ್ಜಿ ಸಲ್ಲಿಸಲು ಡೆಡ್‌ಲೈನ್ ಇಲ್ಲ, ಆದರೆ ಈ ತಿಂಗಳು ಉಚಿತ ವಿದ್ಯುತ್ ಸಿಗಬೇಕೆಂದರೆ ಜುಲೈ 25ರೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದರೆ ಆಗಸ್ಟ್ ತಿಂಗಳ ಬಿಲ್‌ನಲ್ಲಿ ಶೂನ್ಯ ಬಿಲ್ ಎಂದು ಬರುತ್ತದೆ. ಇಲ್ಲದಿದ್ದರೆ ನಾಗರಿಕರು ಹಣ ಪಾವತಿ ▶ 9ನೇ ಪುಟಕ್ಕೆ



ಮುಂದಿನ ತಿಂಗಳು ಫ್ರೀ ಸಿಗಲು ಶೀಘ್ರ ಅರ್ಜಿ ಸಲ್ಲಿಸಬೇಕು

ಬೆಳಗುತಿದೆ ಗೃಹಜ್ಯೋತಿ

ಅನ್ನಭಾಗ್ಯ ಘೋಷಣೆ; ಜಾರಿಗೆ ಇನ್ನೂ ಮೀನಾಮೇಷ

ಬೆಂಗಳೂರು, ಜು. 1(ಕೆಎಂಶಿ)– ಗೃಹ ಜ್ಯೋತಿ ಯೋಜನೆಗೆ ಇಂದಿನಿಂದಲೇ ಹಸಿರು ನಿಶಾನೆ ತೋರಿರುವ ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಅನುಷ್ಠಾನಕ್ಕೆ ಮೀನಾಮೇಷ ಎಣಿಸುತ್ತಿದೆ.

ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಎರಡನೇ ಗ್ಯಾರಂಟಿ ಗೃಹಜ್ಯೋತಿ ಯೋಜನೆ ಜಾರಿಗೆ ಬಂದಿದ್ದು, ಇದರಿಂದ ಮಾಸಿಕ 200 ಯುನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡುವವರು ಆಗಸ್ಟ್ ತಿಂಗಳ ಬಿಲ್ ಪಾವತಿಸುವಂತಿಲ್ಲ. ಯೋಜನೆಗೆ ಯಾರು ನೋಂದಣಿ ಮಾಡಿಕೊಂಡಿರುತ್ತಾರೋ ಅಂತಹವರಿಗಷ್ಟೇ ಸೌಲಭ್ಯ ದೊರೆಯುತ್ತದೆ. ಜುಲೈ 25ರೊಳಗೆ ಸಂಬಂಧಪಟ್ಟ ವಿದ್ಯುತ್ ಪ್ರಸರಣ ನಿಗಮಗಳಲ್ಲಿ ನೋಂದಣಿ ಮಾಡಿಕೊಂಡರೆ ಅವರಿಗೂ ಇದರ ಲಾಭ ದೊರೆಯಲಿದೆ. ಈಗಾಗಲೇ 86.5 ಲಕ್ಷ ಮಂದಿ ಯೋಜನೆಗೆ ಅರ್ಜಿ ಸಲ್ಲಿಸಿದ್ದಾರೆ.

ಐದು ಗ್ಯಾರಂಟಿಗಳಲ್ಲಿ ಎರಡು ಯೋಜನೆ ಜಾರಿ



ಉಳಿದವರು ಅರ್ಜಿ ಸಲ್ಲಿಸಲು ಗಡುವು ನೀಡಿಲ್ಲ. ಉಚಿತ ವಿದ್ಯುತ್ ಪಡೆಯಲು ಬಯಸುವವರು ಅರ್ಜಿ ಎಷ್ಟು ಬೇಗ ಸಲ್ಲಿಸುತ್ತಾರೋ ಅಲ್ಲಿಂದ ಅವರಿಗೆ ಲಾಭ ದೊರೆಯುತ್ತದೆ. 200 ಯುನಿಟ್ ವಿದ್ಯುತ್ ಬಳಕೆ ಮೀರಿದಲ್ಲಿ ಅಂತಹವರಿಗೆ ಯೋಜನೆ ಅನ್ವಯಿಸುವುದಿಲ್ಲ. ಯೋಜನೆಗೆ ಅರ್ಜಿ ಹಾಕಿದ ಬಳಿಕ 200 ಯುನಿಟ್‌ಗಳ ಬಳಕೆಯ ಮಿತಿಯನ್ನು ಯಾವುದಾದರು ತಿಂಗಳಲ್ಲಿ ಮೀರಿದಲ್ಲಿ ಆ ತಿಂಗಳ ಪೂರ್ಣ ವಿದ್ಯುತ್ ಬಿಲ್ ಪಾವತಿಸಿ ಯೋಜನೆಯಲ್ಲಿ ಮುಂದುವರೆಯಬಹುದು ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಹೊಸ ▶ 9ನೇ ಪುಟಕ್ಕೆ

ಕರ್ನಾಟಕ ಪೊಲೀಸರಿಗೆ ಗುಡ್ ನ್ಯೂಸ್

ವಾರದ ರಜೆ, ವಿಶೇಷ ಭತ್ಯೆ ಬೇಡಿಕೆ ಶೀಘ್ರವೇ ಈಡೇರಿಕೆ



ಮೈಸೂರು, ಜು.1(ಬಿಎಲ್‌ಯು)– ಕರ್ನಾಟಕ ಪೊಲೀಸರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಗುಡ್ ನ್ಯೂಸ್ ಕೊಟ್ಟಿದ್ದಾರೆ. ವಾರದ ರಜೆ ಸೇರಿದಂತೆ ಔರಾದ್ಕರ್ ವರದಿಯ ಹಲವು ಶಿಫಾರಸ್ಸುಗಳನ್ನು ಅನುಷ್ಠಾನ ಮಾಡುವುದಾಗಿ ಭರವಸೆ ನೀಡಿದ್ದಾರೆ. ಪೊಲೀಸರಿಗೆ ವಾರದ ರಜೆ ನೀಡಬೇಕೆಂಬ ಬೇಡಿಕೆಯನ್ನು ಈಡೇರಿಸಲಾಗುವುದು. ಇದರಿಂದ ಪೊಲೀಸರಿಗೆ ಮಾನಸಿಕ ಹಾಗೂ ದೈಹಿಕವಾಗಿ ವಿಶ್ರಾಂತಿ ದೊರೆಯುತ್ತದೆ. ಆಗ ಅವರು ಇನ್ನೂ ಉತ್ತಮವಾಗಿ ಕೆಲಸ ಮಾಡಬಹುದು. ಈ ಹಿನ್ನೆಲೆಯಲ್ಲಿ ಪೊಲೀಸರಿಗೆ ವಾರದ ರಜೆ ನೀಡಲಾಗುವುದು ಎಂದು ಡಾ. ಪರಮೇಶ್ವರ್ ಸಮರ್ಥನೆ ನೀಡಿದರು. ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರಿಗೆ ವಿಶೇಷ ಭತ್ಯೆ ನೀಡಬೇಕೆಂಬ ಬೇಡಿಕೆಯನ್ನು ಈಡೇರಿಸಲು ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು. ಔರಾದ್ಕರ್ ವರದಿಯ ಹಲವು ಶಿಫಾರಸ್ಸುಗಳನ್ನು ನಮ್ಮ ಹಿಂದಿನ ಸರ್ಕಾರವೇ ಜಾರಿಗೊಳಿಸಿದೆ. ಈಗ ಕೆಲವು ಬೇಡಿಕೆಗಳನ್ನು ನಾವು ಹಂತ ಹಂತವಾಗಿ ಜಾರಿಗೊಳಿಸುತ್ತೇವೆ. ಆದರೆ ಆ ವರದಿಯನ್ನು ಯಥಾ ವತ್ತಾಗಿ ಜಾರಿಗೊಳಿಸುವುದು ಸಾಧ್ಯ ವಿಲ್ಲ ಎಂದು ಸ್ಪಷ್ಟಪಡಿಸಿದರು.

2.5 ಲಕ್ಷ ಹುದ್ದೆ ಭರ್ತಿ

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.5 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಆರಂಭವಾಗಿದೆ. ಪೊಲೀಸ್ ಇಲಾಖೆ ಒಂದರಲ್ಲೇ 15 ಸಾವಿರ ಹುದ್ದೆ ಖಾಲಿ ಇವೆ. ಇದರಲ್ಲಿ 4 ಸಾವಿರ ಪೊಲೀಸ್ ಪೇದೆ ಹಾಗೂ 400 ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು ಎಂದು ಡಾ.ಜಿ.ಪರಮೇಶ್ವರ್ ಹೇಳಿದರು.

ಬಿಳಿಕೆರೆ ಬಳಿ ಸಾರಿಗೆ ಬಸ್–ಕಾರು ಡಿಕ್ಕಿ: ಕೊಡಗಿನ ದಂಪತಿ ಸಾವು

ಹೈದರಾಬಾದ್‌ನಿಂದ ಮೈಸೂರು ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ ಪುತ್ರಿಯ ಕರೆದೊಯ್ಯಲು ಬರುತ್ತಿದ್ದ ದಂಪತಿ





ಹೆಚ್.ಬಿ.ಬೆಳ್ಳಿಯಪ್ಪ ಅವರ ಪತ್ನಿ ವೀಣಾ

ಹುಣಸೂರು, ಜು.1–ಕೆಎಸ್‌ಆರ್‌ಟಿಸಿ ಬಸ್ ಮತ್ತು ಮಾರುತಿ ಡಿಸೈರ್ ಕಾರಿನ ನಡುವೆ ಡಿಕ್ಕಿ ಸಂಭವಿಸಿ, ಕೊಡಗಿನ ದಂಪತಿ ದಾರುಣವಾಗಿ ಸಾವನ್ನಪ್ಪಿದ ಘಟನೆ ಹುಣಸೂರು ತಾಲೂಕು ಬಿಳಿಕೆರೆ ಸಮೀಪದ ರಂಗಯ್ಯನ ಕೊಪ್ಪಲು ಬಳಿ ರಾಷ್ಟ್ರೀಯ ಹೆದ್ದಾರಿ–275ರಲ್ಲಿ ಸಂಭವಿಸಿದೆ.

ಮರಗೋಡು ಕಾಲೇಜಿನ ನಿವೃತ್ತ ಪ್ರಾಂಶುಪಾಲರೂ ಆದ ಕೊಡಗು ಜಿಲ್ಲಾ ಬಿಎಸ್‌ಪಿ ಉಪಾಧ್ಯಕ್ಷ ಹೆಚ್.ಬಿ.ಬೆಳ್ಳಿಯಪ್ಪ (64) ಮತ್ತು ಅವರ ಪತ್ನಿ ವೀಣಾ(54) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಹೈದರಾಬಾದ್‌ನಿಂದ ವಿಮಾನದಲ್ಲಿ ಮೈಸೂರಿಗೆ ಆಗಮಿಸಲಿದ್ದ ಪುತ್ರಿಯನ್ನು ಕರೆದೊಯ್ಯಲು ಗುಡ್ಡೆಹೊಸೂರಿನ ತಮ್ಮ ಮನೆಯಿಂದ ಡಿಸೈರ್ ಕಾರಿನಲ್ಲಿ (ಕೆಎ 12 ಎಂಎ 5209) ಈ ದಂಪತಿ ತೆರಳುತ್ತಿದ್ದಾಗ ರಂಗಯ್ಯನ ಕೊಪ್ಪಲು ಬಳಿ ಮೈಸೂರಿನಿಂದ ಹುಣಸೂರು ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ 09 ಎಫ್ 5404) ಡಿಕ್ಕಿ ಹೊಡೆದ ಪರಿಣಾಮ ಬೆಳ್ಳಿಯಪ್ಪ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗ ಮಧ್ಯೆ ವೀಣಾ ಮೃತಪಟ್ಟಿದ್ದಾರೆ.


ಎರಡು ವಾಹನಗಳು ಮುಖಾಮುಖಿ ಡಿಕ್ಕಿಯಾದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ ವಿಷಯ ತಿಳಿಯುತ್ತಿದ್ದಂತೆಯೇ ಹುಣಸೂರು ಡಿವೈಎಸ್‌ಪಿ ಮಹೇಶ್, ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಚಿಕ್ಕಸ್ವಾಮಿ, ಸಬ್ ಇನ್ಸ್‌ಪೆಕ್ಟರ್ ಲಿಂಗರಾಜ ಅರಸ್, ಎಎಸ್‌ಐ ಗೋಪಾಲಕೃಷ್ಣ, ಸಿಬ್ಬಂದಿಗಳಾದ ರವಿ, ಅಶೋಕ್, ಮನೋಹರ್, ಗೋವಿಂದ ಇತರರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳ್ಳಿಯಪ್ಪ ಅವರ ಪುತ್ರಿ ಶೃತಿ ಹೈದರಾಬಾದ್‌ನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಅವರು ಶನಿವಾರ ▶ 9ನೇ ಪುಟಕ್ಕೆ

ಭಾರೀ ವಿರೋಧದ ನಡುವೆಯೂ ಮೈಸೂರು–ಬೆಂಗಳೂರು

ಹೈವೇಯಲ್ಲಿ 2ನೇ ಟೋಲ್ ಆರಂಭ

ಕೆಲ ಸಂಘಟನೆಗಳಿಂದ ಪ್ರತಿಭಟನೆ, ದುಬಾರಿ ಟೋಲ್ ವಸೂಲಿಗೆ ಸಾರ್ವಜನಿಕರ ಆಕ್ರೋಶ



ಮಂಡ್ಯ, ಜು.1(ಮೋಹನ್‌ರಾಜ್)– ಭಾರೀ ವಿರೋಧದ ನಡುವೆಯೂ ಶನಿವಾರದಿಂದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ 2ನೇ ಟೋಲ್ ಆರಂಭವಾಗಿದ್ದು, ಕೆಲ ಸಂಘಟನೆಗಳು ಟೋಲ್ ಸಂಗ್ರಹಕ್ಕೆ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದವು. ಕೆಲ ಪ್ರಯಾಣಿಕರು ಸಹ ದುಬಾರಿ ಟೋಲ್ ಸಂಗ್ರಹಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ಬೆಳಗ್ಗೆ 8 ಗಂಟೆಯಿಂದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಗಣಂಗೂರು ಬಳಿಯ ಟೋಲ್‌ನಲ್ಲಿ ಶುಲ್ಕ ಸಂಗ್ರಹ ಆರಂಭವಾಯಿತು. ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಮತ್ತೊಂದು ಟೋಲ್‌ನಲ್ಲಿ ಶುಲ್ಕ ವಸೂಲಿ ಆರಂಭವಾಗುತ್ತಿರುವುದಕ್ಕೆ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ವಿರೋಧದ ನಡುವೆಯೂ ಪ್ರಾಧಿಕಾರ ಶುಲ್ಕ ವಸೂಲಿ ಆರಂಭಿಸಿತು.

ಕೆಲ ತಿಂಗಳ ಹಿಂದೆಯೇ ರಾಮನಗರ ಜಿಲ್ಲೆ ಬಿಡದಿ ಬಳಿ ಕಣಮಿಣಕಿ ಬಳಿ ಬೆಂಗಳೂರು– ಮೈಸೂರು ▶ 9ನೇ ಪುಟಕ್ಕೆ

ತಾಂತ್ರಿಕ ದೋಷ: ಎಕ್ಸ್‌ಪ್ರೆಸ್ ವೇನಲ್ಲಿ ಹೊತ್ತಿ ಉರಿದ ಕಾರು



ಶ್ರೀರಂಗಪಟ್ಟಣ:ತಾಂತ್ರಿಕ ದೋಷದಿಂದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನ ಸರ್ವೀಸ್ ರಸ್ತೆಯಲ್ಲಿ ರೆನಾಲ್ಟ್ ಡಸ್ಟರ್ ಕಾರೊಂದು ಹೊತ್ತಿ ಉರಿಯಿತು. ಶ್ರೀರಂಗಪಟ್ಟಣದ ಗೌರಿಪುರ ಗೇಟ್ ಬಳಿ ಈ ಘಟನೆ ನಡೆದಿದೆ. ಬೆಂಗಳೂರಿನಿಂದ ಮೈಸೂರಿಗೆ ಪಿರಾನ್ ಎಂಬುವರು ಮಕ್ಕಳ ಜೊತೆ ತೆರಳುತ್ತಿದ್ದರು. ಕಾರಿನ ಇಂಜಿನ್ ಭಾಗದಲ್ಲಿ ಹೊಗೆ ಕಾಣಿಸಿಕೊಳ್ಳುತ್ತಿದ್ದಂತೆ ▶ 9ನೇ ಪುಟಕ್ಕೆ

ಎಡಿಜಿಪಿ ಅಲೋಕ್‌ಕುಮಾರ್ ವಾರ್ನಿಂಗ್ ಬೆನ್ನಲ್ಲೇ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆ

ವಿಶ್ರಾಂತಿಗೆ ಕಾರು ನಿಲ್ಲಿಸಿದವರಿಗೆ ಮಾರಕಾಸ್ತ್ರಗಳ ತೋರಿಸಿ 3.50ಲಕ್ಷ ರೂ.ಮೌಲ್ಯದ ಚಿನ್ನದ ಸರ ಕಸಿದುಕೊಂಡು ಪರಾರಿಯಾದ ಮೂವರು ದುಷ್ಕರ್ಮಿಗಳು



ಮದ್ದೂರು, ಜು.1(ಮೋಹನ್‌ರಾಜ್)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತ, ದರೋಡೆ ಹಾಗೂ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚುತ್ತಿದ್ದು, ಇವುಗಳಿಗೆ ಕಡಿವಾಣ ಹಾಕಬೇಕೆಂದು ಎಡಿಜಿಪಿ ಅಲೋಕ್‌ಕುಮಾರ್ ಮದ್ದೂರಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆ ಸಿದ ಕೆಲವೇ ಗಂಟೆಯಲ್ಲಿ ಮದ್ದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೈವೇಯಲ್ಲಿ ದರೋಡೆ ನಡೆದಿದೆ. ▶ 9ನೇ ಪುಟಕ್ಕೆ

ಮೈಸೂರು ಸಾಹಿತ್ಯೋತ್ಸವಕ್ಕೆ ಪ್ರಮೋದಾದೇವಿ ಒಡೆಯರ್ ಚಾಲನೆ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕ ಬಿಡುಗಡೆ





ಮೈಸೂರಿನ ಸದರನ್ ಸ್ಟಾರ್ ಹೋಟಲ್‌ನಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಏಳನೇ ಆವೃತ್ತಿಯ ಮೈಸೂರು ಸಾಹಿತ್ಯೋತ್ಸವ (ಲಿಟರೇಚರ್ ಫೆಸ್ಟ್)ದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಶುಭಾ ಸಂಜಯ್ ಅರಸ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಮೈಸೂರು ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್, ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷರಾದ ಡಾ.ಬಿಬೇಕ್ ಡೆಬ್ರಾಯ್, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಉಪಾಧ್ಯಕ್ಷ ಸ್ಯಾಮ್ ಚೆರಿಯನ್ ಕುಂಬುಕಟ್ಟು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಹೆಸರಾಂತ ಪ್ರಕಾಶಕರಾದ ಲೋಕಪ್ಪ ಅವರು ಉಪಸ್ಥಿತರಿದ್ದಾರೆ. ಬಲಚಿತ್ರದಲ್ಲಿ ಸಾಹಿತ್ಯೋತ್ಸವದಲ್ಲಿ ಉಪಸ್ಥಿತರಿದ್ದ ಸಾಹಿತ್ಯ ಪ್ರೇಮಿಗಳು ಹಾಗೂ ಗಣ್ಯರನ್ನು ಕಾಣಬಹುದು.

ಮೈಸೂರು, ಜೂ.1(ಬಿಎಲ್‌ಯು)–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶನಿವಾರ ಎರಡು ದಿನಗಳ ಏಳನೇ ಆವೃತ್ತಿಯ ಮೈಸೂರು ಸಾಹಿತ್ಯೋತ್ಸವ (ಲಿಟರೇಚರ್ ಫೆಸ್ಟ್) ಆರಂಭವಾಯಿತು.

ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ಆಯೋಜಿಸಿದ್ದ ಮೈಸೂರು ಸಾಹಿತ್ಯೋತ್ಸವವನ್ನು ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು. ಎರಡು ದಿನಗಳ ಕಾಲ ನಡೆಯುವ ಈ ಸಾಹಿತ್ಯ ಉತ್ಸವದಲ್ಲಿ ಹಲವು ಮಹತ್ವದ ವಿಚಾರಗಳ ಮಂಥನವಾಗಲಿದೆ ಎಂದು ಪ್ರಮೋದಾದೇವಿ ಒಡೆಯರ್ ಹೇಳಿದರು.

ಇದೇ ವೇಳೆ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕವನ್ನು ಪ್ರಮೋದಾದೇವಿ ಒಡೆಯರ್ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಚಂದ್ರಶೇಖರ ಕಂಬಾರ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಕೆ.ಬಿ.ಗಣಪತಿ ಅವರು ಕೂಡ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬಿಡುಗಡೆಯಾದ ಗಾಯತ್ರಿ ಅವರ 'ಎಲಾಸ್ ಅನ್ ಫಿನಿಷ್ಡ್ ಬ್ಯುಸಿನೆಸ್' ಪುಸ್ತಕದ ಮೊದಲ ಪ್ರತಿಯನ್ನು ಅರುಣಾಚಲ ಪ್ರದೇಶ ಇಟಾನಗರದ ರಾಜೀವ್ ಗಾಂಧಿ ಸೆಂಟ್ರಲ್ ಯೂನಿವರ್ಸಿಟಿಯ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿ.ಬೆಳ್ಳಿಯಪ್ಪ ಅವರು ಮೊದಲ ಪ್ರತಿ ಪಡೆದರು.

ತರುವಾಯ ಬೆಂಗಳೂರು ಬರಹಗಾರರ ಸಂಗ್ರಹ 'ರಿಲೇಷನ್ ಶಿಪ್ ರಾಗಾಸ್–ಅನ್ ಅಂತೋಲಜಿ ಆಫ್ ಶಾರ್ಟ್ ಸ್ಟೋರೀಸ್', ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಅವರ 'ವೆನ್ ದಿ ವಿಂಡ್ ಗಾಡ್ ಫೆಲ್ ಸಿಕ್ ಅಂಡ್ ಅದರ್ ಫೋಕ್ ಟೇಲ್ಸ್' (ಕನ್ನಡದ ಮೂಲ 'ಮರವೇ ಮರ್ಮರವೇ ಮತ್ತು ಪುಷ್ಪರಾಣಿ' ಕೃಷ್ಣಮನವಳ್ಳಿ ಅವರಿಂದ ಅನುವಾದ), ಕಲಾವಿದರಾದ ಸುಶೀಲ್ ಕುಮಾರಿ ಅವರ ಶ್ರೀ ಲಲಿತಾ ಸಹಸ್ರನಾಮ ಚಿತ್ರಾವಳಿ (ಸಂಪುಟ 1, 2, 3 ಮತ್ತು 4 ದೇವಿ ಲಲಿತೆಯ 1000 ಹೆಸರುಗಳ ಚಿತ್ರಾತ್ಮಕ ಚಿತ್ರಣ–Volume 1,2,3 and 4- A Pictorial depiction of 1000 names of Devi Lalita) ಪುಸ್ತಕಗಳನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ. ಬಿಬೇಕ್ ಡೆಬ್ರಾಯ್, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಸ್ಯಾಮ್ ಚೆರಿಯನ್ ಕುಂಬುಕಟ್ಟು, ಮ್ಯಾನೇಜಿಂಗ್ ಟ್ರಸ್ಟಿ ಶುಭಾ ಸಂಜಯ್ ಅರಸ್, ಹೆಸರಾಂತ ಪ್ರಕಾಶಕ ಲೋಕಪ್ಪ ಅವರು ಉಪಸ್ಥಿತರಿದ್ದರು. ಹಲವು ಬರಹಗಾರರು, ಸಾಹಿತ್ಯ ಪ್ರೇಮಿಗಳು ಸೇರಿದಂತೆ ನೂರಾರು ಮಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇಂದಿನಿಂದ ಎರಡು ದಿನಗಳ ಕಾಲ ನಡೆಯುವ ಸಾಹಿತ್ಯೋತ್ಸವದಲ್ಲಿ ಪುಸ್ತಕಗಳ ಕುರಿತಂತೆ ಹಲವು ವಿಚಾರಗೋಷ್ಠಿಗಳು ನಡೆಯಲಿವೆ. ಸಾಹಿತ್ಯೋತ್ಸವದಲ್ಲಿ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನವನ್ನು ಸಹ ಆಯೋಜಿಸಲಾಗಿತ್ತು.

ಟೋಲ್ ಸಂಗ್ರಹ ವಿರೋಧಿ ಹೋರಾಟಕ್ಕೆ ಬೆಂಬಲ

ಎಕ್ಸ್‌ಪ್ರೆಸ್ ವೇಯಲ್ಲಿ ಟೋಲ್ ಕಟ್ಟಬೇಡಿ



ಟೋಲ್ ಸಂಗ್ರಹ ವಿರೋಧಿ ಹೋರಾಟದಲ್ಲಿ ನಾವು ನೇರವಾಗಿ ಭಾಗಿಯಾಗುವುದಿಲ್ಲ. ಆದರೆ ಜನರ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಕೇಂದ್ರ ಸರ್ಕಾರ ಎಲ್ಲಿಂದಲೋ ಹಣ ತರುವುದಿಲ್ಲ. ಜನರು ಕಟ್ಟುವ ತೆರಿಗೆ ಹಣದಿಂದಲೇ ಅಭಿವೃದ್ಧಿ ಕಾರ್ಯ ಮಾಡುತ್ತದೆ. ಇದನ್ನು ಕೇಂದ್ರ ಸರ್ಕಾರ ಅರಿಯಬೇಕು ಎಂದು ಸಚಿವ ಚಲುವರಾಯಸ್ವಾಮಿ ಎಚ್ಚರಿಕೆ ನೀಡಿದರು.

ಮೈಸೂರು, ಜು.1 (ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಟೋಲ್ ಕಟ್ಟದಂತೆ ಜನರಿಗೆ ಕರೆ ನೀಡಿದ್ದು, ಟೋಲ್ ಸಂಗ್ರಹ ವಿರೋಧಿ ಹೋರಾಟಕ್ಕೆ ನಮ್ಮ ಬೆಂಬಲವಿದೆ ಎಂದು ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ.

ಮೈಸೂರಿನಲ್ಲಿ ಶನಿವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಶ್ರೀರಂಗಪಟ್ಟಣದ ಬಳಿ 2ನೇ ಟೋಲ್ ಸಂಗ್ರಹ ಮಾಡುತ್ತಿರುವುದು ಕೇಂದ್ರ ಸರ್ಕಾರದ ಉದ್ಧಟತನದ ವರ್ತನೆಯಾಗಿದೆ. ಕೇಂದ್ರ ಸರ್ಕಾರ ಈ ವಿಚಾರದಲ್ಲಿ ರಾಜ್ಯ ಸರ್ಕಾರವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದು ಕಿಡಿಕಾರಿದರು.

ಎಕ್ಸ್‌ಪ್ರೆಸ್ ವೇ ಕಾಮಗಾರಿ ಪೂರ್ಣಗೊಳಿಸದೆ ಟೋಲ್ ಸಂಗ್ರಹ ಮಾಡುತ್ತಿರುವುದು ಸರಿಯಲ್ಲ. ಲೋಪಗಳನ್ನು ಸರಿಪಡಿಸಿ ಟೋಲ್ ಸಂಗ್ರಹ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ವೇ ಸಮಸ್ಯೆ ಬಗ್ಗೆ ಸಿಎಂ ಸಿದ್ದರಾಮಯ್ಯ ಹಾಗೂ ಮುಖ್ಯ ಕಾರ್ಯದರ್ಶಿ ಅವರ ಗಮನಕ್ಕೆ ತರಲಾಗಿದೆ ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರ ರೂಪಿಸಲಾಗುವುದು ಎಂದು ಭರವಸೆ ನೀಡಿದರು.

1.43 ಲಕ್ಷ ಸಸಿ ನೆಡುವ ಹಸಿರೀಕರಣ ಸಪ್ತಾಹಕ್ಕೆ ಚಾಲನೆ



ಮೈಸೂರು,ಜು.1(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ 1.43 ಲಕ್ಷ ಸಸಿಗಳನ್ನು ನೆಡುವ ಹಸಿರೀಕರಣ ಸಪ್ತಾಹಕ್ಕೆ ಶನಿವಾರ ಚಾಲನೆ ನೀಡಲಾಯಿತು. ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರು ಸಸಿ ನೆಡುವ ಮೂಲಕ ವನಮಹೋತ್ಸವ ಸಪ್ತಾಹಕ್ಕೆ ಚಾಲನೆ ನೀಡಿದರು.

ಇದೇ ವೇಳೆ ಮೈಸೂರು ಸೇರಿದಂತೆ ರಾಜ್ಯದಲ್ಲಿ ಶೇ.33ರಷ್ಟು ಪ್ರದೇಶವನ್ನು ಹಸಿರೀಕರಣಗೊಳಿಸುವ ಬಗ್ಗೆ ಗಣ್ಯರು ಹಾಗೂ ಅಧಿಕಾರಿಗಳು ಪ್ರತಿಜ್ಞೆ ಮಾಡಿದರು. ಮೈಸೂರು ಜಿಲ್ಲೆಯಲ್ಲಿ ಜುಲೈ 1ರಿಂದ 7ನೇ ತಾರೀಖಿನವರೆಗೆ 1.43 ಲಕ್ಷ ಸಸಿಗಳನ್ನು ನೆಡಲಾಗುತ್ತಿದೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರು ಶೃಂಗೇರಿ ಮಠದಲ್ಲಿ ಶಾರದೆಗೆ ಸರಸ್ವತಿ ಅಲಂಕಾರ



ಮೈಸೂರಿನ ಅಭಿನವ ಶಂಕರಮಠದಲ್ಲಿ 2ನೇ ಆಷಾಢ ಶುಕ್ರವಾರದಂದು ವಿಶೇಷ ಪೂಜೆ, ಸರಸ್ವತಿ ಅಲಂಕಾರ ಏರ್ಪಡಿಸಲಾಗಿತ್ತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಶಾರದೆ ಕೃಪೆಗೆ ಪಾತ್ರರಾದರು.

ಮೊದಲು ನಿಮ್ಮ ಪಂಚೆ ಸರಿ ಮಾಡಿಕೊಳ್ಳಿ

ಸಿ.ಟಿ.ರವಿಗೆ ಚಲುವರಾಯಸ್ವಾಮಿ ತಿರುಗೇಟು

ಮೈಸೂರು, ಜು.1(ಬಿಎಲ್‌ಯು)– ಸಿ.ಟಿ.ರವಿ ಅವರೇ ಮೊದಲು ನಿಮ್ಮ ಪಂಚೆ ಸರಿ ಮಾಡಿಕೊಳ್ಳಿ ಹೀಗೆಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿಗೆ ತಿರುಗೇಟು ಕೊಟ್ಟವರು ಕೃಷಿ ಸಚಿವ ಚಲುವರಾಯಸ್ವಾಮಿ.

ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ಪಂಚೆ ಬಗ್ಗೆ ಮಾತನಾಡಿದ್ದ ಸಿ.ಟಿ.ರವಿ ವಿರುದ್ಧ ಕಿಡಿಕಾರಿದರು. ಚುನಾವಣೆಯಲ್ಲಿ ಈ ರೀತಿ ಮಾತನಾಡಿದ ನಿಮ್ಮನ್ನು ಜನರು ಮಲಗಿಸಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಜನರೇ ನಿಮಗೆ ಉತ್ತರ ಕೊಟ್ಟಿದ್ದಾರೆ. ಸುಖಾಸುಮ್ಮನೆ ಏನೇನೋ ಕಲ್ಪಿಸಿಕೊಂಡು ಮಾತನಾಡಬೇಡಿ ಎಂದು ಬಿಜೆಪಿ ನಾಯಕರಿಗೆ ಚಲುವರಾಯಸ್ವಾಮಿ ಸಲಹೆ ನೀಡಿದರು.

ದಿನ ಬೆಳಗಾದರೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಕಾಂಗ್ರೆಸ್ ಸರ್ಕಾರದ ಬಗ್ಗೆ ಮಾತನಾಡುತ್ತಾ, ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಸ್ಕೀಂ ಬಗ್ಗೆ ಯಡಿಯೂರಪ್ಪ ಅವರೊಬ್ಬರೇ ಅಲ್ಲ, ಬೊಮ್ಮಾಯಿ, ಸಾಮ್ರಾಟ್ ಅಶೋಕ್, ಸಿ.ಟಿ.ರವಿ ಎಲ್ಲಾ ಬಂದು ಹೋರಾಟ ಮಾಡಲಿ, ನಮ್ಮ ಅಭ್ಯಂತರವಿಲ್ಲ ಎಂದು ಚಲುವರಾಯಸ್ವಾಮಿ ವ್ಯಂಗ್ಯವಾಡಿದರು. ಮೈಸೂರಿನ ಒಕ್ಕಲಿಗರ ಹಾಸ್ಟೆಲ್‌ಗೆ ಭೇಟಿ ನೀಡಿದ ಚಲುವರಾಯಸ್ವಾಮಿ ಅವರು ಅಲ್ಲೇ ಉಪಾಹಾರ ಸ್ವೀಕರಿಸಿದರು. ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಸೇರಿದಂತೆ ಒಕ್ಕಲಿಗ ಸಮುದಾಯದ ಹಲವು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ತುರ್ತಾಗಿ ವಿರೋಧ ಪಕ್ಷದ ನಾಯಕರೊಬ್ಬರು ಬೇಕಾಗಿದ್ದಾರೆ!

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆ 2023ರ ಫಲಿತಾಂಶ ಬಂದು ಒಂದು ತಿಂಗಳು ಕಳೆದರೂ, ವಿರೋಧ ಪಕ್ಷದ ನಾಯಕನ ಆಯ್ಕೆ ಬಿಜೆಪಿಯಲ್ಲಿ ಕಗ್ಗಂಟಾಗಿ ಉಳಿದಿದೆ. ಹೀಗಾಗಿ, 'ಕರ್ನಾಟಕ ವಿಧಾನ ಸಭೆಗೆ ವಿರೋಧ ಪಕ್ಷದ ನಾಯಕ ತುರ್ತಾಗಿ ಬೇಕಾಗಿದ್ದಾರೆ' ಎಂದು ಕರ್ನಾಟಕ ಕಾಂಗ್ರೆಸ್ ಬಿಜೆಪಿಯನ್ನು ಲೇವಡಿ ಮಾಡಿದೆ.

ಶನಿವಾರ ಟ್ವೀಟ್ ಮಾಡಿರುವ ಕಾಂಗ್ರೆಸ್, ಟ್ವಿಟರ್‌ನಲ್ಲಿ ಜಾಹೀರಾತು ರೂಪದ ಪೋಸ್ಟರ್ ಅನ್ನು ಹಂಚಿಕೊಂಡಿದೆ. ಖಾಲಿ ಇರುವ ಕರ್ನಾಟಕದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹುದ್ದೆಗೆ ಸೂಕ್ತ ವ್ಯಕ್ತಿ ಬೇಕಾಗಿದ್ದಾರೆ ಎಂದು ಪೋಸ್ಟರ್‌ನಲ್ಲಿ ಬರೆಯಲಾಗಿದೆ.

ವಿರೋಧ ಪಕ್ಷದ ನಾಯಕರೊಬ್ಬರು ಬೇಕಾಗಿದ್ದಾರೆ. ಸಂವಿಧಾನವನ್ನು ತಿಳಿದವರು, ಪ್ರಜಾಪ್ರಭುತ್ವವನ್ನು ಅರಿತ ವಿಪಕ್ಷ ನಾಯಕರೊಬ್ಬರು ಬೇಕಾಗಿದ್ದಾರೆ. ಸಿಡಿಗೆ ತಡೆಯಾಜ್ಞೆ ತರದವರು, ಭ್ರಷ್ಟಾಚಾರಿಯಲ್ಲದವರು ವಿಪಕ್ಷ

ಜಾಹೀರಾತು ನೀಡಿದ ಕಾಂಗ್ರೆಸ್



ನಾಯಕ ಬೇಕಾಗಿದ್ದಾರೆ ಎಂದು ಕಾಂಗ್ರೆಸ್ ಪಟ್ಟಿ ಮಾಡಿದೆ. ಆರ್‌ಎಸ್‌ಎಸ್ ಕೈಗೊಂಬೆಯಾಗದವರು, ಕೋಮುವಾದಿ ಅಲ್ಲದವರು ವಿಪಕ್ಷ ನಾಯಕ ಬೇಕಾಗಿದ್ದಾರೆ. ವಾಟ್ಸಾಪ್ ಯೂನಿವರ್ಸಿಟಿಯಲ್ಲಿ ಪದವಿ ಪಡೆದಿರಬಾರದು, ಸುಳ್ಳು ಹೇಳಬಾರದು. ಘನತೆಯ ವ್ಯಕ್ತಿತ್ವದವರು, ತೂಕದ ಮಾತಿರುವ ವಿಪಕ್ಷ ನಾಯಕ ಬೇಕಾಗಿದ್ದಾರೆ. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ವಿಪಕ್ಷ ನಾಯಕರೊಬ್ಬರು ಬೇಕಾಗಿದ್ದಾರೆ! ಎಂದು ಹೇಳಲಾಗಿದೆ.

ಮತ್ತೊಂದು ಟ್ವೀಟ್‌ನಲ್ಲಿ, ಚುನಾವಣೆ ಮುಗಿದು 50ಕ್ಕೂ ಹೆಚ್ಚು ದಿನ ಕಳೆಯಿತು. ನಮ್ಮ ಸರ್ಕಾರ ರಚನೆ ಆಗಿ ತಿಂಗಳು ಕಳೆಯಿತು.

ಮಂತ್ರಿಮಂಡಲವೂ ರಚನೆಯಾಯ್ತು. ಸರ್ಕಾರ ಕೆಲಸ ಶುರು ಮಾಡಿಯಾಯ್ತು. ಹಲವು ಕ್ಯಾಬಿನೆಟ್ ಸಭೆಗಳಾದವು, ಹಲವು ತೀರ್ಮಾನಗಳಾದವು. ಮೂರು ಗ್ಯಾರಂಟಿಗಳೂ ಜಾರಿಯಾದವು. ಇಷ್ಟೆಲ್ಲಾ ಆದರೂ ಬಿಜೆಪಿಗೆ ಒಬ್ಬ ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲಾಗಿಲ್ಲ ಎಂದು ಟೀಕಿಸಿದೆ.

ಮುಂದುವರಿದು, ಆಡಳಿತ ಮಾಡಲು ಬಿಜೆಪಿ ಸಮರ್ಥವಲ್ಲ ಎಂದು ಈಗಾಗಲೇ ಜನರು ಸರ್ಟಿಫಿಕೇಟ್ ಕೊಟ್ಟಾಗಿದೆ. ಈಗ ವಿರೋಧ ಪಕ್ಷವಾಗಿರಲೂ ಸಹ ಅಸಮರ್ಥರು ಎಂದು ತಿಳಿಯುತ್ತಿದೆ. ಪ್ರಜಾಪ್ರಭುತ್ವಕ್ಕಾಗಿ ಸಮರ್ಥ ವಿಪಕ್ಷ ನಾಯಕ ನನ್ನು ಎದುರು ನೋಡುತ್ತಿದ್ದೇವೆ. ನಮ್ಮ ಆಸೆ ಈಡೇರುತ್ತದೋ, ಇಲ್ಲವೋ ಗೊತ್ತಿಲ್ಲ ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

ಮೈಸೂರು,ಜು.1– ನಗರದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 6 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ಎನ್ಫೋರ್ಸ್‌ಮೆಂಟ್ ಆಫೀಸರ್, ಅಕೌಂಟ್ ಆಫೀಸರ್ ಇನ್ ಇ.ಪಿ.ಎಫ್.ಓ–2023 ಮತ್ತು ಅಸಿಸ್ಟೆಂಟ್ ಪ್ರಾವಿಡೆಂಟ್ ಫಂಡ್ ಕಮಿಷನರ್ ಇನ್ ಇ.ಪಿ.ಎಫ್.ಓ–2023 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಜು.2ರಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಲಂ 144 ಸಿ.ಆರ್.ಪಿ.ಸಿ ಅನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ನಿಷೇಧಾಜ್ಞೆಗೆ ಒಳಪಡುವ ಕಾಲೇಜುಗಳು: ವಿ.ವಿ ಪುರಂನಲ್ಲಿರುವ ಮಹಾರಾಣಿ ವುಮೆನ್ಸ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್, ಲಕ್ಷ್ಮಿಪುರಂನಲ್ಲಿರುವ ಮಹಾರಾಣಿ ಸೈನ್ಸ್ ಕಾಲೇಜ್ ಫಾರ್ ವುಮೆನ್, ಲಕ್ಷ್ಮಿಪುರಂನ ಮಹಾರಾಣಿ ಸರ್ಕಾರಿ ಪಿ.ಯು ಕಾಲೇಜ್, ವಿ.ವಿ ಪುರಂ ಮಾತೃಮಂಡಳಿ ವೃತ್ತದ ಹತ್ತಿರದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜ್, ಜಯಲಕ್ಷ್ಮಿಪುರಂನಲ್ಲಿರುವ ಎಸ್.ಬಿ.ಆರ್ ಆರ್ ಮಹಾಜನ ಪಿ.ಯು ಕಾಲೇಜ್ ಮತ್ತು ಲಕ್ಷ್ಮಿಪುರಂನ ಮಹಾರಾಣಿ ಕಲಾ ಕಾಲೇಜ್‌ಗಳ ಸುತ್ತಲೂ ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ನಗರ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಸ್ತು ಸಮಿತಿ ನೋಟಿಸ್ ಬೆನ್ನಲ್ಲೇ ಯಡಿಯೂರಪ್ಪ ಭೇಟಿಯಾದ ರೇಣುಕಾಚಾರ್ಯ; ಸುದೀರ್ಘ ಮಾತುಕತೆ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿದ ಬಳಿಕ ಬಿಜೆಪಿ ನಾಯಕರ ಆರೋಪ–ಪ್ರತ್ಯಾರೋಪಗಳು ಮುಂದುವರಿದಿದೆ. ನಾಯಕರ ವಿರುದ್ಧ ಹೇಳಿಕೆ ನೀಡಿದ್ದಕ್ಕೆ ಮಾಜಿ ಸಚಿವ ರೇಣುಕಾಚಾರ್ಯ ಸೇರಿದಂತೆ ಹಲವರಿಗೆ ಬಿಜೆಪಿ ಶಿಸ್ತುಪಾಲನಾ ಸಮಿತಿಯಿಂದ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ.

ಇದರ ಬೆನ್ನಲ್ಲೇ ಶನಿವಾರ ರೇಣುಕಾಚಾರ್ಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬೆಂಗಳೂರಿನ ಅವರ ಡಾಲರ್ಸ್ ಕಾಲೋನಿಯಲ್ಲಿರುವ ನಿವಾಸದಲ್ಲಿ ಭೇಟಿ ಮಾಡಿದ್ದಾರೆ. ಶುಕ್ರವಾರ ಬಿಜೆಪಿ ನಾಯಕರ ಸಭೆಯಲ್ಲಿ ಪಕ್ಷಕ್ಕೆ ಮುಜುಗರ ತರುವಂತೆ ಹೇಳಿಕೆ ನೀಡುವವರನ್ನು ಕರೆದು ಮಾತನಾಡುವ ಜವಾಬ್ದಾರಿಯನ್ನು ಬಿ.ಎಸ್.ಯಡಿಯೂರಪ್ಪ ಅವರಿಗೆ ನೀಡುವ ನಿರ್ಣಯವನ್ನು ಕೈಗೊಂಡಿತ್ತು.



ಪಕ್ಷಕ್ಕೆ ಮುಜುಗರ ಆಗುವ ಹೇಳಿಕೆಗಳನ್ನು ಯಾರೂ ಕೊಡಬಾರದು. ಯಾರು ಆ ರೀತಿ ಮಾತನಾಡಿದ್ದಾರೋ ಅವರ ಜೊತೆ ಚರ್ಚಿಸಿ ಮುಂದೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು' ಎಂದು ಮಾಜಿ ಸಿಎಂ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದ್ದರು. ಪಕ್ಷಕ್ಕೆ ಮುಜುಗರ ಆಗುವ ಹೇಳಿಕೆಗಳನ್ನು ಯಾರೂ ಕೊಡಬಾರದು. ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ಮಾಜಿ ಸಿಎಂ ಯಡಿಯೂರಪ್ಪ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಕೆಲ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರ ಹೆಚ್ಚಿಸಿದ ಸರ್ಕಾರ

ಮುಂಬೈ: ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರಗಳನ್ನು ಹಣಕಾಸು ಇಲಾಖೆ ಹೆಚ್ಚಿಸಿದೆ. 1 ವರ್ಷ, 2 ವರ್ಷ ಮತ್ತು 5 ವರ್ಷಗಳ ಮರುಕಳಿಸುವ ಠೇವಣಿಗಳ(ಆರ್‌ಡಿ) ಮೇಲೆ ಈ ಹೆಚ್ಚಳ ಮಾಡಲಾಗಿದೆ. ಉಳಿದ ಬಡ್ಡಿದರಗಳನ್ನು ಯಥಾಸ್ಥಿತಿಯಲ್ಲಿ ಇರಿಸಲಾಗಿದೆ. ಬ್ಯಾಂಕ್‌ಗಳಲ್ಲಿನ ಠೇವಣಿಗಳ ಮೇಲಿನ ಬಡ್ಡಿದರಗಳು ಏರುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಹಣಕಾಸು ಸಚಿವಾಲಯದ ಅಧಿಸೂಚನೆಯ ಪ್ರಕಾರ, 5 ವರ್ಷಗಳ ಮೇಲೆ ಗರಿಷ್ಠ 0.3 ಶೇಕಡಾ ಬಡ್ಡಿಯನ್ನು ಹೆಚ್ಚಿಸಲಾಗಿದೆ. ಇದರೊಂದಿಗೆ, RD ಠೇವಣಿದಾರರು ಪ್ರಸಕ್ತ ಹಣಕಾಸು ವರ್ಷದ 2ನೇ ತ್ರೈಮಾಸಿಕದಲ್ಲಿ 6.5 ಶೇಕಡಾ ಬಡ್ಡಿಯನ್ನು ಪಡೆಯುತ್ತಾರೆ. ಇದುವರೆಗೂ ಇದು ಶೇ.6.2ರಷ್ಟಿತ್ತು. ಬಡ್ಡಿದರಗಳ ಪರಿಶೀಲನೆಯ ನಂತರ, ಪೋಸ್ಟ್ ಆಫೀಸ್‌ಗಳಲ್ಲಿ 1 ವರ್ಷದ ಸ್ಥಿರ ಠೇವಣಿಗಳ



(ಎಫ್‌ಡಿ) ಮೇಲಿನ ಬಡ್ಡಿಯು ಶೇ.0.1ರಷ್ಟು ಹೆಚ್ಚಾಗಿದೆ. ಅದೇ ಸಮಯದಲ್ಲಿ, 2 ವರ್ಷಗಳ ಸ್ಥಿರ ಠೇವಣಿಗಳ ಮೇಲಿನ ಬಡ್ಡಿಯು ಈಗ ಶೇ.7.0 ಆಗಿರುತ್ತದೆ. ಇದು ಇಲ್ಲಿವರೆಗೆ ಶೇ.6.9ರಷ್ಟಿತ್ತು. ಆದರೆ, 3 ಮತ್ತು 5 ವರ್ಷಗಳ ಸ್ಥಿರ ಠೇವಣಿಗಳ ಮೇಲಿನ ಬಡ್ಡಿಯನ್ನು ಕ್ರಮವಾಗಿ ಶೇ.7.0 ಮತ್ತು ಶೇ.7.5ರಲ್ಲಿ ಉಳಿಸಿಕೊಳ್ಳಲಾಗಿದೆ. ಹೂಡಿಕೆದಾರರಲ್ಲಿ ಜನಪ್ರಿಯವಾಗಿರುವ ಪಬ್ಲಿಕ್ ಪ್ರಾವಿಡೆಂಟ್ ಫಂಡ್ ಮೇಲಿನ ಬಡ್ಡಿ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಪಿಪಿಎಫ್‌ನಲ್ಲಿನ ಠೇವಣಿಗಳ ಮೇಲಿನ ಬಡ್ಡಿಯನ್ನು ಶೇ.7.1 ಮತ್ತು ಉಳಿತಾಯ ಖಾತೆಯಲ್ಲಿನ ಠೇವಣಿಗಳ ಮೇಲಿನ ಬಡ್ಡಿಯನ್ನು ಶೇ.4.0ನಲ್ಲಿ ಉಳಿಸಿಕೊಳ್ಳಲಾಗಿದೆ. ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರದ ಮೇಲಿನ ಬಡ್ಡಿಯನ್ನು ಜುಲೈ 1ರಿಂದ ಸೆಪ್ಟೆಂಬರ್ 30ರವರೆಗೆ 7.7 ಶೇಕಡಾದಲ್ಲಿ ಉಳಿಸಿಕೊಳ್ಳಲಾಗಿದೆ. ಹೆಣ್ಣು ಮಗುವಿನ ಉಳಿತಾಯ ಯೋಜನೆಯಾದ ಸುಕನ್ಯಾ ಸಮೃದ್ಧಿ ಯೋಜನೆ ಮೇಲಿನ ಬಡ್ಡಿ ದರವು ಶೇ.8.0ರಷ್ಟಿದ್ದು ಅದರಲ್ಲಿ ಏನೂ ಬದಲಾಗಿಲ್ಲ. ಹಿರಿಯ ನಾಗರಿಕರ ಉಳಿತಾಯ ಯೋಜನೆ ಮತ್ತು ಕಿಸಾನ್ ವಿಕಾಸ್ ಪತ್ರದ ಮೇಲಿನ ಬಡ್ಡಿ ಕ್ರಮವಾಗಿ ಶೇ.8.2 ಮತ್ತು ಶೇ.7.5 ಆಗಿರುತ್ತದೆ. ಈ ಹಿಂದೆ ಜನವರಿ–ಮಾರ್ಚ್ ತ್ರೈಮಾಸಿಕ ಹಾಗೂ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿಯನ್ನು ಹೆಚ್ಚಿಸಲಾಗಿತ್ತು.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.1–2023–24ನೇ ಸಾಲಿನ ನಂಜನಗೂಡು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಹಿಂದುಳಿದ ವರ್ಗಗಳ ಪ್ರವರ್ಗ 1, 2(ಎ), 2(ಬಿ), 3(ಎ) ಮತ್ತು 3(ಬಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, https://shp.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಜುಲೈ 15 ಅರ್ಜಿ ಸಲ್ಲಿಸಲು ಕಡೆಯ ದಿನ. ಹೆಚ್ಚಿನ ಮಾಹಿತಿಗಾಗಿ ನಂಜನಗೂಡು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳನ್ನು ಅಥವಾ ದೂ.ಸಂ: 080–8050370005 ಸಂಪರ್ಕಿಸಿ.

ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆ



ಮೈಸೂರು, ಜು. 1– ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಶನಿವಾರ ವೈದ್ಯರ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಆಸ್ಪತ್ರೆಯ ನಿರ್ದೇಶಕ ಡಾ. ಜಿ. ಸಿದ್ದೇಶ್, ಡಾ. ಬಿದನ್‌ಚಂದ್ರ ರಾಯ್ ಅವರು ವೈದ್ಯ ವೃತ್ತಿ ಜೊತೆಗೆ ದೇಶದ ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿದ್ದರು. ಅಲ್ಲದೇ, ಭಾರತೀಯ ವೈದ್ಯ ಸಂಘ, ಇಂಡಿಯನ್ ಮೆಡಿಕಲ್ ಕೌನ್ಸಿಲ್ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹೀಗಾಗಿ ಅವರು ಹುಟ್ಟಿದ ದಿನದಂದು ವೈದ್ಯರ ದಿನ ಆಚರಿಸಲು ಭಾರತ ಸರ್ಕಾರ ಅನುಮೋದನೆ ನೀಡಿದೆ ಎಂದರು.

ಮತ್ತೋರ್ವ ನಿರ್ದೇಶಕಿ ಡಾ. ರಾಜೇಶ್ವರಿ ಮಾದಪ್ಪ ಮಾತನಾಡಿ, ಈಗ ಜನರ ಜೀವನಶೈಲಿ ಬದಲಾಗಿದ್ದರೂ, ವೈದ್ಯರ ಜೀವನಶೈಲಿಯಲ್ಲಿ ಸುಧಾರಣೆಯಾಗಿಲ್ಲ ಎಂದರಲ್ಲದೇ, ದೇಶದಲ್ಲಿ ಜನಸಂಖ್ಯೆ ಹೆಚ್ಚಳ ಹಾಗೂ ಖಾಯಿಲೆಗಳು ಹೆಚ್ಚಳವಾಗಿರುವುದೇ ಇದಕ್ಕೆ ಕಾರಣ ಎಂದು ಹೇಳಿದರು. ವೈದ್ಯರ ಆರೋಗ್ಯವೂ ಕೂಡ ಮುಖ್ಯವಾಗಿರುವುದರಿಂದ ಜನರು ವೈದ್ಯರ ಮೇಲೆ ಹೆಚ್ಚು ಒತ್ತಡ ಹಾಕಬಾರದು ಎಂದು ಮನವಿ ಮಾಡಿದರು.

ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಜ್ಞಾನಶಂಕರ್ ಮಾತನಾಡಿ, ನಮ್ಮ ಆಸ್ಪತ್ರೆಯಲ್ಲಿ ವೈದ್ಯರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದುಳಿದವರಿಗೆ ಹಾಗೂ ಬಡವರಿಗೆ ರಿಯಾಯಿತಿ ದರದಲ್ಲಿ, ತೀರಾ ಬಡವರಿಗೆ ಉಚಿತವಾಗಿಯೂ ಮಾನವೀಯ ದೃಷ್ಟಿಯಿಂದ ಶಸ್ತ್ರಚಿಕಿತ್ಸೆ ಕೂಡ ಮಾಡಲಾಗುತ್ತಿದೆ ಎಂದರು. ಈ ವೇಳೆ ಆಸ್ಪತ್ರೆಯ ನಿರ್ದೇಶಕರಾದ ಡಾ.ಕೆ.ಎಂ.ಮಾದಪ್ಪ, ಡಾ. ಅಂಜಲಿ ಸಿದ್ದೇಶ್, ಡಾ.ಕೆ.ಎನ್. ಸೋಮಣ್ಣ, ಡಾ.ಗೌರಿ ಎಸ್.ಹುಕ್ಕೇರಿ, ಡಾ. ಅನಿಕೇತ್ ಪ್ರಭಾಕರ್ ಇನ್ನಿತರರಿದ್ದರು.

ನಿಧನ

ದೊಡ್ಡವೀರಪ್ಪ



ಮೈಸೂರು, ಜು. 1– ಮೈಸೂರಿನ ಹೊಸ ಬಂಡಿಕೇರಿ ನಿವಾಸಿ ಹಾಗೂ ನಿವೃತ್ತ ರೈಲ್ವೆ ನೌಕರರಾದ ದೊಡ್ಡವೀರಪ್ಪ (85) ನಿಧನರಾದರು. ಮೃತರು ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷರಾದ ಬಸವರಾಜ್ ಬಸಪ್ಪ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಜು.2ರಂದು ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.7.2023 ಭಾನುವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ. ಶ್ರೀರಾಂ ಭಟ್, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40ನಮ್ಮ ಆರೋಗ್ಯ–ಮಕ್ಕಳಲ್ಲಿ ಅತಿಸಾರ ಮತ್ತು ಚಿಕಿತ್ಸೆ ಕುರಿತು ಡಾ.ಸುಧಾ ರುದ್ರಪ್ಪ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞಾ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶ ವಾಣಿ **ಮಧ್ಯಾಹ್ನ:** 12.30 ದೇವರನಾಮ–ಬಿ.ಎನ್.ಮಂಜುಳಾ, ಸತ್ಯವತೀ, 12.45 ಜನಪದ ಸಂಗೀತ–ಜವನಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆ ಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಎ.ಕರುಣಾನಿಧಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಮಾರುತಿ ಪ್ರತಾಪ, ಪ್ರಸ್ತುತಿ– ಮಂಗಳೂರು ಶಕ್ತಿ ನಗರದ ಕರಾವಳಿ ಯಕ್ಷಗಾನ ಮಿತ್ರ ಮಂಡಳಿಯ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಮೈಸೂರು ಜಿಲ್ಲಾ ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, ಬರಡು ರಾಸು ಚಿಕಿತ್ಸೆ ಕುರಿತು ಡಾ.ಜನಾರ್ಧನ್ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ–ಡಾಕ್ಟರರಿಂದ ದೂರವಿರಿ ಎನ್ನುವ ಡಾ. ರಂಗನಾಥ ಮಾಸ್ತರ್ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿತ್ ರಾಜ್‌ಕುಮಾರ್ ಝಾ ಫಖಿವಾಜ್

■ **ಶ್ರೀ ವ್ಯಾಸರಾಜಮಠ ಸೋಸಲೆ, ಶ್ರೀವ್ಯಾಸತೀರ್ಥ ವಿದ್ಯಾಪೀಠ:** ತಪ್ತಮುದ್ರಾಧಾರಣ, ಸ್ಥಳ: ಶ್ರೀವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಬೆಳಗ್ಗೆ 7.30 ರಿಂದ.

■ **ಸಮಸ್ತ ಜೈನ ಸಮಾಜ, ಮೈಸೂರು :** ಚಾತುರ್ಮಾಸ ವರ್ಷಾಯೋಗ–2023, 108 ಶ್ರೀ ಪ್ರಗಲಭ ಸಾಗರ ಮುನಿ ಮಹಾರಾಜರು ಮತ್ತು 108 ಶ್ರೀ ಅನುಪಮಕೀರ್ತಿ ಮುನಿ ಮಹಾರಾಜರು ಚಾತುರ್ಮಾಸ ವ್ರತ ಮತ್ತು ಕಳಸ ಸ್ಥಾಪನೆ ಸಮಾರಂಭ, ಸಾನ್ನಿಧ್ಯ : ಶ್ರೀ ಕ್ಷೇತ್ರ ಕನಕಗಿರಿ ಜೈನಮಠದ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸಭಾ ಭವನ, ಚಂದ್ರಗುಪ್ತ ರಸ್ತೆ, ಬೆಳಗ್ಗೆ 8 ರಿಂದ.

■ **ಸಮೃದ್ಧಿ ಮೆಲೋಡೀಸ್ ಆಡೀಷನ್ :** ಗಾಯನ ಸ್ಪರ್ಧೆ, ಸ್ಥಳ: ಟೌನ್‌ಹಾಲ್, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆನ್ನು ಮೂಳೆಯ ಅಸ್ವಸ್ಥತೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಮೈಸೂರು ಜಿಲ್ಲಾ ಭಾವಸಾರ ಕ್ಷತ್ರಿಯ ಪದವೀಧರರ ಸಂಘ, ಶ್ರೀ ವಿಠ್ಠಲ ರುಕ್ಮಿಣಿ ಚಾರಿಟೆಬಲ್ ಟ್ರಸ್ಟ್** : 41ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಸಮಾಜ ಸೇವಕ ಎಸ್. ಶಂಕರರಾವ್ ಅಂಚಳಕರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪಿ.ಎ. ಮಂಜುನಾಥನ್ ಪತಂಗೆ, ಸನ್ಮಾನ : ಕು. ಪೂಜ ಮುಕುಂದ್ ಬೇಂದ್ರೆ, ಕು. ರಕ್ಷಾ ಕುತ್ನಿಕರ್, ಎಸ್. ಕಿರಣ್ ಕುತ್ನಿಕರ್, ಸ್ಥಳ: ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್‌ಷನ್ ಹಾಲ್, ವಿಜಯನಗರ 3ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ:** ವಿಶ್ವ ಸಾಹಿತಿ ಭೈರಪ್ಪ: ಅನುವಾದಕರ ಅನುಭವಗಳು ಹಾಗೂ ಆನಂದರ ಬದುಕು ಬರಹ ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ: ಸರಸ್ವತಿ ಸಮ್ಮಾನ್ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ, ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು ಮಾತನಾಡುವವರು: ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್, ಉಪಸ್ಥಿತರು: ವಿದ್ವಾಂಸರಾದ ಡಾ.ವಿಜಯಾಹರನ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ಬೆಳಗ್ಗೆ 10.30ಕ್ಕೆ

■ **ಬಸವ ಸಮಿತಿ, ಶರಣ ಸಾಹಿತ್ಯ ಪರಿಷತ್ತು, ನಗರ ಘಟಕ:** ದತ್ತಿ ಕಾರ್ಯಕ್ರಮ, ಉಪಪ್ರಾಂಶುಪಾಲ ಪಿ.ದೇವರಾಜು ಚಿಕ್ಕಳ್ಳಿ ಅವರಿಂದ ನರನು ಹರನಾಗುವ ಪರಿ ಕುರಿತು ಉಪನ್ಯಾಸ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಹಿನಕಲ್, ಸ್ಥಳ: ಬಸವ ಭವನ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ, ಜನಮನ ಪ್ರತಿಷ್ಠಾನ:** ಸರ್ಕಾರದ ಉಚಿತ ಸವಲತ್ತುಗಳು ಒಂದು ಅವಲೋಕನ, ಉದ್ಘಾಟನೆ: ಫಲಾನುಭವಿ ಮಹಿಳೆ ಶ್ರೀಮತಿ ವಸಂತಕುಮಾರಿ ಹರತಲೆ, ಅಧ್ಯಕ್ಷತೆ: ಸಾಹಿತಿ ಡಾ.ಹಿ.ಶಿ.ರಾಮಚಂದ್ರೇಗೌಡ, ವಿಷಯ ಮಂಡನೆ: ಶ್ರೀಮತಿ ಸುಮನ, ಡಾ. ಹೆಚ್.ವಿ.ವಾಸು, ಡಾ.ಪುರುಷೋತ್ತಮ ಬಿಳಿಮಲೆ, ಮುಖ್ಯ ಅತಿಥಿಗಳು: ರಾಜ್ಯ ಮುಖಂಡೆ ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬೇ.ನಾ.ವಿಜಯೇಂದ್ರಾಚಾರ್ ಅವರಿಂದ ಮಹಾಭಾರತದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀ ಜನಜಾಗರಣ ಟ್ರಸ್ಟ್ :** ಜಾನಪದ ಕಲಾವಿದೆ ಪದ್ಮಶ್ರೀ ಬಿ.ಮಂಜಮ್ಮ ಜೋಗತಿ ಅವರ ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು: ಹಿರಿಯ ಪತ್ರಕರ್ತ ಶಿವಕುಮಾರ್, ಪುಸ್ತಕದ ಲೇಖಕ ಹರ್ಷಾ ಭಟ್, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ರಾಗ ವೈಭವ :** ಸುರ್‌ಮನಿ ಅನುಪಮ ಭಗತ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಿತಾರ್ ವಾದನ, ಡಾ. ಉದಯರಾಜ್ ಕರ್ಪೂರ್–ತಬಲ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದ್ವಾನ್ ಎಸ್.ಆರ್.ವಿನಯ್ ಅವರಿಂದ ಗಾಯನ, ವಿದುಷಿ ಶ್ರುತಿ–ಪಿಟೀಲು, ವಿದ್ವಾನ್ ಸಾಯಿಶಿವು ಲಕ್ಷ್ಮೀಕೇಶವ್–ಮೃದಂಗ, ವಿದ್ವಾನ್ ತುಮಕೂರು ಶಶಿಶಂಕರ್–ಘಟಂ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6ಕ್ಕೆ.

■ **ಚಾತುರ್ಮಾಸ್ಯ ಸಮಿತಿ :** ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತ ಸ್ವಾಗತ ಸಮಾರಂಭ, ಸಾನ್ನಿಧ್ಯ : ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ಕಲ್ಕತ್ತದ ರಂಗ ತಂಡದಿಂದ ಕಸ್ಬ ಅರ್ಘ್ಯ ನಾಟಕ ಪ್ರದರ್ಶನ, ನಿರ್ದೇಶನ : ಮನೀಶ್ ಮಿತ್ರ, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಕಿರಿಯ ರೆಪರ್ಟರಿ ಕಲಾವಿದರಿಂದ ಚಂದ್ರಗಿರಿ ತೀರದಲ್ಲಿ ನಾಟಕ ಪ್ರದರ್ಶನ, ನಿರ್ದೇಶನ : ಅಮಿತ್ ಜೆ. ರೆಡ್ಡಿ, ಸಂಗೀತ : ರಾಮಚಂದ್ರ ಹಡಪದ, ರಚನೆ : ಡಾ. ಸಾರಾ ಅಬೂಬಕ್ಕರ್, ಸ್ಥಳ : ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಜೈನ ವಿದ್ವಾಂಸ ರಮೇಶ್ ಶಾಸ್ತ್ರಿ ಅವರಿಂದ ವಿಷಯ : ಗಾಥ : 726 ರಿಂದ 750 ಕುರಿತು ಉಪನ್ಯಾಸ, ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45 ರಿಂದ.

ಯಶೋಧರಪುರದಲ್ಲಿಂದು, ಹುಣಸೂರು ತಾಲೂಕು

■ **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆ:** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪದಪ ವ್ಯಕ್ತಿ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರ, ಚಾಮರಾಜನಗರ ದೀನಬಂಧು ಸಂಸ್ಥೆ ಸಂಸ್ಥಾಪಕ ಪ್ರೊ.ಜಿ.ಎಸ್.ಜಯದೇವ್ ಅವರಿಂದ ಸ್ವಾಮಿ ವಿವೇಕಾನಂದ–ಯುವಜನರು ಕುರಿತು ಉಪನ್ಯಾಸ, ಅಧ್ಯಕ್ಷತೆ: ವಿಶ್ರಾಂತ ಪ್ರಾಚಾರ್ಯ ಡಾ.ಕಾಳಚನ್ನೇಗೌಡ, ಮುಖ್ಯ ಅತಿಥಿಗಳು : ಕಾಲೇಜು ಪ್ರಾಚಾರ್ಯ ಡಾ.ವೆಂಕಟೇಶಯ್ಯ, ಸ್ಥಳ: ಯಶೋಧರಪುರ, ಹುಣಸೂರು ತಾ., ಸಂಜೆ 5ಕ್ಕೆ.



ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ಸ್ ಕ್ಲಬ್ಸ್–2015 ಮೂಲಕ ಮೈಸೂರಿನ ವಿನೋಬಾ ರಸ್ತೆಯ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಮೈಸೂರು ಲಿಟರೇಚರ್ ಫೆಸ್ಟಿವಲ್‌ಗೆ ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಸಾಂಪ್ರದಾಯಿಕ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಮೈಸೂರು ಬುಕ್ಸ್ ಕ್ಲಬ್ ಮತ್ತು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕರು ಹಾಗೂ ಟ್ರಸ್ಟಿ ಶುಭಾ ಸಂಜಯ್ ಅರಸ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಚಂದ್ರಶೇಖರ ಕಂಬಾರ, ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ.ಬಿಬೇಕ್ ದೇಬ್ರಾಯ್, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಉಪಾಧ್ಯಕ್ಷ ಸ್ಯಾಮ್ ಚೆರ್ರಿಯನ್ ಕುಂಬಕಟ್ಟು ಇದ್ದಾರೆ.

ಲಿಟರರಿ ಫೆಸ್ಟಿವಲ್‌ನಲ್ಲಿ 'ಇತಿಹಾಸ–ಪುರಾಣಗಳಿಂದ ಆಡಳಿತ ಪಾಠಗಳು' ಕುರಿತು ವಿಚಾರ ಮಂಡನೆ

ನಮ್ಮ ಇತಿಹಾಸ–ಪುರಾಣದಲ್ಲಿ ಉತ್ತಮ ಆಡಳಿತದ ಅಂಶಗಳಿವೆ

ಇವುಗಳ ಅಧ್ಯಯನದಲ್ಲಿ ಬಹುಶಿಸ್ತೀಯ ಕ್ರಮ ಅಗತ್ಯ; ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ.ಬಿಬೇಕ್ ದೇಬ್ರಾಯ್ ಅಭಿಮತ



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನ ಜ್ಯೋತಿ ಸಭಾಂಗಣದಲ್ಲಿ ಮೈಸೂರು ಲಿಟರರಿ ಫೆಸ್ಟಿವಲ್‌ನ ಅಂಗವಾಗಿ ಶನಿವಾರ ನಡೆದ ವಿಚಾರಗೋಷ್ಠಿಯಲ್ಲಿ 'ಇತಿಹಾಸ–ಪುರಾಣಗಳಿಂದ ಆಡಳಿತ ಪಾಠಗಳು' ಕುರಿತು ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ.ಬಿಬೇಕ್ ದೇಬ್ರಾಯ್ ಮಾತನಾಡಿದರು.

ಮೈಸೂರು,ಜು.1(ಪಿಎಂ)– ನಮ್ಮ ಇತಿಹಾಸ ಮತ್ತು ಪುರಾಣಗಳಲ್ಲಿ ಉತ್ತಮ ಆಡಳಿತಕ್ಕೆ ಅಗತ್ಯವಿರುವ ಮಹತ್ವದ ಸಾಕಷ್ಟು ಅಂಶಗಳಿದ್ದು, ಹಾಗಾಗಿ ಇವುಗಳ ಅಧ್ಯಯನದಲ್ಲಿ ಬಹು ಶಿಸ್ತೀಯ ಕ್ರಮ ಅಗತ್ಯವೆಂದು ಖ್ಯಾತ ಅರ್ಥಶಾಸ್ತ್ರಜ್ಞರು, ಲೇಖಕರೂ ಆದ ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ.ಬಿಬೇಕ್ ದೇಬ್ರಾಯ್ ಅಭಿಪ್ರಾಯಪಟ್ಟರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನ ಮೈಸೂರು ಲಿಟರರಿ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ವತಿಯಿಂದ ಹಮ್ಮಿಕೊಂಡಿರುವ 7ನೇ ಆವೃತ್ತಿಯ ಮೈಸೂರು ಲಿಟರರಿ ಫೆಸ್ಟಿವಲ್‌ನ ಅಂಗವಾಗಿ ಇಲ್ಲಿನ ಜ್ಯೋತಿ ಸಭಾಂಗಣದಲ್ಲಿ ಶನಿವಾರ ನಡೆದ ವಿಚಾರ ಗೋಷ್ಠಿಯಲ್ಲಿ 'ಇತಿಹಾಸ–ಪುರಾಣಗಳಿಂದ ಆಡಳಿತ ಪಾಠಗಳು' ಕುರಿತು ಅವರು ಮಾತನಾಡಿದರು.

'ಇತಿಹಾಸ' ಎಂಬುದು ಸಂಸ್ಕೃತ ಪದವಾಗಿದ್ದು, ನಮ್ಮಲ್ಲಿ ಇತಿಹಾಸವನ್ನು ಮಹಾಭಾರತ ಮತ್ತು ರಾಮಾಯಣಕ್ಕೆ ತುಲನೆ ಮಾಡಲಾಗುತ್ತದೆ. ವೇದವ್ಯಾಸರು ಮಹಾಭಾರತ ರಚನೆ ಮಾಡಿದ ನಂತರ ವೇದಗಳನ್ನು ವರ್ಗೀಕರಿಸಿದರು. ಅವುಗಳಲ್ಲಿ ಮಹಾಪುರಾಣ ಮತ್ತು ಉಪ ಪುರಾಣಗಳನ್ನು ಕಾಣಬಹುದು ಎಂದು ಹೇಳಿದರು.

ಸೂರ್ಯ ವಂಶದ ಕಥೆಯಾದ ರಾಮಾಯಣವು ಉತ್ತರದಿಂದ ದಕ್ಷಿಣಕ್ಕೆ ಸಾಗಿದರೆ, ಚಂದ್ರವಂಶದ ಕಥೆಯಾದ ಮಹಾಭಾರತವು ಪೂರ್ವ –ಪಶ್ಚಿಮದ ಮೇಲೆ ಹೆಚ್ಚಾಗಿ ಕೇಂದ್ರೀಕರಿಸುತ್ತದೆ. ಖಗೋಳ ಶಾಸ್ತ್ರದ ಲೆಕ್ಕಾಚಾರವು ಹೆಚ್ಚಾಗಿ ಬಳಲಾಗುತ್ತದೆ. ಜೊತೆಗೆ ಚಂದ್ರಮಾಸದಲ್ಲಿ ಲೆಕ್ಕ ಹಾಕಲಾಗುತ್ತದೆ. ಅಂತಹ ಖಗೋಳ ಶಾಸ್ತ್ರದ ಲೆಕ್ಕಾಚಾರಗಳನ್ನು ಮಹಾಭಾರತದಲ್ಲಿ ಕಾಣಬಹುದು ಎಂದು ಹೇಳಿದರು.

ಪುರಾಣಗಳಲ್ಲಿ ವೈಜ್ಞಾನಿಕ ದತ್ತಾಂಶಗಳಿದ್ದು, ಗಣಿತದ ಅಂಶಗಳನ್ನೂ ಕಾಣಬಹುದು. ನಮ್ಮ ಪ್ರಾಚೀನ ಗ್ರಂಥಗಳು ಜ್ಞಾನ ಮತ್ತು ಬುದ್ಧಿವಂತಿಕೆಯ ಮೂಲವಾಗಿವೆ. ಇವುಗಳ ಅಧ್ಯಯನವು ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಮಹತ್ತರ ಅಂಶ ಒದಗಿಸಲಿವೆ. ಇದೀಗ ನಮ್ಮ ದೇಶದಲ್ಲಿ ಆದರ್ಶವಾದ ಮತ್ತು ತೀವ್ರ ಸಮಾಜವಾದ ಎಂಬ ಎರಡು ತೀವ್ರ ತರವಾದ ವಾದಗಳಿವೆ. ಆದರೆ ನಾವು ಮರೆತಿರುವ ಗಮನಾರ್ಹವಾದ ಮತ್ತೊಂದು ಮಾದರಿ ಇದೆ ಎಂದು ಹೇಳಿದರು.

ನಮ್ಮಲ್ಲಿ 'ಕಲ್ಪ'ದ ಪರಿಕಲ್ಪನೆ ಇದ್ದು, ಇದು ಸೃಷ್ಟಿ ಮತ್ತು ವಿನಾಶದ ಒಂದು ಚಕ್ರವನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ಕಲ್ಪವು 4.32 ಶತಕೋಟಿ ವರ್ಷಗಳವರೆಗೆ ಇರುತ್ತವೆ. ಪ್ರತಿಯೊಂದು ಕಲ್ಪವನ್ನು 14 ಮನ್ವಂತರಗಳಾಗಿ ವಿಂಗಡಿಸಲಾಗಿದೆ. ಮನ್ವಂತರವು ಒಂದು ಅವಧಿಯಾಗಿದ್ದು, ಈ ಅವಧಿಯಲ್ಲಿ ಮನು, ಸೃಷ್ಟಿಯ ಅಧ್ಯಕ್ಷತೆ ವಹಿಸುತ್ತಾನೆ. ನಮ್ಮ ಪ್ರಸ್ತುತ ಕಲ್ಪವನ್ನು 'ಶ್ವೇತವರಾಹಕಲ್ಪ' ಎಂದು ಕರೆಯಲಾಗುತ್ತದೆ. ನಾವೀಗ 7ನೇ ಮನ್ವಂತರದಲ್ಲಿದ್ದೇವೆ ಎಂದು ವಿವರಿಸಿದರು.

'ಆಡಳಿತ'ದಲ್ಲಿದೆ ಸಮುದಾಯ ಪಾಲ್ಗೊಳ್ಳುವಿಕೆ: 'ಸರ್ಕಾರ' ಮತ್ತು 'ಆಡಳಿತ' ಈ ಎರಡರ ನಡುವೆ ವ್ಯತ್ಯಾಸವಿದೆ. ಆಡಳಿತದ ಚುಕ್ಕಾಣಿ ಹಿಡಿದವರು ನಡೆಸುವ ಕಾರ್ಯವೈಖರಿಗಳು ಹಾಗೂ ಅವರ ನಿರ್ಧಾರಗಳು 'ಸರ್ಕಾರ' ಎಂಬುದರ ವ್ಯಾಪ್ತಿಗೆ ಬರುತ್ತದೆ. ಆದರೆ 'ಆಡಳಿತ' ಎಂಬುದು ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಸೂಚಿಸುತ್ತದೆ ಎಂದರು.

'ಆಡಳಿತ' ಎಂಬುದಕ್ಕೆ ಸೂಕ್ತ ಉದಾಹರಣೆ ನೀಡುವುದಾದರೆ, ಅಂಬಾಲಾ ಜಿಲ್ಲಾ ಗೆಜೆಟಿಯರ್‌ನಲ್ಲಿ ಉಲ್ಲೇಖವಿರುವ ಅಂಶ ಎನ್ನಬಹುದು. 1883ರ ಈ ಗೆಜೆಟಿಯರ್‌ನಲ್ಲಿ ನಾಲೆಯೊಂದರ ನಿರ್ಮಾಣದಲ್ಲಿ ಸಮುದಾಯದ ಪಾತ್ರದ ಬಗ್ಗೆ ಹೇಳಲಾಗಿದೆ. ನಾಲೆಯೊಂದರ ನಿರ್ಮಾಣಕ್ಕೆ 45 ಸಾವಿರ ವೆಚ್ಚದಲ್ಲಿ ಅಂದಿನ ಸರ್ಕಾರ 20 ಸಾವಿರ ರೂ. ಭರಿಸಿದ್ದರೆ, ಸ್ಥಳೀಯ ಸಮುದಾಯವೇ 25 ಸಾವಿರ ವ್ಯಯಿಸಿದೆ. ಅಂದು ಬ್ರಿಟಿಷರು ಹೊರಡಿಸಿರುವ ಈ ಗೆಜೆಟಿಯರ್‌ನಲ್ಲಿ ಈ ಅಂಶ ಕಾಣಬಹುದು. ಜೊತೆಗೆ 1886ರಲ್ಲಿ ಗಂಗಾ ನದಿ ಶುದ್ಧೀಕರಣದಲ್ಲಿ ಜನಸಮುದಾಯ ಪಾಲ್ಗೊಂಡಿದ್ದೂ ಉತ್ತಮ ಆಡಳಿತಕ್ಕೆ ಸೂಕ್ತ ನಿದರ್ಶನವಾಗಿದೆ ಎಂದು ವಿವರಿಸಿದರು.

ಬಳಿಕ ಸಭಿಕರೊಂದಿಗೆ ಸಂವಾದ ನಡೆಸಿದ ಅವರು, ಸ್ವಾತಂತ್ರ್ಯ ನಂತರದಲ್ಲಿ ವಿವಿಧ ರಾಜ್ಯ–ಸಂಸ್ಥಾನಗಳಾಗಿ ಹರಿದು ಹಂಚಿ ಹೋಗಿದ್ದ ಭಾರತವನ್ನು ಏಕೀಕೃತಗೊಳಿಸಿ, ಇಡೀ ದೇಶವನ್ನು ಒಂದು ಕೇಂದ್ರೀಕೃತ ಸಾಮ್ರಾಜ್ಯವಾಗಿ ನಿರ್ಮಿಸಿದ ಕೀರ್ತಿ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರಿಗೆ ಸಲ್ಲುತ್ತದೆ. ಮಹಾಭಾರತದಲ್ಲಿ ಶ್ರೀಕೃಷ್ಣನು ನಡೆಸಿದ ತಂತ್ರಗಾರಿಕೆ ಮಾದರಿಯೇ ಪಟೇಲರು ಭವ್ಯ ಭಾರತದ ತಲೆ ಎತ್ತಲು ಕಾರಣಿಭೂತರಾದರು ಎಂದು ಸ್ಮರಿಸಿದರು.

> **ಶೇ.95ರಷ್ಟು ಹಸ್ತಪ್ರತಿಗಳ ಅನುವಾದ ಆಗಿಲ್ಲ...**
>
> ಭಾರತವು ಶ್ರೀಮಂತ ಹಸ್ತಪ್ರತಿ ಪರಂಪರೆ ಹೊಂದಿದೆ. ವಿವಿಧ ವಿಷಯಗಳ ಕುರಿತ ಹಸ್ತಪ್ರತಿಗಳು ನಮ್ಮಲ್ಲಿವೆ. ದೇಶದಲ್ಲಿ ಅಂದಾಜು 40 ಮಿಲಿಯನ್ ಪುರಾತನ ಹಸ್ತಪ್ರತಿಗಳಿದ್ದು, ಈ ಪೈಕಿ ಶೇ.95ರಷ್ಟು ಅನುವಾದಗೊಳ್ಳದೇ ಆಯಾಯ ಭಾಷೆಗಳಲ್ಲೇ ಉಳಿದಿವೆ. ನಾನು ಹಸ್ತಪ್ರತಿಗಳಲ್ಲಿನ ಪುರಾಣಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡುವಲ್ಲಿ ನಿರತನಾಗಿದ್ದು, ನನ್ನ ಬಳಿಯೂ 12ನೇ ಶತಮಾನದ 'ಚೋರರ ಶಾಸ್ತ್ರ' ಎಂಬ ಹಸ್ತಪ್ರತಿ ಇದ್ದು, ಇದರಲ್ಲಿ ಕಳ್ಳತನದ ಬಗ್ಗೆ ಬೆಳಕು ಚೆಲ್ಲಲಾಗಿದೆ. –ಡಾ.ಬಿಬೇಕ್ ದೇಬ್ರಾಯ್

ಕಲ್ಲು ಹೃದಯವನ್ನೂ ಕರಗಿಸಿದ 'ಅಯೋಧ್ಯಾ ಕಾಂಡ' ಪ್ರಸಂಗ!





ಮೈಸೂರು, ಜು.1(ಎಸ್‌ಬಿಡಿ)– ಮೈಸೂರು ಸಾಹಿತ್ಯೋತ್ಸವ ಪ್ರದರ್ಶನಗೊಂಡ 'ಅಯೋಧ್ಯಾ ಕಾಂಡ' ಸಂಗೀತ ನಾಟಕ ಪ್ರೇಕ್ಷಕರ ಮನಸೂರೆಗೊಂಡಿತು.

ಹಿರಿಯ ರಂಗಕರ್ಮಿ ಪ್ರಸನ್ನ ಹೆಗ್ಗೋಡು ಅವರ ರಚನೆ ಹಾಗೂ ನಿರ್ದೇಶನದಲ್ಲಿ ಅವರೇ ಕಟ್ಟಿರುವ 'ನವೋದಯ' ರಂಗ ತಂಡ ಗಾರ್ಡೇನಿಯಾ ವೇದಿಕೆಯಲ್ಲಿ 'ಅಯೋಧ್ಯಾ ಕಾಂಡ' ನಾಟಕವನ್ನು ಮನೋಜ್ಞವಾಗಿ ಪ್ರದರ್ಶಿಸಿತು. ಸುಮಾರು ಒಂದೂಮುಕ್ಕಾಲು ಗಂಟೆ ಪ್ರೇಕ್ಷಕರು ಅತ್ತಿತ್ತ ಕದಲದಂತೆ ಹಿಡಿದಿಟ್ಟುಕೊಂಡಿತ್ತು. ಪ್ರತಿಯೊಬ್ಬ ಕಲಾವಿದರೂ ಪಾತ್ರಗಳ ಪರಕಾಯ ಪ್ರವೇಶ ಮಾಡಿ, ರಾಮಾಯಣದ ಒಂದು ಭಾಗವನ್ನು ಕಣ್ಣಿಗೆ ಕಟ್ಟಿದರು. ಜಿದ್ದಿಗೆ ಬಿದ್ದವರಂತೆ ಅಭಿನಯ ನೈಪುಣ್ಯತೆ ಪ್ರದರ್ಶಿಸಿ ರಂಗ ರಸದೌತಣ ನೀಡಿದರು. ವಾಲ್ಮೀಕಿ ರಾಮಾಯಣದ ಒಂದು ಕಾಂಡವನ್ನು ವಿಶೇಷವಾಗಿ ಪ್ರಸ್ತುತಪಡಿಸಿದ ಕಲಾ ತಂಡವನ್ನು ಪ್ರೇಕ್ಷಕರು ಪ್ರಶಂಸಿಸಿದರು. ಎಲ್ಲರೂ ಎದ್ದು ನಿಂತು ಚಪ್ಪಾಳೆ ಮಳೆಗರೆಯುವ ಮೂಲಕ ಕಲೆಗೆ ಗೌರವ ಸಮರ್ಪಿಸಿದರು.

'ಸೀತಾ ರಾಮ, ಹೋ... ರಾಮ, ಸಭ್ಯರನ್ನಾಗಿಸು, ಮನುಷ್ಯರನ್ನಾಗಿಸು, ಸಹಿಷ್ಣುಗಳನ್ನಾಗಿಸು...' ಹೀಗೆ ರಾಮ ಸ್ಮರಣೆಯ ಗೀತೆಯೊಂದಿಗೆ ಆರಂಭವಾಗುವ 'ಅಯೋಧ್ಯಾ ಕಾಂಡ', ಭಾಗವತರ ಪಾತ್ರದ ಮೂಲಕ ಹಿನ್ನೋಟವಾಗಿ ಪ್ರಸ್ತುತಗೊಳ್ಳುತ್ತದೆ. ರಾಮನ ಪಟ್ಟಾಭಿಷೇಕಕ್ಕೆ ಅಯೋಧ್ಯೆ ಸಜ್ಜಾಗುತ್ತಿರುವುದನ್ನು ಮನಗಂಡ ಮಂಥರೆ, ಕೈಕೇಯಿ ಮನಕೆಡಿಸುತ್ತಾಳೆ. ಪರಿಣಾಮ ಕೈಕೇಯಿ ಹಾಗೂ ದಶರಥನ ನಡುವೆ ಕಲಹ ಏರ್ಪಡುತ್ತದೆ. ಕಡೆಗೆ ರಾಮ, ಸೀತೆ ಹಾಗೂ ಲಕ್ಷ್ಮಣನೊಂದಿಗೆ ವನವಾಸಕ್ಕೆ ಹೋದ ಕೊರಗಿನಲ್ಲೇ ದಶರಥ ಕೊನೆಯುಸಿರೆಳೆಯುತ್ತಾನೆ. ಬದುಕಿದರೆ ಬದುಕಬೇಕು ಸೀತಾ ರಾಮರಂತೆ. ಬದುಕಿ ಕಲಿಯೋಣ, ಕಲಿತು ಬದುಕೋಣ. ಬನ್ನಿ ಬನ್ನಿ ಹೋಗಿ ಬನ್ನಿ...' ಸಾಲುಗಳೊಂದಿಗೆ ನಾಟಕಕ್ಕೆ ತೆರೆ ಬೀಳುತ್ತದೆ. ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಿಗಿಂತ 'ಅಯೋಧ್ಯಾ ಕಾಂಡ'ದಲ್ಲಿನ ಸಂಭಾಷಣೆ ಶೈಲಿ ವಿಭಿನ್ನವಾಗಿದೆ. ದಶರಥ, ಮಂಥರೆ ಪಾತ್ರಧಾರಿಗಳು ಹಾಸ್ಯಮಯವಾಗಿ ಸಂಭಾಷಿಸುತ್ತಾರೆ. ಅದರಲ್ಲೂ ಮಂಥರೆಯದ್ದು ಸಂಪೂರ್ಣವಾಗಿ ಗ್ರಾಮೀಣ ಸೊಗಡಿನ ಭಾಷೆ. ರಾಮನ ಪಟ್ಟಾಭಿಷೇಕದ ಸಿದ್ಧತೆ ತಿಳಿದುಕೊಂಡು ಅದನ್ನು ಕೈಕೇಯಿಯ ತಲೆಗೆ ತುಂಬಿದ ಮಂಥರೆಯ ನೈಪುಣ್ಯತೆ ಬೆರಗಾಗಿಸುತ್ತದೆ. ಮಂಥರೆಯ ಮಾತು ನಂಬಿದ ಕೈಕೇಯಿ, ದಶರಥನ ವಿರುದ್ಧ ಕೆಂಡಾಮಂಡಲವಾಗುವುದು, ಪುತ್ರ ಭರತನ ಮೇಲಿನ ಪ್ರೀತಿ, ರಾಮನಿಗೆ ಪಟ್ಟಾಭಿಷೇಕವಾದರೆ ಭರತ ಉಳಿಯುವುದಿಲ್ಲ ಎಂಬ ಆತಂಕ ಭಾವ ಕಣ್ಣಿಗೆ ಕಟ್ಟುತ್ತದೆ. ಭರತನಿಗೆ ಪಟ್ಟಾಭಿಷೇಕವಾಗಬೇಕು ಹಾಗೂ ರಾಮ ವನವಾಸಕ್ಕೆ ಹೋಗಬೇಕೆಂದು ಕೈಕೇಯಿ ಪಟ್ಟು ಹಿಡಿದಾಗ ದಶರಥ ವಿಲವಿಲ ಒದ್ದಾಡುತ್ತಾನೆ. ಇದನ್ನು ಬಿಟ್ಟು ಬೇರೆ ವರ ಕೇಳು ಎಂದು ಅಂಗಲಾಚುತ್ತಾನೆ. ಆದರೂ ಒಪ್ಪದಿದ್ದಾಗ ಕೈಮಾಡಲು ಮುಂದಾಗುತ್ತಾನೆ. ಕಡೆಗೆ ತಾನೇ ಕುಸಿದು ಬೀಳುತ್ತಾನೆ. ಈ ದೃಶ್ಯ ಪ್ರಸ್ತುತ ಸಮಾಜದಲ್ಲಾಗುವ ಪತಿ–ಪತ್ನಿ ಕಲಹದಂತೆ ಕಂಡುಬರುತ್ತದೆ. ತಂದೆಯ ಸಾವಿನ ಕನಸು ಕಾಣುವ ಭರತನ ಚಡಪಡಿಕೆ, ಕಡೆಗೆ ರಾಮನ ಯೋಚನೆಯಲ್ಲೇ ದಶರಥ ನರಳಿ ನರಳಿ ಕೊನೆಯುಸಿರೆಳೆಯುವ ಕ್ಷಣ, ಹೀಗೆ ಪ್ರತಿಯೊಂದು ದೃಶ್ಯವೂ ರಂಗಾಸಕ್ತರ ಮನಸ್ಸಿಗೆ ನಾಟುವಂತಿತ್ತು. ಕಲಾವಿದರಾದ ಪ್ರದೀಪ್ ಚಂದ್ರ ಕೊತ್ವಾಡಿ, ಪದ್ಮಶ್ರೀ, ರಾಜಲಕ್ಷ್ಮಿ, ಅನುಷ್ ಶೆಟ್ಟಿ, ಮುನ್ನ ಹಾಗೂ ಯದುಶ್ರೇಷ್ಠ ಪಾತ್ರಗಳ ಪರಕಾಯ ಪ್ರವೇಶಿಸಿ ಅಭಿನಯಿಸಿದರು. ಅನುಷ್ ಶೆಟ್ಟಿ ಅವರ ಸಂಗೀತ ನಾಟಕದ ದೃಶ್ಯಗಳಿಗೆ ಜೀವ ತುಂಬಿತ್ತು. ಕೆ.ಆರ್.ನಂದಿನಿ ಅವರ ವಸ್ತ್ರಾಲಂಕಾರ ಹಾಗೂ ಬಿ.ಎಂ. ರಾಮಚಂದ್ರ ಅವರ ಪ್ರಸಾದನದ ಸಹಕಾರ ನಾಟಕದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಸಂಭಾಷಣೆ ಹಾಗೂ ಸಂಗೀತ ಜೊತೆ ಜೊತೆಗೆ ಸಾಗುವ 'ಅಯೋಧ್ಯಾ ಕಾಂಡ' ನಾಟಕವನ್ನು ಪ್ರೇಕ್ಷಕರು ಆಸ್ವಾದಿಸಿ, ಮೆಚ್ಚಿದರು.

ಮಕ್ಕಳನ್ನು ಜಂಕ್‌ಫುಡ್‌ನಿಂದ ದೂರವಿರಿಸಿ; ಆರೋಗ್ಯವಂತರನ್ನಾಗಿಸಿ

ಮೈಸೂರು ಸಾಹಿತ್ಯೋತ್ಸವ 2023ರಲ್ಲಿ ವ್ಯಾಯಾಮ ವಿಜ್ಞಾನ ತಜ್ಞೆ ರುಜುತಾ ದಿವೇಕರ್ ಕಿವಿಮಾತು



ಪೋಷಣೆ ಮತ್ತು ವ್ಯಾಯಾಮ ವಿಜ್ಞಾನ ತಜ್ಞೆ ರುಜುತಾ ದಿವೇಕರ್ ಮಾತನಾಡಿದರು. ಇವರೊಂದಿಗೆ ಲೇಖಕಿ ಯಾಮಿನಿ ಮುತ್ತಣ್ಣ ಸಂವಾದ–ಪ್ರಶ್ನೋತ್ತರ ನಡೆಸಿಕೊಟ್ಟರು.

ಮೈಸೂರು, ಜು.1(ಎಸ್‌ಪಿಎನ್) – ಮಕ್ಕಳ ಬೆಳವಣಿಗೆ, ಆರೋಗ್ಯದ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಆಹಾರ ನೀಡಬೇಕು. ಆದರೆ, ಮಾರುಕಟ್ಟೆಯಲ್ಲಿ ಸಿಗುವ ಜಂಕ್‌ಫುಡ್‌ಗಳ ಸೇವನೆಗೆ ಪ್ರೋತ್ಸಾಹಿಸುವುದು ತರವಲ್ಲ ಎಂದು ವ್ಯಾಯಾಮ ವಿಜ್ಞಾನ ತಜ್ಞೆ ರುಜುತಾ ದಿವೇಕರ್ ಅಭಿಪ್ರಾಯಪಟ್ಟರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ 7ನೇ ಮೈಸೂರು ಸಾಹಿತ್ಯೋತ್ಸವ –2023ರ ನಾಲ್ಕನೇ ವಿಚಾರ ಗೋಷ್ಠಿಯಲ್ಲಿ 'ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತಾ ಅನ್ನಪೂರ್ಣೇಶ್ವರಿ' ವಿಷಯ ಕುರಿತು ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಜಂಕ್‌ಫುಡ್ ಸೇವನೆ ಹೆಚ್ಚಾಗಿದೆ. ಬೇರೆಬೇರೆ ಕಾರಣಗಳಿಗಾಗಿ ಪೋಷಕರು ಕೂಡ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಇದು ಮಗುವಿನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಸಾಧ್ಯವಾದಷ್ಟು ದೇಸಿ ಆಹಾರಗಳಿಗೆ ಒತ್ತು ನೀಡಿ, ಮಾರುಕಟ್ಟೆಯಲ್ಲಿ ಸಿಗುವ ಜಂಕ್‌ಫುಡ್‌ಗಳ ಸೇವನೆಗೆ ಕಡಿವಾಣ ಹಾಕಬೇಕು ಎಂದು ಸಲಹೆ ನೀಡಿದರು.

ಮನೆಯಲ್ಲಿ ತಯಾರಿಸಿದ ಆಹಾರ ಸೇವನೆಯಿಂದ ಆರೋಗ್ಯವಂತ ಕುಟುಂಬ ಕಾಣಲು ಸಾಧ್ಯ. ಮನೆಯಲ್ಲಿ ಶುದ್ಧೀಕರಿಸಿ, ಬೇಯಿಸಿದ ಆಹಾರ ಸೇವನೆ ಆರೋಗ್ಯಕರ ಎಂದು ಕಿವಿಮಾತು ಹೇಳಿದರು.

ಸೆಲಬ್ರಿಟಿಗಳ ರೀತಿ ಕಾಣುವ ಹಂಬಲ: ಯುವ ಜನಾಂಗ ಸಿನಿಮಾ ಹೀರೋ–ಹೀರೋಯಿನ್‌ಗಳನ್ನು ನೋಡಿ, ಅವರಂತೆ ಕಾಣಬೇಕು ಎಂದು ಹಂಬಲಿಸುತ್ತಾರೆ. ಆ ರೀತಿ ಕಾಣಲು ದಿನನಿತ್ಯ ಅವರು ಅನುಸರಿಸುವ ಕಟ್ಟುಪಾಡುಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಿದೆಯೇ? ಹೆಚ್ಚಿನ ಯುವತಿಯರು ತೂಕ ಇಳಿಸಲು ಆಹಾರವನ್ನು ತ್ಯಜಿಸುತ್ತಾರೆ. ಇದು ಸರಿಯಾದ ಮಾರ್ಗವಲ್ಲ. ಪರಿಣಾಮಕಾರಿಯಾಗಿ ತೂಕ ಕಡಿಮೆ ಮಾಡಲು ಅದಕ್ಕೆ ತಕ್ಕಂತಹ ವ್ಯಾಯಾಮ ಮಾಡಿ ದೇಹವನ್ನು ದಂಡಿಸಬೇಕು. ಯೋಗಾಭ್ಯಾಸ ಇದಕ್ಕೆ ಉತ್ತಮ ಮಾರ್ಗ ಎಂದು ಸಲಹೆ ನೀಡಿದರು.

ಪ್ರತಿಯೊಬ್ಬರ ಮನೆಯಲ್ಲೂ ಅಕ್ಕಿಯನ್ನು ಉಪಯೋಗಿಸುತ್ತಾರೆ. ನನ್ನ ಪ್ರಕಾರ ಅಕ್ಕಿ ಚೆನ್ನಾಗಿರುತ್ತದೆ. ಅಕ್ಕಿ, ಬೇಳೆ ಮತ್ತು ತುಪ್ಪದಂತಹ ಸರಳವಾದ ಆಹಾರವು ಕೂದಲಿನ ಗುಣಮಟ್ಟವನ್ನು ಸುಧಾರಿಸುತ್ತದೆ. ತೆಂಗಿನ ಕಾಯಿ ಸೇವನೆ ಚರ್ಮ ಮತ್ತು ಕೂದಲು ಬೆಳವಣಿಗೆಗೆ ಉತ್ತಮವಾದ ಆಹಾರ. ಒಟ್ಟಾರೆ ಮನುಷ್ಯನ ಆರೋಗ್ಯ ಉತ್ತಮವಾಗಿಟ್ಟುಕೊಳ್ಳಲು ತಜ್ಞರ ಸಲಹೆ ಇಲ್ಲವೇ ಪುಸ್ತಕಗಳ ಸಹಾಯ ಪಡೆಯಬೇಕು ಎಂದು ಕಿವಿಮಾತು ಹೇಳಿದರು. ಪ್ರತಿಯೊಬ್ಬರ ದಿನಚರಿ ನಿಗದಿತ ಸಮಯದಲ್ಲಿ ಆಗಬೇಕು. ಪ್ರತಿನಿತ್ಯ ಬೆಳಗ್ಗೆ ನೀವು ರೂಢಿಸಿಕೊಂಡಿರುವ ಆಹಾರ ಪದ್ಧತಿಯನ್ನು ಸೇವಿಸಿ, ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ನೈಸರ್ಗಿಕವಲ್ಲದ ಆಹಾರ ಸಾಮಗ್ರಿಗಳಿಂದ ದೂರವಿದ್ದು, ಮಕ್ಕಳಿಗೂ ಇದರ ಸೇವನೆಯಿಂದ ದೂರವಿರಿಸಿ, ಒಂದು ದಿನಕ್ಕೆ ತಮ್ಮ ದೇಹಕ್ಕೆ ಬೇಕಾಗುವಷ್ಟು ಪ್ರಮಾಣದ ನೀರನ್ನು ಸೇವನೆ ಮಾಡಬೇಕು. ನಿಮ್ಮ ಅಡುಗೆ ಮನೆಯಲ್ಲಿ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ, ಕಬ್ಬಿಣದ ಕಡಾಯಿಗಳನ್ನು ಅಡುಗೆ ಮಾಡಲು ಹೆಚ್ಚು ಬಳಕೆ ಮಾಡಬೇಕು ಎಂದು ಸಲಹೆ ನೀಡಿದರು. ಈ ವೇಳೆ ಲೇಖಕಿ ಯಾಮಿನಿ ಮುತ್ತಣ್ಣ ಸಂವಾದ–ಪ್ರಶ್ನೋತ್ತರ ನಡೆಸಿಕೊಟ್ಟರು.

ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ 9 ಸಾವಿರ ಸಿಬ್ಬಂದಿ ನೇಮಕ



ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ ಸುಮಾರು 9,000 ಸಿಬ್ಬಂದಿಗಳನ್ನು ಶೀಘ್ರದಲ್ಲಿಯೇ ನೇಮಕ ಮಾಡಿಕೊಳ್ಳಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬಿಎಂಟಿಸಿಯ 50 ಹೊಸ ಬೊಲೆರೊ ಜೀಪ್‌ಗಳು ಮತ್ತು ತರಬೇತಿ ವಾಹನಗಳಿಗೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಎಸ್‌ಆರ್‌ಟಿಸಿಯಲ್ಲಿ 3,745 ಚಾಲನಾ ಸಿಬ್ಬಂದಿಗಳು ಹಾಗೂ 726 ತಾಂತ್ರಿಕ ಸಿಬ್ಬಂದಿಗಳ ನೇಮಕಾತಿಗೆ ಈಗಾಗಲೇ ಅರ್ಜಿ ಕರೆಯಲಾಗಿದ್ದು, ಜಾಹೀರಾತು ಪ್ರಕ್ರಿಯೆಯನ್ನು ಮುಂದುವರೆಸಿ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಜೊತೆಗೆ ಹೊಸದಾಗಿ 1,433 ಚಾಲನಾ ಸಿಬ್ಬಂದಿಗಳ ಮತ್ತು 2,738 ತಾಂತ್ರಿಕ ಸಿಬ್ಬಂದಿಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಸರ್ಕಾರದಿಂದ ಅನುಮತಿ ಪಡೆಯಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಇದಲ್ಲದೆ, ನಿಗಮಗಳಿಗೆ 4,000 ಬಸ್‌ಗಳನ್ನು ಖರೀದಿಸಲಾಗುವುದು. ಸಾರಿಗೆ ನಿಗಮಗಳು ಪ್ರಸ್ತುತ 24,000 ಬಸ್‌ಗಳನ್ನು ಹೊಂದಿದ್ದು, ಜನಸಂಖ್ಯೆ ಅನುಗುಣವಾಗಿ ಇನ್ನೂ 10,000ರಿಂದ 12,000 ಬಸ್‌ಗಳ ಅಗತ್ಯವಿದೆ. ಕೆಕೆಆರ್‌ಟಿಸಿಗೆ 150 ಎಲೆಕ್ಟ್ರಿಕ್ ಬಸ್‌ಗಳು ಸೇರಿದಂತೆ 706 ಬಸ್‌ಗಳನ್ನು ಖರೀದಿಸಲು ಚಿಂತನೆ ನಡೆಸಲಾಗಿದ್ದು, ಎನ್‌ಡಬ್ಲ್ಯುಕೆಆರ್‌ಟಿಸಿಗೆ ಜಿಸಿಸಿ ಆಧಾರದ ಮೇಲೆ 450 ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲು ಅನುಮತಿ ನೀಡಲಾಗಿದೆ. ಇದಕ್ಕಾಗಿ 24 ಇತರೆ ಬಸ್‌ಗಳನ್ನು ಖರೀದಿಸಲಾಗುತ್ತದೆ. "ಪ್ರೀಮಿಯರ್ ಕೋಚ್‌ಗಳ ಹೆಚ್ಚುವರಿ ಅವಶ್ಯಕತೆಗಳನ್ನು ಪೂರೈಸಲು ಮತ್ತು ಖಾಸಗಿ ನಿರ್ವಾಹಕರಿಗೆ ಪೈಪೋಟಿ ನೀಡಲು, 44 ನಾನ್ ಎಸಿ ಸ್ಲೀಪರ್ ಬಸ್‌ಗಳು ಮತ್ತು 4 ಎಸಿ ಸ್ಲೀಪರ್ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಫ್ಲೀಟ್‌ಗೆ ಸೇರ್ಪಡೆಗೊಳಿಸಲಾಗುವುದು ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ಕಂಪ್ಯೂಟರ್ ಸರಿಯಾಗಿ ಕೆಲಸ ಮಾಡ್ತಿಲ್ಲ

ಗಂಡ : ಲೇ ಅದು ಕಂಪ್ಯೂಟರ್ ! ಗಂಡ ಅಲ್ಲ!!

ಮೈಸೂರು ಮಿತ್ರ

ಭಾನುವಾರ, 2 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇಡೀ ಮಾನವ ಕುಲ ಕೋಟಿಗೆ ಅನುಕಂಪ, ಪ್ರೀತಿ ತೋರಿಸುವುದು ನಿಜವಾದ ಧರ್ಮ

–ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಳೋರ್‌ಗೊಂದು ಮಾತು, ಬಾಳೆಗೊಂದ್ ಗೊನೆ

ನಿಮ್ಮ ಪತ್ರಗಳು

ತಾಲೂಕು ಆಡಳಿತ ಕಚೇರಿಯಲ್ಲಿ ಸ್ವಚ್ಛತೆ ಕಾಪಾಡಿ



ಮಾನ್ಯರೆ,

ಚಾಮರಾಜನಗರದ ತಾಲೂಕು ಆಡಳಿತ ಕಚೇರಿಗೆ ಸರ್ಕಾರಿ ಸೌಲಭ್ಯ ಮತ್ತು ವಿವಿಧ ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕಾಗಿ ಸಾರ್ವಜನಿಕರು ಬರುತ್ತಾರೆ. ತಾಲೂಕು ಆಡಳಿತ ಕಚೇರಿಯಲ್ಲಿರುವ ಶೌಚಾಲಯವು ಶುಚಿ ಇಲ್ಲದೆ, ಅವ್ಯವಸ್ಥೆಯಿಂದ ಕೂಡಿದ್ದು, ಕೆಟ್ಟ ವಾಸನೆ ಬರುತ್ತಿದೆ. ನಾಯಿಗಳ ತಂಗುದಾಣವಾಗಿದೆ. ಆಡಳಿತ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯತೆ ಇದಕ್ಕೆ ಕಾರಣವಾಗಿದೆ ಎನ್ನಲಾಗಿದೆ. ಕೂಡಲೇ ಶೌಚಾಲಯವನ್ನು ಶುದ್ಧಿಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬರುವಂತೆ ಕ್ರಮ ಕೈಗೊಂಡು ಮತ್ತು ಕಚೇರಿಯಲ್ಲಿ ಸ್ವಚ್ಛತೆಯೊಂದಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಅನುಕೂಲ ಮಾಡಿಕೊಡಬೇಕು ಎಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಭಾರತೀಯ ರೈಲ್ವೆ ಕರ್ನಾಟಕ ಗಡಿ ಭಾಗದ ಕಡೆ ಗಮನಹರಿಸಲಿ

ಮಾನ್ಯರೆ,

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಬಂದಾಗಿನಿಂದ ಒಂದಿಲ್ಲೊಂದು ರೈಲ್ವೆ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ತಂದು ದೇಶದ ಇತಿಹಾಸದಲ್ಲೇ ದಾಖಲೆ ಸೃಷ್ಟಿಸಿರುವುದು ತಿಳಿದ ವಿಷಯವೇ ಸರಿ. ನಮ್ಮ ಕರ್ನಾಟಕ ಭಾಗದ ಗಡಿನಾಡು ಪ್ರದೇಶದಲ್ಲಿ ಬರುವ ಚಾಮರಾಜನಗರ ಜಿಲ್ಲೆ ವಿಶಿಷ್ಟ ರೀತಿಯಿಂದ ವೈವಿಧ್ಯತೆಯನ್ನು ಪಡೆದಿದ್ದು ತಮಿಳುನಾಡು, ಕೇರಳ ರಾಜ್ಯವನ್ನು ಸಂಪರ್ಕಿಸುವ ಜಿಲ್ಲೆಯಾಗಿದೆ. ಒಂದು ರೀತಿಯಲ್ಲಿ ಹೇಳುವುದಾದರೆ ಚಾಮರಾಜನಗರ ಜಿಲ್ಲೆಯಿಂದ ಮೆಟ್ಟುಪಾಳ್ಯಂ ಮತ್ತು ಗುಂಡ್ಲುಪೇಟೆಯಿಂದ ಸುಲ್ತಾನ್ ಬತೇರಿವರೆಗೂ ರೈಲ್ವೆ ಸಂಪರ್ಕಿಸಿದರೆ ಇವೆರಡು ರಾಜ್ಯಕ್ಕೂ ಹಾಗೂ ರೈಲ್ವೆ ಇಲಾಖೆಗೂ ಹೆಚ್ಚು ಲಾಭದಾಯಕವಾಗುವುದರಲ್ಲಿ ಸಂಶಯವಿಲ್ಲ. ಈ ಜಿಲ್ಲೆ ವ್ಯಾಪಾರ, ವಹಿವಾಟುಗಳು ಹೆಚ್ಚಾಗಿ ರಿಯಲ್ ಎಸ್ಟೇಟ್, ಕೈಗಾರಿಕೆ, ಪ್ರವಾಸೋದ್ಯಮ, ಮೂರೂ ರಾಜ್ಯದ ಬಂಡವಾಳ ಹೂಡಿಕೆದಾರರ ಉದ್ಭವ ಎಲ್ಲಾ ಜಿಲ್ಲೆಗಿಂತಲೂ ಮುಂಚೂಣಿಯಲ್ಲಿರಬಹುದಾದ ಎಲ್ಲಾ ಸಾಧ್ಯತೆಗಳು ಇವೆ.

ಈಗಾಗಲೇ ಚಾಮರಾಜನಗರ ರೈಲ್ವೆ ಸಂಪರ್ಕ ವಿದ್ಯುದ್ದೀಕರಣಗೊಂಡಿದೆ. ಬೆಂಗಳೂರು–ಕೊಳ್ಳೇಗಾಲ–ಕನಕಪುರ–ಚಾಮರಾಜನಗರ–ಸತ್ಯಮಂಗಲ, ಮೆಟ್ಟುಪಾಳ್ಯಂ ಮತ್ತು ಚಾಮರಾಜನಗರ–ಗುಂಡ್ಲುಪೇಟೆ–ಸುಲ್ತಾನ್ ಬತೇರಿ ರೈಲ್ವೆ ಸಂಪರ್ಕಕ್ಕೆ ಚಾಲನೆ ನೀಡಬೇಕಿದೆ.

ಅರಣ್ಯ ಇಲಾಖೆಯಿಂದ ಹಸಿರು ನಿಶಾನೆ ದೊರೆಯದೆ ಈ ಮೇಲ್ಕಂಡ ಯೋಜನೆ ಮೂರು, ನಾಲ್ಕು ದಶಕಗಳಿಂದ ಸ್ಥಗಿತಗೊಂಡಿದ್ದು, ಮುನ್ನುಗ್ಗುತ್ತಿರುವ ತಂತ್ರಜ್ಞಾನದಿಂದ ಸಮುದ್ರದಾಳದಲ್ಲಿ ರಸ್ತೆ ಸಂಪರ್ಕ ಮಾಡುತ್ತಿರುವ ಮತ್ತು ಬೃಹತ್ ಟನಲ್‌ಗಳು ನಿರ್ಮಾಣ ಮಾಡುತ್ತಿರುವ ಯುಗದಲ್ಲಿ ಸೀಮಿತ ಅರಣ್ಯ ಪ್ರದೇಶದಲ್ಲಿ ವನ್ಯಮೃಗಗಳಿಗೆ ಮತ್ತು ಕಾಡಿಗೆ ಹಾನಿಯಾಗದಂತಹ ರೀತಿಯಲ್ಲಿ ಈ ಯೋಜನೆ ರೂಪಗೊಂಡರೆ ಈ ಪ್ರಯಾಣವೇ ಒಂದು ಅದ್ಭುತ ಅನುಭವ ನೀಡುವ ಜೊತೆಗೆ ಹೆಚ್ಚು ಪ್ರವಾಸಿಗರನ್ನು ಕೈಬೀಸಿ ಕರೆಯುವಂತಾಗುತ್ತದೆ ಮತ್ತು ಈ ಜಿಲ್ಲೆ ಮತ್ತಷ್ಟು ಅಭಿವೃದ್ಧಿ ಕಾಣುತ್ತದೆ.

ಈ ಬಗ್ಗೆ ಈ ಭಾಗದ ಸಂಸದರು ಮತ್ತು ಪ್ರತಾಪ್ ಸಿಂಹರಂತಹ ಉತ್ಸುಕ ಯುವ ಸಂಸದರು ಹಾಗೂ ರಾಜ್ಯ ರೈಲ್ವೆ ಇಲಾಖೆ ಮತ್ತು ಕೇಂದ್ರ ಸಚಿವರು ಪ್ರಧಾನ ಮಂತ್ರಿಗಳು ಗಮನಹರಿಸುವಂತಾಗಲಿ ಹಾಗೂ ಮುಂದಿನ ಅವಧಿಯಲ್ಲಿ ಈ ಯೋಜನೆ ಕ್ರಿಯಾಶೀಲಗೊಳ್ಳಲಿ ಎಂದು ಆಶಿಸುತ್ತೇನೆ.

–ಸಿ.ವೈ. ಶೈಲೇಂದ್ರ, ಸಂಪಿಗೆ ರಸ್ತೆ, ಚಾಮರಾಜನಗರ.

ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಯನ್ನು ಹೊಡೆದಂತೆ

ಮಾನ್ಯರೆ,

ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಲ್ಲಿ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಅನ್ನಭಾಗ್ಯ ಯೋಜನೆಯಲ್ಲಿ ಐದು ಕೆ.ಜಿ. ಅಕ್ಕಿ ಬದಲು ಜುಲೈ ತಿಂಗಳಿನಿಂದ ಬಿಪಿಎಲ್ ಕುಟುಂಬದ ಪ್ರತಿ ಸದಸ್ಯನಿಗೆ ತಲಾ 170 ರೂಪಾಯಿಗಳನ್ನು ಆ ಕುಟುಂಬದ ಯಜಮಾನನ ಖಾತೆಗೆ ಹಾಕುವುದಾಗಿ ಸರ್ಕಾರ ಘೋಷಣೆ ಮಾಡಿದೆ.

ಈಗಾಗಲೇ ಬಿಪಿಎಲ್ ಕಾರ್ಡುದಾರರು ತಮ್ಮ ಪಾಲಿನ ಹೆಚ್ಚುವರಿ ಅಕ್ಕಿಯನ್ನು ಹೋಟೆಲ್‌ಗಳಿಗೆ, ರೈಸ್ ಮಿಲ್‌ಗಳಿಗೆ ಮತ್ತು ಮಧ್ಯಮ ವರ್ಗದವರಿಗೆ ಪ್ರತಿ ಕೆ.ಜಿ ಅಕ್ಕಿಗೆ ಕೇವಲ ಹತ್ತರಿಂದ ಹದಿನೈದು ರೂಪಾಯಿಗೆ ಮಾರಾಟ ಮಾಡುತ್ತಿದ್ದರು. ಈಗ ಸರ್ಕಾರವೇ ಇದಕ್ಕಿಂತಲೂ ಹೆಚ್ಚು ಹಣ ಕೊಡುವುದು ಆರ್ಥಿಕ ನೆರವು ನೀಡುವಂತಾಗುತ್ತದೆ. ಮತ್ತು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ತಾನು ಕೊಟ್ಟ ಮಾತನ್ನು ಉಳಿಸಿಕೊಂಡಂತಾಗುತ್ತದೆ. ಇದು ಒಂದು ರೀತಿಯಲ್ಲಿ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಯನ್ನು ಹೊಡೆದಂತೆ. ದುಡ್ಡು ಕೊಟ್ಟರೂ ಅಕ್ಕಿ ಕೊಡದ ಕೇಂದ್ರ ಸರ್ಕಾರ ಬಡವರ ಹೊಟ್ಟೆಯ ಮೇಲೆ ಹೊಡೆದಂತೆ ಎಂದು ಕೇಂದ್ರ ಸರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು, ಅಕ್ಕಿ ಬದಲು ದುಡ್ಡು ಕೊಡುತ್ತಿದ್ದೇವೆಂದು ಹೇಳಿಕೊಳ್ಳಬಹುದು. ಇದು ಒಂದು ರೀತಿಯಲ್ಲಿ ಸರ್ಕಾರಕ್ಕೆ ರಾಜಕೀಯವಾಗಿ ಲಾಭವೂ ಆಗಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167


ಬಹುಮುಖಿ

ವಚನಗುಮ್ಮಟ ಡಾ.ಫ.ಗು.ಹಳಕಟ್ಟಿ

ಕರ್ನಾಟಕತ್ವವೆಂದರೆ ತನ್ನ ದೇಶದ ಸಂಸ್ಕೃತಿಯ ಅರಿವು ಮತ್ತು ಅದನ್ನು ಅರಿತು ಆಚರಿಸುವುದು. ಇಂಥ ಆಚರಣೆಯೇ ದೇಶದ ಪ್ರಗತಿಯ ಕುರುಹು. ಆದರೆ ಈಗಿನ ಕರ್ನಾಟಕಸ್ಥರು ತಮ್ಮದನ್ನು ತಾವು ಮರೆತುಬಿಟ್ಟಿರುವರು. ಕರ್ನಾಟಕವು ಪೂರ್ವಕಾಲದಿಂದಲೂ ಪ್ರಸಿದ್ಧವಾದ ನಾಡು. ಇಲ್ಲಿ ಹುಟ್ಟಿದ ಮಹಾವಿಭೂತಿಗಳು ಹಿಂದೂಧರ್ಮದ ಜ್ಞಾನಮಂದಿರದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಅವರ ಅರಿವು ನಮ್ಮಲ್ಲಿ ಸಂಪೂರ್ಣವಾಗಿ ಹಾರಿಹೋಗಿದೆ ಮತ್ತು ಈಗ ನಾವು ದುರ್ಬಲರು, ನಮ್ಮಿಂದೇನೂ ಆಗಲಾರದು ಎಂಬ ಭಾವನೆಯನ್ನು ತಾಳಿಕೊಂಡು ಹತಾಶರಾಗಿ ಉಳಿದಿದ್ದೇವೆ. ಈ ದುಸ್ಥಿತಿಯನ್ನು ತೊಲಗಿಸುವುದರಲ್ಲಿಯೇ ಕರ್ನಾಟಕತ್ವದ ಮಹತ್ವವು ಇದೆ...... ಹೀಗೆಂದು 1926ರಲ್ಲಿ ಬಳ್ಳಾರಿಯಲ್ಲಿ ನಡೆದ 12ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ 85 ವರ್ಷಗಳ ಹಿಂದೆಯೇ ಹೆಸರಾಂತ ಸಾಹಿತಿ, ಪತ್ರಕರ್ತ ಡಾ॥ ಫ.ಗು. ಹಳಕಟ್ಟಿಯವರು ನುಡಿದಿದ್ದರು. ಕನ್ನಡ ನಾಡು–ನುಡಿ, ತಾಯ್ನೆಲದ ಸ್ಥಿತಿ–ಗತಿ ಬಗ್ಗೆ ಆ ಕಾಲದಲ್ಲೇ ಅಷ್ಟೊಂದು ಕಾಳಜಿ ಹೊತ್ತು ಕನ್ನಡದ ಅಭಿವೃದ್ಧಿಯ ಕನಸುಕಂಡ ಕನ್ನಡ ಕಟ್ಟಾಳು ಅವರು. ಬರೀ ಕಾಳಜಿ ಅಥವಾ ಬರೀ ಕನಸು ಕಾಣುವುದರಿಂದ ಪ್ರಯೋಜನವಾಗಲಾರದೆಂದು ನಂಬಿದ್ದ ಅವರು ಕ್ರಿಯಾತ್ಮಕವಾಗಿ ಕಂಡ ಕನಸುಗಳಿಗೆ ಮುತುವರ್ಜಿಯಿಂದ ನೀರೆರೆದು, ಎದೆಯಲ್ಲಿದ್ದ ಆಸೆಗಳು ಬತ್ತಿಹೋಗದಂತೆ ಜೀವತುಂಬಿ ಕನ್ನಡ ಸಾರಸ್ವತಲೋಕ ಮತ್ತು ಪತ್ರಿಕಾರಂಗದ ಉಭಯ ಕ್ಷೇತ್ರಗಳಲ್ಲೂ ಅದ್ಭುತವಾದುದನ್ನೇ ಸಾಧಿಸಿ, ಅದರಲ್ಲೂ ವಚನ ಸಾಹಿತ್ಯದಲ್ಲಿ ಅತ್ಯದ್ಭುತವನ್ನು ಮಾಡಿ "ವಚನ ಪಿತಾಮಹ" ರೆನಿಸಿ ನಾಡಿಗೆ ಅಮೋಘ ಕೊಡುಗೆಗಳನ್ನಿತ್ತ ಕನ್ನಡದ ಅನರ್ಘ್ಯರತ್ನರಿವರು. ಶಿಕ್ಷಣ, ಸಾಹಿತ್ಯ, ಸಹಕಾರ, ಪತ್ರಿಕೋದ್ಯಮ, ರಾಜಕೀಯ... ಹೀಗೆ ನಾಡಿನ ಬಹುತೇಕ ಕ್ಷೇತ್ರಗಳಲ್ಲಿ ಬಹುಶ್ರುತ ಪ್ರತಿಭೆಯಾಗಿ ಹೊಳೆದ ಇವರು ವಿಶೇಷವಾಗಿ ವಿಶ್ವಸಾಹಿತ್ಯದೆತ್ತರಕ್ಕೆ ಕನ್ನಡದ ವಚನ ಸಾಹಿತ್ಯವನ್ನು ಬೆಳೆಸಿದರು. ಕನ್ನಡದ ಮ್ಯಾಕ್ಸ್‌ಮುಲ್ಲರ್ ಎಂದು ಹೊಗಳಿಸಿಕೊಂಡರು.

ಒಮ್ಮೆ ಕನ್ನಡಕಣ್ವ ಪ್ರೊ॥ ಬಿ.ಎಂ.ಶ್ರೀಕಂಠಯ್ಯನವರು ರಾಜ್ಯೋತ್ಸವ ಸಮಾರಂಭವೊಂದರ ನಿಮಿತ್ತ ಬಿಜಾಪುರಕ್ಕೆ ಹೋಗಿದ್ದರಂತೆ. ಆ ಸಂದರ್ಭದಲ್ಲಿ ಅಲ್ಲಿನ ಸಂಘಟಕರು ವಿಶ್ವವಿಖ್ಯಾತಿ ಪಡೆದಿದ್ದ ಬಿಜಾಪುರದ ಗೋಳಗುಮ್ಮಟ ನೋಡುವಂತೆ ಇವರನ್ನು ಕರೆದಾಗ ನಸುನಕ್ಕ ಬಿ.ಎಂ.ಶ್ರೀ. ಅವರು ಗೋಳಗುಮ್ಮಟಕ್ಕಿಂತ ಮುಖ್ಯವಾಗಿ ನಾನು ಇಲ್ಲಿರುವ ವಚನಗುಮ್ಮಟವನ್ನು ನೋಡಬೇಕೆಂದಾಗ, ಯಾವುದೀ ವಚನಗುಮ್ಮಟವೆಂದು ಒಂದು ಕ್ಷಣ ಸಂಘಟಕರು ತಲೆಕೆರೆದುಕೊಳ್ಳತೊಡಗಿದರಂತೆ. ಆಗ ಬಿ.ಎಂ.ಶ್ರೀ ಅವರೇ ನುಡಿದರಂತೆ ಆ ವಚನಗುಮ್ಮಟ ಬೇರ‍್ಯಾರೂ ಅಲ್ಲ ವಚನ ಬ್ರಹ್ಮರೆಂದೇ ಹೆಸರಾಗಿರುವ ಫ.ಗು. ಹಳಕಟ್ಟಿಯವರು. ಆ ಕಾಲದಲ್ಲಿ ಬಿಜಾಪುರಕ್ಕೆ ಭೇಟಿ ನೀಡಿದ ಸಾಹಿತ್ಯ ಪ್ರೇಮಿಗಳು ಸಾಮಾನ್ಯವಾಗಿ ಈ 'ವಚನ ಗುಮ್ಮಟ' ದರ್ಶನ ಮಾಡಿಯೇ ಬರುತ್ತಿದ್ದರಂತೆ.

ಹೀಗೆ ಬಿ.ಎಂ.ಶ್ರೀ ಅವರಂಥ ದಿಗ್ಗಜರಿಂದ 'ವಚನ ಗುಮ್ಮಟ'ವೆಂದು ಅಭಿಮಾನದಿಂದ ಕರೆಸಿಕೊಂಡ ಫ.ಗು. ಹಳಕಟ್ಟಿ ಹುಟ್ಟಿದ್ದು 1880ರ ಜುಲೈ 2ರಂದು ಧಾರವಾಡದಲ್ಲಿ. ತಂದೆ ಗುರುಬಸಪ್ಪ ಹಳಕಟ್ಟಿ ತಾಯಿ ದಾನಾದೇವಿ. ಇವರ ಪೂರ್ಣ ಹೆಸರು ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಎಂದಿದ್ದರೂ ಹೆಸರಾದದ್ದು ಮಾತ್ರ ಫ.ಗು. ಹಳಕಟ್ಟಿ ಎಂದೇ! ಹಳಕಟ್ಟಿ ಎಂಬುದು ಇವರ ಮನೆತನದ ಹೆಸರು. ತಂದೆ ಗುರುಬಸಪ್ಪ ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದರು. ಇಂಗ್ಲೆಂಡಿನ ಇತಿಹಾಸ, ಏಕನಾಥ ಸಾಧುಗಳ ಚರಿತೆ, ಫ್ರಾನ್ಸ್ ದೇಶದ ರಾಜ್ಯಕ್ರಾಂತಿ, ಸಿಕಂದರ ಬಾದಶಹನ ಚರಿತ್ರೆ ಮುಂತಾದ ಕೃತಿಗಳನ್ನು ರಚಿಸಿ ಆ ಕಾಲಕ್ಕೇ ಸಾಹಿತಿಗಳಾಗಿ ಸಾಕಷ್ಟು ಹೆಸರು ಗಳಿಸಿದ್ದರು. ಜೊತೆಗೆ ಆಗಿನ ಪ್ರಮುಖ ಪತ್ರಿಕೆಯಾದ "ವಾಗ್ಭೂಷಣ"ದಲ್ಲಿ ಹಲವಾರು ಲೇಖನಗಳನ್ನು ಬರೆದು ನಾಡಿನ ಗಮನ ಸೆಳೆದಿದ್ದರು. ಇಂಥವರ ಮಗ ಫ.ಗು. ಹಳಕಟ್ಟಿ ಎಂದರೆ ಕೇಳಬೇಕೆ. ಸಾಹಿತ್ಯವೆಂಬುದು ಇವರಿಗೆ ರಕ್ತಗತವಾಗಿ ಒಲಿದು ಬಂದಿತ್ತು. ಇದಕ್ಕೆ ತಕ್ಕಹಾಗೆ ಮಗ ಒಳ್ಳೆ ಸಾಹಿತಿಯಾಗಿ ಮುಂದೊಂದು ದಿನ ಕನ್ನಡ ನಾಡಿಗೆ ಕೀರ್ತಿತರಲೆಂಬ ಹೆಬ್ಬಯಕೆಯಿಂದ ಎಳೆವಯಸ್ಸಿನಲ್ಲೇ ಮಗನಿಗೆ ಪ್ರೋತ್ಸಾಹದ ಹಾಲೆರೆದಿದ್ದರು. ಹೀಗಾಗಿ ತಂದೆ ಹಾಕಿಕೊಟ್ಟ ಸನ್ಮಾರ್ಗದಲ್ಲಿ ಹೆಜ್ಜೆಗಳನ್ನೂರುತ್ತಾ ಬಂದ ಹಳಕಟ್ಟಿಯವರು ತಮ್ಮ ಹುಟ್ಟೂರು ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿ 1896ರಲ್ಲಿ ಮೆಟ್ರಿಕ್ ಮುಗಿಸಿದರು.



ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ

ನಂತರ ಮುಂದಿನ ಉನ್ನತ ಶಿಕ್ಷಣಕ್ಕಾಗಿ ಮುಂಬೈಗೆ ತೆರಳಿ ಅಲ್ಲಿನ ಸೇಂಟ್ ಝೇವಿಯರ್ ಕಾಲೇಜು ಸೇರಿದರು. ಅಲ್ಲಿ ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರು ಇವರ ಸಹಪಾಠಿಗಳಾಗಿದ್ದರು.

1901ರಲ್ಲಿ ಬಿ.ಎ. ಪದವಿ ಪಡೆದ ಹಳಕಟ್ಟಿಯವರು 1904ರಲ್ಲಿ ಕಾನೂನು ಪದವೀಧರರಾಗಿ ಬೆಳಗಾವಿಯಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರಾದರೂ ಕೆಲವು ತಿಂಗಳುಗಳಲ್ಲೇ ಕಾರಣಾಂತರಗಳಿಂದ ಬೆಳಗಾವಿಯಿಂದ ಬಿಜಾಪುರಕ್ಕೆ ವಾಸ್ತವ್ಯ ಬದಲಾಯಿಸಿದ್ದರು. ಅಲ್ಲಿಂದೀಚೆಗೆ ಬಿಜಾಪುರವನ್ನೇ ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡರು.

> ಖ್ಯಾತ ಸಾಹಿತಿ, ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಅವರ ಜನ್ಮದಿನವನ್ನು, ಜುಲೈ 2ರಂದು ಕರ್ನಾಟಕ ಸರ್ಕಾರ 'ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ'ಯಾಗಿ ಆಚರಿಸುತ್ತಿದೆ. ತನ್ನಿಮಿತ್ತ ಈ ಲೇಖನ.

ಒಂದೆಡೆ ವಕೀಲಿ ವೃತ್ತಿ, ಮತ್ತೊಂದೆಡೆ ನಾಡು–ನುಡಿಯ ಪ್ರಗತಿಗಾಗಿ ಹಲವು ಹತ್ತು ರೀತಿಯಲ್ಲಿ ದುಡಿಮೆ. ಇದು ಅವರ ನಿತ್ಯಕಾಯಕವಾಗಿತ್ತು. ಅದೇ ಸಮಯದಲ್ಲಿ ಚಿಕ್ಕೋಡಿಯ ತಮ್ಮಣ್ಣಪ್ಪನವರ ಪುತ್ರಿ ಭಾಗೀರಥಿ ದೇವಿಯೊಡನೆ ವಿವಾಹವಾಗಿ ಗೃಹಸ್ಥಾಶ್ರಮ ಪ್ರವೇಶಿಸಿದರಾದರೂ ಸಾರ್ವಜನಿಕ ಬದುಕಿನ ಸೇವಾಹಾದಿಯಿಂದ ಹಿಂದೆ ಸರಿಯದೆ ಮತ್ತಷ್ಟು ದೃಢವಾಗಿ ಮುನ್ನುಗ್ಗಿದರು. ಅಪಾರ ಕಾನೂನು ಜ್ಞಾನದಿಂದಾಗಿ ಆ ಭಾಗದ ಪ್ರಸಿದ್ಧ ವಕೀಲರಾಗಿ ರೂಪುಗೊಂಡ ಇವರು ತಮ್ಮ ಜನಪ್ರಿಯತೆಯಿಂದಲೇ 1905ರಲ್ಲಿ ಬಿಜಾಪುರ ನಗರಸಭೆಯ ಶಾಲಾ ಕಾರ್ಯನಿರ್ವಾಹಕ ಮಂಡಳಿಯ ಸಭಾಧ್ಯಕ್ಷರಾಗಿ ಮತ್ತು ಜಿಲ್ಲಾ ಗ್ರಾಮಾಂತರ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ತನ್ಮೂಲಕ ಕನ್ನಡ ಶಾಲೆಗಳ ಅಭ್ಯುದಯಕ್ಕಾಗಿ, ಗ್ರಾಮೀಣ ಜನರ ಉನ್ನತಿಗಾಗಿ ಎಂದೂ ಮರೆಯದಂಥ ಜನಸೇವೆಗೈದ ಹಿರಿಮೆ ಇವರದು. ಅಂತೆಯೇ 1923ರಲ್ಲಿ ಸರ್ಕಾರಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡರಲ್ಲದೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿಯೂ ಆಯ್ಕೆಗೊಂಡರು. ನಂತರದ ದಿನಗಳಲ್ಲಿ ಮುಂಬಯಿ ವಿಧಾನಪರಿಷತ್ತಿನ ಸದಸ್ಯರಾದ ಇವರು ತಮ್ಮ ಶಾಸನಬದ್ಧ ಅಧಿಕಾರದಿಂದ ಕನ್ನಡವನ್ನು ಗಟ್ಟಿಗೊಳಿಸಲು, ಪುಷ್ಟಿಗೊಳಿಸಲು, ಒಟ್ಟಾರೆ ಸಮೃದ್ಧವಾಗಿ ಕನ್ನಡ ಕಟ್ಟಲು ಪ್ರಾಮಾಣಿಕವಾಗಿ ದುಡಿದು ಅಜರಾಮರ ಕೆಲಸ ಮಾಡಿದ್ದಾರೆ.

ಕನ್ನಡವನ್ನು ಉಸಿರಾಗಿಸಿಕೊಂಡಿದ್ದಷ್ಟೇ ವಚನ ಸಾಹಿತ್ಯಕ್ಕೆ ಮಾರುಹೋಗಿದ್ದ ಹಳಕಟ್ಟಿಯವರು ಅಂದು ವಚನಸಾಹಿತ್ಯದ ಹಸ್ತಪ್ರತಿಗಳಿಗಾಗಿ, ಓಲೆಗರಿ ಗ್ರಂಥಗಳಿಗಾಗಿ ಹುಡುಕಾಡಿದ ಊರುಗಳಿಲ್ಲ, ತಡಕಾಡದ ಕೇರಿಗಳಿಲ್ಲ, ಅನ್ವೇಷಣೆಗೈದ ಆಲಯಗಳಿಲ್ಲ, ಸಂಶೋಧನೆಗೊಂಡ ಸ್ಥಳಗಳಿಲ್ಲವೆನ್ನಬಹುದು. ಒಂದು ರೀತಿಯಲ್ಲಿ ಇದಕ್ಕಾಗಿ ದೇಶ ಸುತ್ತಿದವರಿವರು. ಜಗತ್ತನ್ನೇ ಅಲೆದವರಿವರು. ಹೀಗೆ ತಿರುತಿರುಗಿ ತಾವು ತಂದು ಸಂಗ್ರಹಿಸಿದ ಹಸ್ತಪ್ರತಿರೂಪದ ವಚನರಾಶಿಯನ್ನು 1920ರಲ್ಲಿ ಬಿಜಾಪುರದಲ್ಲಿ ಪ್ರದರ್ಶಿಸಿ ಇದರ ಮೌಲ್ಯವನ್ನು ಇಂಚಿಂಚೂ ಬಿಡದಂತೆ ಎಲ್ಲರಿಗೂ ತಿಳಿಸಿದರು. ಆ ಕಾಲದಲ್ಲಿದು ಶರಣರ ನಾಡಿನಲ್ಲಿ ಭಾರೀ ಸಂಚಲನ ಉಂಟು ಮಾಡಿತ್ತು. ಆ ನಂತರ ಹಸ್ತಪ್ರತಿ ರೂಪದಲ್ಲಿದ್ದ ಈ ವಚನಸಂಪತ್ತನ್ನು ಸಂಪಾದಿಸಿ ಮುದ್ರಿಸಿ ಪುಸ್ತಕ ರೂಪದಲ್ಲಿ ಹೊರತರಲು ಮುಂದಾದ ಇವರು ಇದಕ್ಕಾಗಿ 1925ರಲ್ಲಿ ತಮ್ಮ ಸ್ವಂತ ಮನೆ ಮಾರಿ "ಹಿತಚಿಂತಕ ಮುದ್ರಣಾಲಯ"ವನ್ನು ಪ್ರಾರಂಭಿಸಿದರು. ಅಲ್ಲಿಂದ ವಚನ ಸಾಹಿತ್ಯ ಕೃತಿಗಳ ಸುರಿಮಳೆಯೇ ಶುರುವಾಯಿತು. ನಿಜಕ್ಕೂ ಆಗ ಹಳಕಟ್ಟಿಯವರಿಂದ ವಚನಕ್ರಾಂತಿಯೇ ನಡೆದಿತ್ತು. ಇವರು ಸಂಪಾದಿಸಿ ಪ್ರಕಟಿಸಿದ ಒಂದೊಂದು ವಚನ ಸಂಕಲನ ಕೃತಿಗಳೂ ಇಂದಿಗೂ ಸಾರಸ್ವತ ಲೋಕದ ಮಾಣಿಕ್ಯಗಳೇ ಆಗಿವೆ. ತಮ್ಮ ಸಂಶೋಧನೆಯ ಮೂಲಕ 250ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದ ಕೀರ್ತಿಯ ಜೊತೆಗೆ ಹರಿಹರನ 42 ರಗಳೆಗಳನ್ನು ಸಂಶೋಧಿಸಿ ಪ್ರಕಟಿಸಿದ ಸಾಧನೆ ಇವರ ಹೆಸರಿನಲ್ಲಿದೆ.

ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದ "ವಚನ ಸಾಹಿತ್ಯ ಸಾರ"ವಂತೂ ಅಪೂರ್ವ ವಚನಗಳುಳ್ಳ ಒಂದು ಅದ್ಭುತ ಕೃತಿ. ಈ ಬೃಹತ್ ಗ್ರಂಥ ಹಲವು ಸಂಪುಟಗಳಲ್ಲಿ 1923ರಿಂದ 1939ರ ಅವಧಿಯಲ್ಲಿ ಪ್ರಕಟಗೊಂಡು ವಚನಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಇವರ ಸ್ವತಂತ್ರ ಕೃತಿಗಳು ಸೇರಿದಂತೆ ಸಂಪಾದಿಸಿದ ವಚನಸಾಹಿತ್ಯ ಕೃತಿಗಳು 175ಕ್ಕೂ ಹೆಚ್ಚೆಂದರೆ ಯಾರು ಬೇಕಾದರೂ ಊಹಿಸಬಹುದು ಹಳಕಟ್ಟಿಯವರ ವಚನ ಸಾಹಿತ್ಯದ ದೈತ್ಯಶಕ್ತಿಯನ್ನು! ಶೂನ್ಯ ಸಂಪಾದನೆ, ಶಿವಾನುಭವ, ಕೃಷಿ ವಿಜ್ಞಾನ, ಪ್ರಭುದೇವರ ವಚನಗಳು, ಹರಿಹರನ ರಗಳೆ, ಪ್ರದೀಪಿಕೆ, ಶಬ್ದಕೋಶ, ಆದಿಶೆಟ್ಟಿ ಪುರಾಣ... ಮುಂತಾದವುಗಳು ಇವರ ಪ್ರಮುಖ ಕೃತಿಗಳು. ಪತ್ರಿಕೋದ್ಯಮದಲ್ಲೂ ಬಹಳ ಆಸಕ್ತಿ ಹೊಂದಿದ್ದ ಹಳಕಟ್ಟಿಯವರು 1926ರಲ್ಲಿ ಸಂಶೋಧನೆಗಾಗಿ ಮೀಸಲಾದ "ಶಿವಾನುಭವ" ಪತ್ರಿಕೆ ಪ್ರಾರಂಭಿಸಿದರು. ಇದನ್ನು ಸತತವಾಗಿ ನಡೆಸಿಕೊಂಡು ಬಂದ ಇವರು 1951ರಲ್ಲಿ ಇದರ ಬೆಳ್ಳಿಹಬ್ಬವನ್ನು ಅದ್ದೂರಿಯಾಗಿ ಆಚರಿಸಿದರು. ಹಾಗೆಯೇ 1927ರಲ್ಲಿ "ನವ ಕರ್ನಾಟಕ" ಎಂಬ ವಾರಪತ್ರಿಕೆಯನ್ನೂ ಆರಂಭಿಸಿದ್ದರು. ಈ ಎರಡೂ ಪತ್ರಿಕೆಗಳ ಸಂಪಾದಕ ಮತ್ತು ಪ್ರಕಾಶಕ ಹಾಗೂ ಮುದ್ರಕರಾಗಿ ಫ.ಗು ಹಳಕಟ್ಟಿಯವರ ಪತ್ರಿಕಾರಂಗದ ಸಾಧನೆ ಕೂಡ ಗುರುತರವಾದದ್ದೇ.

ದೂರದೃಷ್ಟಿ ವ್ಯಕ್ತಿತ್ವದ ಹಳಕಟ್ಟಿಯವರು ಸಾಹಿತ್ಯ ಮತ್ತು ಪತ್ರಿಕೋದ್ಯಮದ ಜೊತೆ ಜೊತೆಗೆ ಸಂಘಟನೆ, ಬ್ಯಾಂಕಿಂಗ್, ಕೃಷಿ, ನೇಕಾರಿಕೆ, ಸಹಕಾರಿ .....ಹೀಗೆ ಎಲ್ಲದರಲ್ಲೂ ತೊಡಗಿಸಿಕೊಂಡಿದ್ದವರು. ಇವರು 1910ರಲ್ಲಿ ಬಿಜಾಪುರ ಜಿಲ್ಲಾ ಲಿಂಗಾಯತ ವಿದ್ಯಾವರ್ಧಕ ಸಂಘ (ಬಿ.ಎಲ್.ಡಿ.ಇ.) ವನ್ನು ಮತ್ತು 1912ರಲ್ಲಿ ಶ್ರೀ ಸಿದ್ದೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕನ್ನು ಸ್ಥಾಪಿಸಿದ್ದರಲ್ಲದೆ ಗ್ರಾಮೀಣಾಭಿವೃದ್ಧಿ ಸಂಘ, ಒಕ್ಕಲುತನ ಸಹಕಾರಿ ಸಂಘ, ನೇಕಾರರ ಸಂಘ, ಹತ್ತಿ ಮಾರಾಟ ಸಂಘಗಳು ಸೇರಿದಂತೆ ಸಹಕಾರಿ ಸಂಘಗಳನ್ನು ಸಂಸ್ಥಾಪಿಸಿ ತನ್ಮೂಲಕ ಒಟ್ಟಾರೆ ಸಮಾಜಾಭಿವೃದ್ಧಿಗೆ ದುಡಿದ ಅಪರೂಪದ ವ್ಯಕ್ತಿ ಇವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಯಲ್ಲಿ ಇವರು ಮಹತ್ತರ ಪಾತ್ರ ವಹಿಸಿದ್ದರು. ಇಂಥ ಪ್ರಚಂಡ ಸಾಧಕ ಹಳಕಟ್ಟಿಯವರು 1964ರ ಜೂನ್ 27ರಂದು ನಾಡನ್ನು ಬಿಟ್ಟು ಅಗಲಿದರೂ ಇವರು ಮಾಡಿದ ಸೇವೆ, ಸಾಧನೆ, ತ್ಯಾಗ, ಕಟ್ಟಿ ಬೆಳೆಸಿದ ಸಂಸ್ಥೆಗಳು ಎಲ್ಲಕ್ಕಿಂತ ಮಿಗಿಲಾಗಿ ವಚನ ಸಾಹಿತ್ಯ ಕ್ಷೇತ್ರ ಇವರ ಹೆಸರನ್ನು ಅಜರಾಮರಗೊಳಿಸಿವೆ. ಇವರು ಸಂಸ್ಥಾಪಿಸಿದ್ದ ಬಿ.ಎಲ್.ಡಿ.ಇ. ಸಂಸ್ಥೆ ಇಂದು ಮೂವತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹಳಕಟ್ಟಿಯವರ ಸಮಗ್ರ ಸಾಹಿತ್ಯವನ್ನು ಹದಿನೈದು ಸಂಪುಟಗಳಲ್ಲಿ ಪ್ರಕಟಿಸಿದೆ.

1920ರಲ್ಲಿ ಮುಂಬಯಿಯ ವಿಧಾನಪರಿಷತ್ತಿನ ಸದಸ್ಯತ್ವ, 1926ರಲ್ಲಿ ಬಳ್ಳಾರಿಯಲ್ಲಿ ನಡೆದ 12ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1928ರಲ್ಲಿ ಜರುಗಿದ 3ನೇ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ, 1931ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯತ್ವ 1933ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷತೆ, 1956ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಗೌರವ ಡಾಕ್ಟರೇಟ್ ಮುಂತಾದವು ಇವರ ಸೇವೆಗೆ ಸಂದ ಗೌರವ ಪುರಸ್ಕಾರಗಳು. ಅಂತೆಯೇ ಫ.ಗು. ಹಳಕಟ್ಟಿಯವರಿಗೆ ಅಂದಿನ ಬ್ರಿಟಿಷ್ ಸರ್ಕಾರದಿಂದ ರಾವ್‌ಬಹದ್ದೂರ್ ಮತ್ತು ರಾವ್ ಸಾಹೇಬ ಪ್ರಶಸ್ತಿಗಳು ಹಾಗೂ ವಚನ ಸಾಹಿತ್ಯ ಪ್ರವೀಣ ಪ್ರಶಸ್ತಿಗಳು ದೊರೆತಿದ್ದು, 1962ರಲ್ಲಿ "ಮಣಿಹ" ಎಂಬ ಅಭಿನಂದನಾ ಗ್ರಂಥವನ್ನು ಇವರಿಗೆ ಅರ್ಪಿಸಿ, ಗೌರವಿಸಲಾಗಿದೆ.

ಆರೋಗ್ಯ ಕ್ಷೇತ್ರಕ್ಕೆ ರಾಜ್ಯ ಸದಾ ಆದ್ಯತೆ ನೀಡಲಿದೆ

● ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಶ್ವಾಸ ● ಸಿಕಲ್ ಸೆಲ್ ಅನಿಮೀಯಾ ಅಭಿಯಾನ ಕಾರ್ಯಕ್ರಮದಲ್ಲಿ ವರ್ಚುವಲ್ ಮೂಲಕ ಭಾಗಿ



ದಿನೇಶ್ ಗುಂಡೂರಾವ್

ಮೈಸೂರು, ಜು.1(ಎಸ್‌ಬಿಡಿ)– ರಾಜ್ಯ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ ಸಿಕಲ್ ಸೆಲ್ ಅನಿಮೀಯಾ ನಿರ್ಮೂಲನಾ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಲಾಲ್‌ಪೂರ್‌ನಲ್ಲಿ ಚಾಲನೆ ನೀಡಿದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಚಿವರು ವರ್ಚುವಲ್ ಮೂಲಕ ಮಾತನಾಡಿದರು.



ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಶನಿವಾರ ವರ್ಚುವಲ್ ಮೂಲಕ ಆಯೋಜಿಸಿದ್ದ ಸಿಕಲ್ ಸೆಲ್ ಅನಿಮೀಯಾ ನಿರ್ಮೂಲನಾ ಅಭಿಯಾನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಿದರು.

ರಾಜ್ಯ ಸರ್ಕಾರದಿಂದ ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಗಳಾಗಿದ್ದಾಗಲೇ ಸಿಕಲ್ ಸೆಲ್ ರೋಗ ನಿರ್ಮೂಲನೆಗೆ ಕಾರ್ಯಕ್ರಮ ಆಯೋಜಿಸಿದ್ದರು. ಇದೀಗ ರಾಷ್ಟ್ರಮಟ್ಟದಲ್ಲಿ ಅಭಿಯಾನ ಜಾರಿಯಾಗುತ್ತಿರುವುದು ಉತ್ತಮ ಕ್ರಮವಾಗಿದೆ ಎಂದರು.

ಬುಡಕಟ್ಟು ಜನರ ಆರೋಗ್ಯ ಸೇವೆ ಸರ್ಕಾರದ ಹೊಣೆ. ಆದಿವಾಸಿ ಜನರ ಆರೋಗ್ಯ ರಕ್ಷಣೆಗೆ ಹೆಚ್ಚಿನ ಸೌಲಭ್ಯ ನೀಡುತ್ತೇವೆ. ಸರ್ಕಾರದ ಸೌಲಭ್ಯವನ್ನು ಅರ್ಹರಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕು. ಮುಖ್ಯವಾಗಿ ಆರೋಗ್ಯ ಇಲಾಖೆ ಸಿಬ್ಬಂದಿ ತುಂಬಾ ಜಾಗ್ರತೆಯಿಂದ ಕೆಲಸ ಮಾಡಬೇಕು. ಮುಂದಿನ ದಿನಗಳಲ್ಲಿ ಆದಿವಾಸಿಗಳ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಜಿಲ್ಲೆಯಲ್ಲಿ ಬುಡಕಟ್ಟು ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೆಚ್.ಡಿ.ಕೋಟೆ, ಹುಣಸೂರು, ಸರಗೂರು, ಪಿರಿಯಾಪಟ್ಟಣ ತಾಲೂಕುಗಳಲ್ಲಿ ಹೆಚ್ಚು ಜನ ನೆಲೆಸಿದ್ದಾರೆ. ಅವರ ಆರೋಗ್ಯ ಬಗ್ಗೆ ಜಿಲ್ಲಾಡಳಿತ ಹೆಚ್ಚಿನ ಕಾಳಜಿ ವಹಿಸಲಿದೆ. ಮುಂದಿನ ದಿನಗಳಲ್ಲಿ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರದ ವತಿಯಿಂದ ಬುಡಕಟ್ಟು ಜನಾಂಗದವರ ಸಮಸ್ಯೆಗಳನ್ನು ಗುರುತಿಸಿ, ಪರಿಹಾರ ಕ್ರಮ ಕೈಗೊಳ್ಳುವುದರ ಜೊತೆಗೆ ಆರೋಗ್ಯ ಸೌಲಭ್ಯಕ್ಕೆ ಆದ್ಯತೆ ನೀಡಲಾಗುವುದು. ಈ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರು ಸಿಕಲ್ ಸೆಲ್ ಅನೀಮಿಯಾ ಸಂಬಂಧ ಜಾಗೃತಿ ಮೂಡಿಸುವಲ್ಲಿ ಸಕ್ರಿಯರಾಗಬೇಕು ಎಂದು ಸೂಚನೆ ನೀಡಿದರು.

ವೈದ್ಯಕೀಯ ಪರೀಕ್ಷೆ ಮೂಲಕ ಸಿಕಲ್ ಸೆಲ್ ರಕ್ತಹೀನತೆಯಿಂದ ಬಳಲುತ್ತಿರುವವರನ್ನು ಪತ್ತೆಹಚ್ಚಿ, ಅಂತಹವರಿಗೆ ವಿಶೇಷ ಆರೈಕೆ ಜೊತೆಗೆ ಸೂಕ್ತ ಚಿಕಿತ್ಸಾ ಕ್ರಮಗಳ ಮೂಲಕ ಕಾಯಿಲೆ ನಿವಾರಣೆ ಮಾಡುವುದು ಅಭಿಯಾನದ ಉದ್ದೇಶವಾಗಿದೆ. ಆರೋಗ್ಯ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ವಿಶೇಷ ಆರೋಗ್ಯ ಶಿಬಿರಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಸಿಕಲ್ ಸೆಲ್ ವಂಶಾವಳಿ ಖಾಯಿಲೆಯಾಗಿದ್ದು, ಇದು ಬಾಧಿಸಿದರೆ ಕೆಂಪು ರಕ್ತ ಕಣಗಳ ಅಸ್ವಸ್ಥತೆ ಉಂಟಾಗುತ್ತದೆ. ಈ ಕಾಯಿಲೆ ಇದ್ದವರಿಗೆ ಕೆಂಪು ರಕ್ತ ಕಣಗಳು ಕುಡುಗೋಲು ಆಕಾರಕ್ಕೆ ತಿರುಗಿ, ದೇಹದ ರಕ್ತದ ಸಂಚಾರಕ್ಕೆ ತೊಡಕುಂಟಾಗುತ್ತದೆ. ಬಳಿಕ ವಿವಿಧ ಆರೋಗ್ಯ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ನಿರಂತರ ನೋವು, ಸೋಂಕು, ಪಾರ್ಶ್ವವಾಯು ಕೂಡ ಸಂಭವಿಸಬಹುದು ಎಂದು ತಿಳಿಸಿದರು.

ರಾಜ್ಯದ ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯಡಿ ಈ ರೋಗದ ತಪಾಸಣೆ ನಡೆಸಲಾಗಿದೆ. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ತಾಂತ್ರಿಕ ಸಮಿತಿಯು ಈ ಕಾಯಿಲೆಯನ್ನು ಸಾರ್ವಜನಿಕ ಆರೋಗ್ಯ ಸಮಸ್ಯೆ ಎಂದು ಪರಿಗಣಿಸಿ ವಿಶೇಷ ಒತ್ತು ನೀಡಿದೆ. ತಪಾಸಣೆ, ನಿರ್ವಹಣೆ, ರೋಗ ತಡೆಗಟ್ಟುವಿಕೆ ಹಾಗೂ ಆರೋಗ್ಯ ಶಿಕ್ಷಣ ಚಟುವಟಿಕೆಗಳು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸೇರ್ಪಡೆಯಾಗಿವೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಮಹದೇವ್ ಪ್ರಸಾದ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಸಿಕಲ್ ಸೆಲ್ ಮುಕ್ತ ಗುರಿ

ಕೇಂದ್ರ ಸರ್ಕಾರ 2047ರೊಳಗೆ ಸಿಕಲ್ ಸೆಲ್ ರಕ್ತಹೀನತೆಯನ್ನು ನಿರ್ಮೂಲನೆ ಮಾಡುವ ಗುರಿ ಹೊಂದಿದೆ. ಅಭಿಯಾನದಡಿ ರಾಜ್ಯದ ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನ ಆಯ್ಕೆ ಮಾಡಲಾಗಿದೆ. ಜೇನು ಕುರುಬ, ಬೆಟ್ಟ ಕುರುಬ, ಬೇಡರ ಸಮುದಾಯದಲ್ಲಿ ಈ ಕಾಯಿಲೆ ಕಂಡುಬಂದಿದ್ದು, ಮುಂದಿನ ಎರಡು ವರ್ಷಗಳಲ್ಲಿ ತಪಾಸಣೆ ಪೂರ್ಣಗೊಳಿಸುವ ಯೋಜನೆಯಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೊಟ್ಟ ಮಾತಿನಂತೆ 'ಅನ್ನಭಾಗ್ಯ' ಕಲ್ಪಿಸಿಯೇ ತೀರುತ್ತೇವೆ...

ಅಕ್ಕಿ ಸಿಗುವವರೆಗೆ ಐದು ಕೆಜಿ ಅಕ್ಕಿಗೆ ಹಣ ನೀಡ್ತೀವಿ



ಬೆಂಗಳೂರು, ಜು. 1(ಕೆಎಂಶಿ)–ನಾವು ಜನರಿಗೆ ಕೊಟ್ಟ ಮಾತಿನಂತೆ ಅನ್ನಭಾಗ್ಯ ಯೋಜನೆ ಜಾರಿ ಮಾಡಿಯೇ ತೀರುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗ 5 ಕೆ.ಜಿ ಅಕ್ಕಿ ಹಾಗೂ ಹೆಚ್ಚುವರಿ ಅಕ್ಕಿ ಸಿಗುವವರೆಗೂ ಇನ್ನೈದು ಕೆಜಿ ಅಕ್ಕಿಗೆ ಪ್ರತಿಯಾಗಿ ಹಣ ನೀಡುತಿದ್ದೇವೆ. ಅಕ್ಕಿ ಖರೀದಿಗೆ ನಮ್ಮ ಸಚಿವರು ಎಲ್ಲಾ ಪ್ರಯತ್ನ ಮಾಡುತ್ತಿದ್ದಾರೆ. ಅಕ್ಕಿ ಸಿಗುವವರೆಗೂ ಬೇರೆ ಪಕ್ಷಗಳ ಸಲಹೆಯಂತೆ ಹಣ ನೀಡಲು ನಿರ್ಧರಿಸಿದ್ದೇವೆ. ಆರಂಭದಲ್ಲಿ ಹಣ ನೀಡಿ ಎಂದ ಬಿಜೆಪಿ ನಾಯಕರು ಈಗ ಪೂರ್ಣ ಪ್ರಮಾಣದಲ್ಲಿ ಅಕ್ಕಿ ನೀಡಿ ಎಂದು ಹೇಳು ತ್ತಿರುವ ಬಗ್ಗೆ ಕೇಳಿದಾಗ, ಇದರಿಂದ ಅವರ ಇಬ್ಬಗೆಯ ನೀತಿ ಗೊತ್ತಾಗುತ್ತಿದೆ ಎಂದರು. ಸದನದ ಒಳಗೆ ಹಾಗೂ ಹೊರಗೆ ಪ್ರತಿಭಟನೆ ಮಾಡುತ್ತೇವೆ ಎಂಬ ಬಿಜೆಪಿ ನಾಯಕರ ಹೇಳಿಕೆ ಬಗ್ಗೆ ಕೇಳಿದಾಗ, "ಬಹಳ ಸಂತೋಷ. ಪ್ರತಿಭಟನೆ ಮಾಡಬೇಕು. ನಾವು ಅವರನ್ನು ತಡೆಯುವುದಿಲ್ಲ. ಬಿಜೆಪಿಯವರು ಕೊಟ್ಟ ಮಾತು ಈಡೇರದೇ ಇರುವುದರ ಬಗ್ಗೆ ಹೋರಾಟ ಮಾಡಲು ಹೇಳಿದ್ದೇನೆ. ಅವರು ಹೋರಾಟದ ಮೂಲಕ ನಮ್ಮ ಯೋಜನೆಗೆ ಪ್ರಚಾರ ನೀಡುತ್ತಿದ್ದಾರೆ.

ಬಿಜೆಪಿ ಬಡವರ ಮೇಲೆ ಹೇಗೆ ಗದಾ ಪ್ರಹಾರ ಮಾಡುತ್ತಿದೆ. ಅಕ್ಕಿ ವಿಚಾರದಲ್ಲೂ ಅವರು ಹೇಗೆ ರಾಜಕೀಯ ಮಾಡುತ್ತಿದ್ದಾರೆ. ನಾವು ಜನರಿಗೆ ಅಕ್ಕಿ ನೀಡಲು ಎಷ್ಟು ಪ್ರಯತ್ನ ಮಾಡುತ್ತಿದ್ದೇವೆ ಎಂಬುದು ಜನರಿಗೆ ಅರ್ಥವಾಗುತ್ತಿದೆ.

ಗೋದಾಮಿನಲ್ಲಿ ಅಕ್ಕಿ ಹುಳ ಹಿಡಿಯುತ್ತಿದ್ದರೂ ಬಡವರಿಗೆ ನೀಡದೆ ರಾಜಕಾರಣ ಮಾಡುತ್ತಿದ್ದಾರೆ. ಇದೆಲ್ಲವೂ ಜನರಿಗೆ ಗೊತ್ತಿದೆ. ನಾವು ದೀರ್ಘಾವಧಿ ಪರಿಹಾರಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಕೇಂದ್ರ ನಿಗದಿ ಮಾಡಿರುವ ಮೊತ್ತಕ್ಕೆ ಅಕ್ಕಿ ಖರೀದಿಗೆ ಮುಂದಾಗಿದ್ದೇವೆ. ನಮ್ಮ ರಾಜ್ಯದಲ್ಲಿ ಅಕ್ಕಿ ಬೆಳೆದು ಈ ಮೊತ್ತಕ್ಕೆ ನೀಡಿದರೆ ಅವರಿಗೂ ಪ್ರೋತ್ಸಾಹ ನೀಡುತ್ತೇವೆ.

ಬಿಜೆಪಿ ಸಲಹೆಯಂತೆ ಅಕ್ಕಿಗೆ ಬದಲು ಹಣ: ನಮಗೆ ಕೆಲ ರಾಜ್ಯದವರು ಒಂದೆರಡು ತಿಂಗಳು ಅಕ್ಕಿ ಪೂರೈಸಲು ಮುಂದಾಗಿದ್ದರು. ನಮಗೆ ತಾತ್ಕಾಲಿಕ ಪರಿಹಾರಕ್ಕಿಂತ ಶಾಶ್ವತ ಪರಿಹಾರ ಬೇಕು. ನಾವು ಆರಂಭದಲ್ಲಿ ಅಕ್ಕಿ ನೀಡಿ ನಂತರ ಅದನ್ನು ನಿಲ್ಲಿಸುವಂತೆ ಆಗಬಾರದು. ಹೀಗಾಗಿ ಬಿಜೆಪಿ ನಾಯಕರು ಕೊಟ್ಟಿರುವ ಸಲಹೆಯಂತೆ ಈಗ ಹಣ ನೀಡಲು ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

ಕೃಷಿ, ರೈತರ ಕಲ್ಯಾಣಕ್ಕಾಗಿ ವಾರ್ಷಿಕ 6.5 ಲಕ್ಷ ಕೋಟಿ ರೂ. ವೆಚ್ಚ



ನವದೆಹಲಿ: ಕೃಷಿ ಕ್ಷೇತ್ರ ಮತ್ತು ರೈತರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ವಾರ್ಷಿಕವಾಗಿ 6.5 ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಎಂದು ಶನಿವಾರ ಹೇಳಿದ ಪ್ರಧಾನಿ ನರೇಂದ್ರ ಮೋದಿ, ಖಾದ್ಯ ತೈಲ ತಯಾರಿಕೆಯಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಲು ಸಹಕಾರಿ ಸಂಘಗಳಿಗೆ ಕರೆ ನೀಡಿದರು.

ಅಂತಾರಾಷ್ಟ್ರೀಯ ಸಹಕಾರಿ ದಿನದ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ, 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಪಿಎಂ ಕಿಸಾನ್ ಯೋಜನೆ, ಬೆಂಬಲ ಬೆಲೆ ಯೋಜನೆ ಮತ್ತು ರಸಗೊಬ್ಬರ ಸಬ್ಸಿಡಿಯಂತಹ ತಮ್ಮ ಸರ್ಕಾರ ಮಾಡಿದ ಕೆಲಸಗಳನ್ನು ಒತ್ತಿ ಹೇಳಿದರು. ಕಳೆದ ಒಂಬತ್ತು ವರ್ಷಗಳಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರ ಉತ್ಪನ್ನಗಳನ್ನು ಖರೀದಿಸಿದ್ದು, ರೂ. 15 ಲಕ್ಷ ಕೋಟಿಗೂ ಅಧಿಕ ಹಣವನ್ನು ರೈತರಿಗೆ ನೀಡಲಾಗಿದೆ. ಕಳೆದ ವರ್ಷ ರಸಗೊಬ್ಬರ ಸಬ್ಸಿಡಿಗಾಗಿ ರೂ. 10 ಲಕ್ಷ ಕೋಟಿ ಖರ್ಚು ಮಾಡಲಾಗಿದೆ ಎಂದರು.

ಬೇರೆ ರೀತಿಯಲ್ಲಿ ಹೇಳುವುದಾದರೆ, ಸರ್ಕಾರ ಕೃಷಿ ಮತ್ತು ರೈತರಿಗಾಗಿ ವರ್ಷಕ್ಕೆ ಸುಮಾರು 6.5 ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಪ್ರತಿ ವರ್ಷ ಯಾವುದಾದರೂಂದು ರೂಪದಲ್ಲಿ ಪ್ರತಿ ರೈತರಿಗೆ ಸರಾಸರಿ 50,000 ರೂ.ಗಳನ್ನು ಸರ್ಕಾರ ನೀಡುತ್ತಿದೆ. ಇದು ಮೋದಿಯವರ ಗ್ಯಾರಂಟಿ ಎಂದ ಅವರು, ತಾನು ಸರ್ಕಾರ ಮಾಡಿರುವುದನ್ನು ಹೇಳುತ್ತಿದ್ದೇನೆ ಹೊರತು ಭರವಸೆ ಅಲ್ಲ, ಕಳೆದ 4 ವರ್ಷಗಳಲ್ಲಿ, ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಡಿ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ 2.5 ಲಕ್ಷ ಕೋಟಿ ರೂಪಾಯಿಗಳನ್ನು ಕಳುಹಿಸಲಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.



ಗೃಹಸಚಿವರಾದ ನಂತರ ಮೊದಲ ಬಾರಿ ಮೈಸೂರಿಗೆ ಆಗಮಿಸಿದ್ದ ಡಾ.ಜಿ.ಪರಮೇಶ್ವರ್ ಅವರನ್ನು ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರಾದ ರಘುರಾಜೇ ಅರಸ್ ನೇತೃತ್ವದಲ್ಲಿ ಎಫ್‌ಟಿಎಸ್‌ನ ಅಂಬೇಡ್ಕರ್ ವೃತ್ತದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಮಹಾಪೌರ ಅಯೂಬ್ ಖಾನ್, ಉಪಾಧ್ಯಕ್ಷ ಪದ್ಮನಾಭನ್, ಲತಾ ರಂಗನಾಥ್, ಜಗದೀಶ್, ಕೈಸರ್ ಅಹ್ಮದ್, ರಾಘವೇಂದ್ರ, ಉಮೇಶ್, ಶ್ರೀನಿವಾಸ್, ಚೇತನ್ ಇತರರು ಉಪಸ್ಥಿತರಿದ್ದರು.



ಮೈಸೂರು ಅಶೋಕಪುರಂನ ಯುವಮುಖಂಡ ಹಾಗೂ ಸಮಾಜ ಸೇವಕ ಜಯರಾಜ್ ಅವರ ಜನ್ಮದಿನದ ಅಂಗವಾಗಿ ಜೆ.ಪಿ.ನಗರದ ಯುವ ಮುಖಂಡ ಜಗನ್ನಾಥ್ ಭೋವಿ ನೇತೃತ್ವದಲ್ಲಿ ನಾಚನಹಳ್ಳಿ ಪಾಳ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಿತರಿಸಿದರು. ಈ ವೇಳೆ ಜಗನ್ನಾಥ್ ಭೋವಿ ಅವರು ಸರ್ಕಾರಿ ಶಾಲೆಯ ಕೊಠಡಿಗಳಿಗೆ ಬಣ್ಣ ಬಳಿಸುವ ಮೂಲಕ ವಿದ್ಯಾರ್ಥಿ ಸ್ನೇಹಿ ವಾತಾವರಣ ಸೃಷ್ಟಿಸುವ ಕಾರ್ಯಕ್ಕೆ ಚಾಲನೆ ನೀಡಿದರು. ಯುವ ಮುಖಂಡರಾದ ಮಹೇಂದ್ರಗೌಡ, ಸಾಹುಕಾರ್ ಸಿದ್ದು, ಕುಮಾರ್(ಕುಮ್ಮಿ), ಸಿಲ್ಕ್ ಫ್ಯಾಕ್ಟರಿ ಹರೀಶ್ ಮತ್ತಿತರರು ಹಾಜರಿದ್ದರು.



ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಪಡುವಾರಹಳ್ಳಿ ಸ್ನೇಹ ಬಳಗದ ವತಿಯಿಂದ ವಿ.ವಿ.ಪುರಂನ ಹೆರಿಗೆ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಕೆ.ಎಂ.ಕೆಂಪೇಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ, ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಈ.ಬಸವರಾಜು, ವಿ.ಭೈರವ್, ಕಿಟ್ಟಿ, ಆಸ್ಪತ್ರೆಯ ವೈದ್ಯರಾದ ಡಾ.ಅಶ್ವಿನಿ, ಡಾ.ದಯಾನಾ, ಡಾ.ರೋಹಿತ್, ಡಾ.ಸುನೀತಾ, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಮುಂದುವರೆದ ಸರಣಿ ಅಪಘಾತ

ಕೂಡಲೇ ಲೋಪ ಸರಿಪಡಿಸದಿದ್ದರೆ ನಾವೇ ಕ್ರಮ ಕೈಗೊಳ್ಳುತ್ತೇವೆ

ಹೆದ್ದಾರಿ ಪ್ರಾಧಿಕಾರಕ್ಕೆ ಗೃಹ ಸಚಿವ ಡಾ.ಪರಮೇಶ್ವರ್ ಸಂದೇಶ



ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪತ್ನಿ ಕನ್ನಿಕಾ ಪರಮೇಶ್ವರ್ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು, ಜು.1(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತಗಳ ತಡೆಗಟ್ಟುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೂಡಲೇ ಲೋಪಗಳನ್ನು ಸರಿಪಡಿಸದಿದ್ದರೆ ರಾಜ್ಯ ಸರ್ಕಾರವೇ ಕ್ರಮ ಕೈಗೊಳ್ಳಲಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೆದ್ದಾರಿ ಪ್ರಾಧಿಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸುಗಮ ಹಾಗೂ ಸುರಕ್ಷಿತ ವಾಹನ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೇರೆ ಹೈವೆಗಳ ಮಾದರಿಯಲ್ಲಿ ಈ ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಸೂಚನಾ ಫಲಕಗಳನ್ನು ಅಳವಡಿಸಿಲ್ಲ. ವಾಹನಗಳ ವೇಗದ ಮಿತಿ ನಿಯಂತ್ರಿಸುವಂತಹ ಡಿಜಿಟಲ್ ಬೋರ್ಡ್‌ಗಳನ್ನು ಕೂಡ ಅಳವಡಿಸಿಲ್ಲ. ಇಲ್ಲಿಯವರೆಗೆ ಅಪಘಾತಗಳನ್ನು ತಡೆಗಟ್ಟಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಏನೂ ಕ್ರಮ ಕೈಗೊಂಡಿಲ್ಲ. ಕೂಡಲೇ ಇಲ್ಲಿರುವ ಹಲವು ಲೋಪಗಳನ್ನು ಸರಿಪಡಿಸಬೇಕು. ಇಲ್ಲದಿದ್ದರೆ ರಾಜ್ಯ ಸರ್ಕಾರವೇ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಡಾ.ಪರಮೇಶ್ವರ್ ತಿಳಿಸಿದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಯಲ್ಲಿ ನಿನ್ನೆ ರಾತ್ರಿ ದರೋಡೆ ಕೂಡ ನಡೆದಿದೆ. ದರೋಡೆಕೋರರಿಂದ ಹಲ್ಲೆಗೊಳಗಾದ ವ್ಯಕ್ತಿ ಆಸ್ಪತ್ರೆಯಲ್ಲಿದ್ದಾನೆ. ಅವನಿಂದ ಸಮಗ್ರ ಮಾಹಿತಿ ಪಡೆದು ಆರೋಪಿಗಳನ್ನು ಬಂಧಿಸುವಂತೆ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಅಪೂರ್ಣ ಹಂತದಲ್ಲೇ ಎಕ್ಸ್‌ಪ್ರೆಸ್ ವೇಯನ್ನು ಅವಸರವಸರವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆ ಮಾಡಿಸಲಾಗಿದೆ. ರಾಜಕೀಯ ದುರುದ್ದೇಶದಿಂದ ತರಾತುರಿಯಲ್ಲಿ ಹೀಗೆ ಉದ್ಘಾಟನೆ ಮಾಡಿದ ಕಾರಣ ಈಗ ಇಷ್ಟೆಲ್ಲಾ ಸಮಸ್ಯೆಗಳು ಎದುರಾಗುತ್ತಿವೆ. ಉದ್ಘಾಟನೆ ಆದ ಕೆಲವೇ ದಿನಗಳಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿ, ಇಷ್ಟೊಂದು ಜನರು ಸಾಯುತ್ತಾರೆ ಅಂದರೆ ಆ ಹೆದ್ದಾರಿಯಲ್ಲಿ ಎಷ್ಟು ಲೋಪವಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಡಾ. ಪರಮೇಶ್ವರ್ ಅಭಿಪ್ರಾಯಪಟ್ಟರು.

ಆದರೆ, ಹೆದ್ದಾರಿ ಲೋಪ ಸರಿಪಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಈಗ ಆಗುತ್ತಿರುವ ತೊಂದರೆ ಸರಿಪಡಿಸುವಂತೆ ಪ್ರಾಧಿಕಾರಕ್ಕೆ ಸೂಚನೆ ನೀಡುತ್ತೇವೆ. ಆದರೂ ಅವರು ನಿರ್ಲಕ್ಷ್ಯ ತೋರಿದರೆ ರಾಜ್ಯ ಸರ್ಕಾರವೇ ಕ್ರಮ ತೆಗೆದುಕೊಳ್ಳಲಿದೆ ಎಂದು ಡಾ.ಪರಮೇಶ್ವರ್ ಪುನರುಚ್ಚರಿಸಿದರು.

ಇಷ್ಟೆಲ್ಲಾ ಸಮಸ್ಯೆ ಇರುವಾಗ ಟೋಲ್ ಸಂಗ್ರಹ ಬೇಡ ಎಂದು ಹೆದ್ದಾರಿ ಪ್ರಾಧಿಕಾರಕ್ಕೆ ಸೂಚನೆ ಕೊಟ್ಟಿದ್ದೇವೆ. ಆದರೆ ಅವರು ನಮ್ಮ ನಿಯಂತ್ರಣದಲ್ಲಿ ಇಲ್ಲದ ಕಾರಣ ನಾವು ಏನೂ ಮಾಡಲು ಆಗುತ್ತಿಲ್ಲ ಎಂದು ಡಾ.ಪರಮೇಶ್ವರ್ ಅಸಹಾಯಕತೆ ವ್ಯಕ್ತಪಡಿಸಿದರು. ಎಕ್ಸ್‌ಪ್ರೆಸ್ ವೇ ಸೇರಿದಂತೆ ರಾಜ್ಯದ ಹೆದ್ದಾರಿಗಳಲ್ಲಿ ಜನರಿಗೆ ತೊಂದರೆ ಆಗದಂತೆ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ಸೇರಿದಂತೆ ಹಲವು ಸುರಕ್ಷತಾ ಕ್ರಮಗಳನ್ನು ಪೊಲೀಸ್ ಇಲಾಖೆ ಕೈಗೊಳ್ಳಲಿದೆ ಎಂದು ತಿಳಿಸಿದರು.

ಅರಮನೆ ವೀಕ್ಷಿಸಿದ ಪರಮೇಶ್ವರ್ ಕುಟುಂಬ; ಪ್ರಮೋದಾದೇವಿ ಒಡೆಯರ್ ಜೊತೆ ಮಾತುಕತೆ

ಮೈಸೂರು, ಜು.1(ಬಿಎಲ್‌ಯು)– ಗೃಹ ಸಚಿವರಾದ ನಂತರ ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ್ದ ಡಾ.ಜಿ. ಪರಮೇಶ್ವರ್, ಇಂದು ಮೈಸೂರು ಅರಮನೆಯಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿ ಮಾಡಿದರು.

ಡಾ.ಪರಮೇಶ್ವರ್, ಪತ್ನಿ ಕನ್ನಿಕಾ ಪರಮೇಶ್ವರ್ ಅವರೊಂದಿಗೆ ಮೈಸೂರು ಅರಮನೆಯ ಗೊಂಬೆ ತೊಟ್ಟಿಯಲ್ಲಿ ಮರದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿದರು.

ತರುವಾಯ ಅರಮನೆಯ ದರ್ಬಾರ್ ಹಾಲ್ ವೀಕ್ಷಣೆ ಮಾಡಿ ಪತ್ನಿ ಹಾಗೂ ಸಂಬಂಧಿಕರ ಜೊತೆ ಫೋಟೋ ತೆಗೆಸಿಕೊಂಡರು. ನಂತರ ಅರಮನೆಯಲ್ಲಿನ ತಮ್ಮ ಖಾಸಗಿ ನಿವಾಸಕ್ಕೆ ಆಗಮಿಸಿದ ಡಾ.ಪರಮೇಶ್ವರ್ ಮತ್ತು ಅವರ ಕುಟುಂಬದವರನ್ನು ಪ್ರಮೋದಾದೇವಿ ಒಡೆಯರ್, ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು. ಈ ವೇಳೆ ಪ್ರಮೋದಾದೇವಿ ಅವರ ಜೊತೆ ಡಾ. ಪರಮೇಶ್ವರ್ ಸುಮಾರು ಅರ್ಧ ಗಂಟೆ ಕಾಲ ಮಾತುಕತೆ ನಡೆಸಿದರು.

ಇದಕ್ಕೂ ಮುನ್ನ ಮಾತನಾಡಿದ ಡಾ.ಪರಮೇಶ್ವರ್, ಮೈಸೂರು ರಾಜವಂಶಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ನನಗೆ ತುಂಬಾ ಆತ್ಮೀಯರಾಗಿದ್ದರು. ಮೈಸೂರಿಗೆ ಬಂದ ಹಿನ್ನೆಲೆಯಲ್ಲಿ ಗೌರವದ ಸಂಕೇತವಾಗಿ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿ ಮಾಡುತ್ತಿದ್ದೇನೆ ಎಂದರು.

ಚಾಮುಂಡಿಬೆಟ್ಟಕ್ಕೂ ಭೇಟಿ ನೀಡಿದ ಡಾ.ಪರಮೇಶ್ವರ್, ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಕುಟುಂಬ ಸಮೇತ ವಿಶೇಷ ಪೂಜೆ ಸಲ್ಲಿಸಿದರು. ಇದಾದ ನಂತರ ಮೈಸೂರಿನ ಜೆ.ಪಿ.ನಗರದಲ್ಲಿರುವ ಕಾಂಗ್ರೆಸ್ ವಕ್ತಾರ ಹೆಚ್.ಎ.ವೆಂಕಟೇಶ್ ಮನೆಗೆ ಭೇಟಿ ನೀಡಿ, ಉಪಾಹಾರ ಸೇವಿಸಿದರು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಧ್ಯಮ ವಕ್ತಾರ ಮಹೇಶ್ ಹಾಜರಿದ್ದರು. ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿ ಮುತ್ತುರಾಜ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಶಿಷ್ಟಾಚಾರದನ್ವಯ ಗೃಹ ಸಚಿವರೊಂದಿಗಿದ್ದರು.

ಉತ್ತರ ಪ್ರದೇಶದ ಗುಂಡಿನ ದಾಳಿ ಖಂಡಿಸಿ ಪ್ರತಿಭಟನೆ



ಮೈಸೂರು, ಜು.1(ಪಿಎಂ)– ಉತ್ತರ ಪ್ರದೇಶದಲ್ಲಿ ಭೀಮ್ ಆರ್ಮಿ ಮುಖ್ಯಸ್ಥ ಚಂದ್ರಶೇಖರ್ ಆಜಾದ್ ಮೇಲೆ ನಡೆದ ಗುಂಡಿನ ದಾಳಿಯನ್ನು ಖಂಡಿಸಿ ಮೈಸೂರು ವಿಶ್ವವಿದ್ಯಾನಿಲಯದ ದಲಿತ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಚಂದ್ರಶೇಖರ ಆಜಾದ್ ಅವರ ಮೇಲೆ ನಡೆದ ಗುಂಡಿನ ದಾಳಿ ಖಂಡನೀಯ. ಈ ಕೂಡಲೇ ಗುಂಡಿನ ದಾಳಿ ನಡೆಸಿದ ದುಷ್ಕರ್ಮಿಗಳನ್ನು ಬಂಧಿಸಿ ಕಾನೂನಿನಂತೆ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು. ಒಕ್ಕೂಟದ ಅಧ್ಯಕ್ಷ ಪರಂಜ್ಯೋತಿ, ವಿದ್ಯಾರ್ಥಿ ಮುಖಂಡರಾದ ಗಿರೀಶ್, ಕಿರಣ್, ನವೀನ್, ಲೋಕೇಶ್, ಶಿವು, ಚೌಡಪ್ಪ, ಪುಟ್ಟರಾಜು, ಸೋಮಣ್ಣ, ಮಹೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಫ್ರಾನ್ಸ್‌ನಲ್ಲಿ ಮುಂದುವರೆದ ವ್ಯಾಪಕ ಗಲಭೆ



ಫ್ರಾನ್ಸ್: ಫ್ರಾನ್ಸ್‌ನಲ್ಲಿ ಹದಿಹರೆಯದ ಬಾಲಕನೊಬ್ಬನಿಗೆ ಪೊಲೀಸರು ಗುಂಡು ಹೊಡೆದ ನಂತರ ದೇಶಾದ್ಯಂತ ಗಲಭೆಗಳು ನಡೆಯುತ್ತಿವೆ. ಇದೀಗ ಗಲಭೆಗಳು ಫ್ರಾನ್ಸ್‌ನ ಉತ್ತರ ಭಾಗವನ್ನೂ ತಲುಪಿದ್ದು 45 ಸಾವಿರ ಪೊಲೀಸರನ್ನು ಗಲಭೆ ತಡೆಯಲು ನಿಯೋಜಿಸಲಾಗಿದೆ. ಈವರೆಗೆ ಒಟ್ಟು 1,100 ಜನರನ್ನು ಬಂಧಿಸಲಾಗಿದೆ.

ಯುವ ಗಲಭೆಕೋರರು ಪೊಲೀಸ್ ಅಧಿಕಾರಿಗಳೊಂದಿಗೆ ಘರ್ಷಣೆಗಿಳಿದಿದ್ದು, ಸಾರ್ವಜನಿಕ ಆಸ್ತಿಯನ್ನು ಧ್ವಂಸಗೊಳಿಸಿದ್ದಾರೆ. ಈ ಸಂದರ್ಭ ಅವರು ಆಪಲ್‌ನಂತಹ ದುಬಾರಿ ಅಂಗಡಿಗಳಿಂದ ಹಿಡಿದು, ಚಿಲ್ಲರೆ ಅಂಗಡಿಗಳನ್ನೂ ಲೂಟಿ ಮಾಡಿದ್ದಾರೆ. ಹಿಂಸಾಚಾರ 4ನೇ ದಿನಕ್ಕೆ ಕಾಲಿಟ್ಟಿದ್ದು ದೊಡ್ಡ ಪ್ರಮಾಣದ ಹಿಂಸಾಚಾರಕ್ಕೆ ಫ್ರಾನ್ಸ್ ಸಾಕ್ಷಿಯಾಗಿದೆ. ಈ ವಾರದ ಆರಂಭದಲ್ಲಿ ಉತ್ತರ ಆಫ್ರಿಕನ್ ಮೂಲದ ಹದಿಹರೆಯದ ಬಾಲಕನಿಗೆ ಪೊಲೀಸರು ಗುಂಡಿಕ್ಕಿದ್ದು ಅಶಾಂತಿಯ ವಾತಾವರಣ ತಿಳಿಯಾಗುವ ಯಾವುದೇ ಲಕ್ಷಣಗಳನ್ನು ಕಾಣಿಸುತ್ತಿಲ್ಲ.

ವಿಶ್ವವಿಖ್ಯಾತ ಪ್ಯಾರಿಸ್‌ನಲ್ಲೇ ಗಲಭೆ ಶುರು: ಪ್ಯಾರಿಸ್‌ನ ಪಶ್ಚಿಮ ಹೊರವಲಯದಲ್ಲಿರುವ ಕಾರ್ಮಿಕ ವರ್ಗದ ಪಟ್ಟಣವಾದ ನಾಂಟೆಯಲ್ಲಿ ಮೊದಲು ಗಲಭೆಗಳು ಭುಗಿಲೆದ್ದವು. ಅಲ್ಲಿ 17 ವರ್ಷದ ಬಾಲಕ ನಹೆಲ್ ಎಂಬಾತ ಮಂಗಳವಾರ ಟ್ರಾಫಿಕ್ ಸ್ಟಾಪ್‌ನಲ್ಲಿ ಪೊಲೀಸ್ ಅಧಿಕಾರಿಯಿಂದ ಗುಂಡಿಕ್ಕಿ ಕೊಲ್ಲಲ್ಪಟ್ಟಿದ್ದ. ಅಧಿಕಾರಿಯ ಮೇಲೆ ಕೊಲೆಯ ಪ್ರಾಥಮಿಕ ಆರೋಪವನ್ನು ಹೊರಿಸಲಾಗಿದೆ. ಬಾಲಕನನ್ನು ಪೊಲೀಸರು ನಿಲ್ಲಿಸಿದ್ದು ನಂತರ ಗುಂಡು ಹೊಡೆದಿದ್ದಾರೆ. ಆಗ ನಹೆಲ್‌ನ ಎಡಗೈ ಮತ್ತು ಎದೆಯ ಮೂಲಕ ಗುಂಡು ಹೊಕ್ಕಿದ್ದು ಬಾಲಕ ಸಾವನ್ನಪ್ಪಿದ್ದ. ಬಾಲಕನಿಗೆ ಗುಂಡು ಹಾರಿಸಿದ ಪೊಲೀಸ್ ಅಧಿಕಾರಿ, ತನಗೆ ಅಥವಾ ಇತರರಿಗೆ ಗಾಯವಾಗಬಹುದೆಂಬ ಭಯದಿಂದ ಹಾಗೆ ಮಾಡಿರುವುದಾಗಿ ಸ್ಪಷ್ಟನೆ ನೀಡಿದ್ದಾರೆ ಎಂದು ನಾಂಟೆಗ್ರೆ ಪಬ್ಲಿಕ್ ಪ್ರಾಸಿಕ್ಯೂಟರ್ ಪಾಸ್ಕಲ್ ಪ್ರಾಚೆ ಹೇಳಿದ್ದಾರೆ. ಬಾಲಕ ಈ ಹಿಂದೆ ಟ್ರಾಫಿಕ್ ಸ್ಟಾಪ್ ಆದೇಶಗಳನ್ನು ಅನುಸರಿಸಲು ವಿಫಲನಾಗಿದ್ದಕ್ಕಾಗಿ ಪೊಲೀಸರಿಗೆ ಪರಿಚಿತನಾಗಿದ್ದ ಎಂದು ಪ್ರಾಚೆ ಹೇಳಿದ್ದಾರೆ.

ವಿಡಿಯೋ ಗೇಮ್ಸ್ ದೂರಿದ ಅಧ್ಯಕ್ಷ: ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ತುರ್ತು ಪರಿಸ್ಥಿತಿ ಘೋಷಣೆ ನಿಲ್ಲಿಸಿದ್ದರಿಂದ ದೇಶದ ಹಲವಾರು ಭಾಗಗಳಲ್ಲಿ ವ್ಯಾಪಕವಾದ ಬೆಂಕಿ ಹಚ್ಚುವಿಕೆ ಮತ್ತು ಲೂಟಿಗಳು ನಡೆಯುತ್ತಿವೆ ಎನ್ನಲಾಗಿದೆ. ಇಮ್ಯಾನುಯೆಲ್ ಮ್ಯಾಕ್ರನ್, ಅಶಾಂತಿಯ ಹರಡುವಿಕೆಗೆ ವೀಡಿಯೊ ಗೇಮ್‌ಗಳನ್ನು ದೂಷಿಸಿದ್ದು, ಗಲಭೆಗಳನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಹದಿಹರೆಯದವರನ್ನು ಮನೆಯಲ್ಲಿಯೇ ಇರಿಸುವಂತೆ ಪೋಷಕರನ್ನು ಒತ್ತಾಯಿಸಿದರು. ಶುಕ್ರವಾರ ರಾತ್ರಿ 270 ಜನರನ್ನು ಬಂಧಿಸಲಾಗಿದ್ದು, ಅಶಾಂತಿ ಪ್ರಾರಂಭವಾದಾಗಿನಿಂದ ಒಟ್ಟು 1,100ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ದೇಶದ ಆಂತರಿಕ ಸಚಿವ ಜೆರಾಲ್ಡ್ ಡಾರ್ಮಾನಿನ್ ಶನಿವಾರ ಮುಂಜಾನೆ ಹೇಳಿದ್ದಾರೆ. ಬಂಧಿತರ ಸರಾಸರಿ ವಯಸ್ಸು ಕೇವಲ 17 ವರ್ಷಗಳು ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಬರದ ಭೀತಿಯ ನಡುವೆ ಜಲಪ್ರಳಯದ ಎಚ್ಚರಿಕೆ

ಹುಬ್ಬಳ್ಳಿ: 'ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಲಿದ್ದು, ಜಲಪ್ರಳಯ ಆಗುವ ಲಕ್ಷಣಗಳಿವೆ. ಪ್ರಕೃತಿ ಮುನಿದಿದ್ದು ಸರಿಯಾಗಲಿದೆ. ಜಾಗತಿಕ ಮಟ್ಟದಲ್ಲಿ ದುರಂತ ಆಗುವುದಿದೆ. ಜನರ ಅಕಾಲ ಮೃತ್ಯು ಸಂಭವಿಸುವ ಸಾಧ್ಯತೆ ಇದೆ' ಎಂದು ಕೋಡಿಮಠ ಮಹಾಸಂಸ್ಥಾನದ ಪೀಠಾಧ್ಯಕ್ಷ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದರು.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಾಗತಿಕ ಮಟ್ಟದಲ್ಲಿ ಜಲಪ್ರಳಯ ಸಂಭವಿಸಿ ಒಂದೆರಡು ರಾಷ್ಟ್ರಗಳು ಮುಳುಗುವ ಸಾಧ್ಯತೆ ಇದೆ. ಬೇರೆ ಎಲ್ಲೋ ಕಡೆ ಬಾಂಬ್ ಸ್ಫೋಟದಂತಹ ಘಟನೆಗಳು ಸಂಭವಿಸುತ್ತವೆ. ವಿಷಾನಿಲದಿಂದ ಭಾರತದಲ್ಲಿ ಜನರು ಅಕಾಲಿಕವಾಗಿ ಸಾವಿಗೀಡಾಗುವ ಸಂಭವ ಇದೆ' ಎಂದು ಹೇಳಿದರು.

'ವಿಜಯದಶಮಿಯಿಂದ ಸಂಕ್ರಾಂತಿಯೊಳಗೆ ಜಗತ್ತಿನ ಸಾಮ್ರಾಟರು ತಲ್ಲಣಗೊಳ್ಳುವಂತ ದುರ್ಘಟನೆ ರಾಷ್ಟ್ರ ಮಟ್ಟದಲ್ಲಿ ನಡೆಯಲಿದೆ. ಆಳುವವರು ಅರಿತರೆ ಗಂಡಾಂತರದಿಂದ ಪಾರಾಗಬಹುದು. ಇಲ್ಲದಿದ್ದರೆ ಸಂಕಷ್ಟ ಕಟ್ಟಿಟ್ಟಬುತ್ತಿ. ಕರುನಾಡಿಗೂ ಕೆಲವು ಆಪತ್ತುಗಳು ಇದ್ದು, ಸಾವು ನೋವುಗಳು ಸಂಭವಿಸಲಿವೆ. ದೈವಕೃಪೆಯಿಂದ ಇವೆಲ್ಲವುಗಳಿಂದ ಪಾರಾಗಬಹುದು. ಭಾರತದಲ್ಲಿಯೂ ಒಂದು ಘಟನೆ ಆಗುತ್ತೆ. ತಪ್ಪಿಸುವಂತದ್ದು ಆಳುವವರ ಕೈಯಲ್ಲಿದೆ' ಎಂದು ಹೇಳಿದರು.



ಕೋಡಿ ಶ್ರೀ

ರಾಜ್ಯದಲ್ಲಿ ಸ್ಥಿರ ಸರ್ಕಾರ ಬರಲಿದೆ ಎಂದು ಆಗ ಹೇಳಿದ್ದೆ. ಅದು ನಿಜವಾಗಿದೆ. ಒಬ್ಬ ವ್ಯಕ್ತಿಯೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆಯೇ ಎಂಬ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಈ ಸರ್ಕಾರ ಸ್ಥಿರವಾಗಿ ಇರುತ್ತದೆಯೇ ಎಂಬುದಕ್ಕೆ, ಬಾಯಿಯ ವಾಸನೆ ಮೂಗಿಗೆ ಬಡಿಯುವುದಿಲ್ಲ. ಆದರೆ, ಊರಿನ ಎಲ್ಲಾ ವಾಸನೆಯನ್ನು ಮೂಗು ಗ್ರಹಿಸುತ್ತದೆ ಎಂದು ಹೇಳಿದರು.

ಬಡವರಿಗೆ ಗ್ಯಾರಂಟಿಗಳು ಒಳ್ಳೆಯದೇ. ಯಾವ ಹೆಣ್ಣಿಗೆ ಸ್ವತಂತ್ರ ಇರ್ಲಿಲ್ಲ ಅಂತಹ ಹೆಣ್ಣು ಈಗ ಸ್ವತಂತ್ರವಾಗಿ ಹೊರಗಡೆ ಬಂದಿದ್ದಾರೆ. ಮುಂಬರುವ ಲೋಕಸಭೆ ಚುನಾವಣೆ ಫಲಿತಾಂಶದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸತ್ಯ ಅಪ್ರಿಯವಾಗಿರುತ್ತದೆ. ಸುಳ್ಳು ಪ್ರಿಯವಾಗಿರುತ್ತದೆ. ನಾನು ಸತ್ಯ ಹೇಳಿದರೆ ಮಠಕ್ಕೆ ಹೋಗುವುದಿಲ್ಲ. ಸಂದರ್ಭ ಬಂದಾಗ ಈ ಬಗ್ಗೆ ಹೇಳುತ್ತೇನೆ ಎಂದು ಕೋಡಿಶ್ರೀ ಹೇಳಿದರು.

ಸಂಸತ್ತಿನ ಮುಂಗಾರು ಅಧಿವೇಶನ ಜು.20ಕ್ಕೆ ಆರಂಭ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನ ಜುಲೈ 20ರಂದು ಆರಂಭವಾಗಲಿದೆ. ಜುಲೈ 20ರಂದು ಆರಂಭವಾಗುವ ಅಧಿವೇಶನ ಆಗಸ್ಟ್ 11ರವರೆಗೆ ಮುಂದುವರಿಯಲಿದೆ. ಸಂಸತ್ತು ಕಲಾಪಗಳು ಸುಗಮವಾಗಿ, ಸರಾಗವಾಗಿ ಮತ್ತು ದೇಶದ ಜನರಿಗೆ ಉಪಯೋಗವಾಗುವಂತಹ ಚರ್ಚೆಗಳನ್ನು ಕಲಾಪ ವೇಳೆ ನಡೆಸಿಕೊಂಡು ಹೋಗಲು ಎಲ್ಲಾ ಪಕ್ಷಗಳ ಸದಸ್ಯರು ಸಹಕಾರ ನೀಡಬೇಕೆಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಮನವಿ ಮಾಡಿಕೊಂಡಿದ್ದಾರೆ.



ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ನಡೆಸಲು ವಿರೋಧ ಪಕ್ಷಗಳು ಇತ್ತೀಚೆಗೆ ಸಭೆ ಸೇರಿ ನಿರ್ಧಾರ ತೆಗೆದುಕೊಂಡಿರುವುದರಿಂದ ಅಧಿವೇಶನವು ಈ ಬಾರಿ ಕುತೂಹಲದಿಂದ ಕೂಡಿದೆ. ಇದರ ಜೊತೆಗೆ, ಏಕರೂಪ ನಾಗರಿಕ ಸಂಹಿತೆಗಾಗಿ ಮೋದಿ ಅವರು ಬಲವಾಗಿ ಪ್ರತಿಪಾದಿಸಿರುವ ಸಂದರ್ಭದಲ್ಲಿ ಈ ವಿಷಯದ ಕುರಿತು ಸಮಾಲೋಚನೆಗಳನ್ನು ನಡೆಸುವ ವೇಳೆ ಸಂಸತ್ತು ಕಲಾಪ ನಡೆಯುತ್ತಿದೆ.

ಧ್ರುವನಾರಾಯಣರ ಮೈಸೂರು, ಚಾ.ನಗರ ಬಾಂಧವ್ಯ ಸ್ಮರಣೆ

ದಿವಂಗತ ಆರ್.ಧ್ರುವನಾರಾಯಣ್ ಸ್ಮರಣಾರ್ಥ ಮಕ್ಕಳ ನಡಿಗೆ ಶಾಲೆಯ ಕಡೆಗೆ ಕಾರ್ಯಕ್ರಮದಲ್ಲಿ 600 ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಣೆ

ಮೈಸೂರು,ಜು.1(ಎಸ್‌ಪಿಎನ್)–ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಸಂಸದ ಆರ್.ಧ್ರುವನಾರಾಯಣ್‌ರವರ ನೆನಪಿನ ಅಂಗವಾಗಿ 'ಮಕ್ಕಳ ನಡಿಗೆ ಶಾಲೆಯ ಕಡೆಗೆ' ಶೀರ್ಷಿಕೆಯಡಿ 600ಕ್ಕೂ ಹೆಚ್ಚು ಶಾಲಾ ಮಕ್ಕಳಿಗೆ ಶಾಲಾ ಬ್ಯಾಗ್ ಮತ್ತು ಇತರೆ ಸಾಮಗ್ರಿಗಳನ್ನು ಶಾಸಕ ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಹಾಗೂ ನಟಿ ಭಾವನಾ ಸಮ್ಮುಖದಲ್ಲಿ ಶನಿವಾರ ವಿತರಿಸಲಾಯಿತು.



ಮೈಸೂರು ಜೆಎಲ್‌ಬಿ ರಸ್ತೆಯ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಜಿಲ್ಲಾ ಭವನದಲ್ಲಿ ಐಎನ್‌ಬಿಸಿಡಬ್ಲ್ಯೂ ಘಟಕದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಆರ್.ಧ್ರುವನಾರಾಯಣ್ ಎಲ್ಲರೊಂದಿಗೂ ಸ್ನೇಹಮಯವಾಗಿ ವರ್ತಿಸುತ್ತಿದ್ದರು. ಅವರು, ಶಾಸಕ ಮತ್ತು ಸಂಸದರಾಗಿದ್ದಾಗ ಕ್ಷೇತ್ರದ ಅಭಿವೃದ್ಧಿ ಯಾವುದೇ ಸರ್ಕಾರವಿದ್ದರೂ ಕೆಲಸ ಮಾಡಿಸುವಲ್ಲಿ ಯಶಸ್ವಿಯಾಗಿದ್ದರು. ಹಾಗಾಗಿ ಅವರು, ಮೈಸೂರು ಭಾಗದಲ್ಲಿ ಜನಪ್ರಿಯ ನಾಯಕರಾಗಿ ಖ್ಯಾತಿ ಹೊಂದಿದ್ದರು ಎಂದು ತಿಳಿಸಿದರು.

ಆರ್.ಧ್ರುವನಾರಾಯಣ್ ಸಾಮಾನ್ಯ ಕಾರ್ಯಕರ್ತರಾಗಿ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡು ಸಂಸದರು, ಶಾಸಕರಾಗಿ ಆಯ್ಕೆಯಾಗಿದ್ದರು. ನಂತರ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಇಂತಹ ನಾಯಕರು ಹೆಚ್ಚು ದಿನ ನಮ್ಮೊಂದಿಗೆ ಇಲ್ಲವಲ್ಲ ಎಂಬ ನೋವು ಸದಾ ಕಾಡುತ್ತಿರುತ್ತದೆ ಎಂದು ತಿಳಿಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ನಮ್ಮ ತಂದೆಯವರು 2 ಬಾರಿ ಶಾಸಕರಾಗಿ, 2 ಬಾರಿ ಸಂಸದರಾಗಿ ಕಾರ್ಯನಿರ್ವಹಿಸಿ, ಮೈಸೂರು ಭಾಗದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ನವೋದಯ ಹಾಗೂ ಕಸ್ತೂರಬಾ ವಸತಿ ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿ, ಪ್ರೋತ್ಸಾಹಿಸಿದ್ದರು. ಇಂದು ಅವರ ಹೆಸರಿನಲ್ಲೇ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಕಾರ್ಯಕ್ರಮ ನಡೆಯುತ್ತಿರುವುದು ಸಂತೋಷದ ಸಂಗತಿ ಎಂದರು. ನಮ್ಮ ತಂದೆಯ ಅಗಲಿಕೆ ನನಗೆ ವೈಯಕ್ತಿಕವಾಗಿ ನಷ್ಟವಾಗಿದೆ. ಅದೇ ರೀತಿ ಕಾಂಗ್ರೆಸ್ ಕುಟುಂಬಕ್ಕೆ ದೊಡ್ಡ ಪೆಟ್ಟು ನೀಡಿದೆ. ಸಂಘಟನೆಯಲ್ಲಿನ ಅವರ ಪಾತ್ರವನ್ನು ಕಾರ್ಯಕರ್ತರು ಇಂದಿಗೂ ನೆನೆಯುತ್ತಿರುವುದು ಸಂತೋಷದ ವಿಷಯ. ನಮ್ಮ ತಂದೆ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಿರುವ ಐಎನ್‌ಬಿಸಿಡಬ್ಲ್ಯೂಎಫ್ ಘಟಕದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಧ್ರುವನಾರಾಯಣ್ ಅವರ ಜೀವಿತಾವಧಿಯಲ್ಲಿ ಮೈಸೂರು, ಚಾಮರಾಜನಗರ ಭಾಗದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರ ಸ್ಮರಣಾರ್ಥ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಶಾಲಾ ಸಾಮಗ್ರಿಗಳನ್ನು ವಿತರಿಸುತ್ತಿರುವುದು ಸಂತೋಷ ಸಂಗತಿ ಎಂದರು. ಈ ವೇಳೆ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ, ಕೆಪಿಸಿಸಿ ಕಾರ್ಯದರ್ಶಿ ಮಳವಳ್ಳಿ ಶಿವಣ್ಣ, ಸಿ.ಎಸ್.ರಘು, ಈಶ್ವರ್ ಚಕ್ರಿ, ಅಶೋಕ್, ರಘುರಾಜೇ ಅರಸ್ ಇನ್ನಿತರರಿದ್ದರು.

ಕೆ.ಆರ್.ಪೇಟೆ ಕೃಷ್ಣ ಆದರ್ಶ ಇಂದಿನ ರಾಜಕಾರಣಿಗಳಿಗೆ ಮಾದರಿ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಕೆ.ಆರ್.ಪೇಟೆ, ಜು.1– ಕಲುಷಿತಗೊಂಡಿರುವ ಇಂದಿನ ರಾಜಕಾರಣದಲ್ಲಿ ಪ್ರಾಮಾಣಿಕತೆ ಹಾಗೂ ಮೌಲ್ಯ ಉಳಿಸಿಕೊಂಡು ಶ್ರೀಸಾಮಾನ್ಯರ ಮಧ್ಯದಲ್ಲಿ ಇದ್ದು ಜನಪರ ಕೆಲಸ ಮಾಡಿದ ಸರಳ ಸಜ್ಜನ ರಾಜಕಾರಣಿ ಮಾಜಿ ಸ್ಪೀಕರ್ ಕೃಷ್ಣ ಅವರ ಆದರ್ಶಗಳು ಇಂದಿನ ರಾಜಕಾರಣಿಗಳು ಹಾಗೂ ಯುವ ಜನರಿಗೆ ಮಾದರಿ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶ್ಲಾಘಿಸಿದರು.

ಶನಿವಾರ ಪಟ್ಟಣದಲ್ಲಿ ಮಾಜಿ ಸ್ಪೀಕರ್ ಕೃಷ್ಣ ಅವರ 83ನೇ ಹುಟ್ಟುಹಬ್ಬದ ಅಂಗವಾಗಿ ನಡೆದ ಕೃಷ್ಣ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದ ಅವರು, ಕೃಷ್ಣ ಅವರಂತಹ ಮೌಲ್ಯಾಧಾರಿತ ರಾಜಕಾರಣಿಗಳು ಇಂದಿನ ದಿನಮಾನದಲ್ಲಿ ಅಪರೂಪವಾಗುತ್ತಿದ್ದಾರೆ. ನುಡಿದಂತೆ ನಡೆಯುವ ನೇರ, ನಿಷ್ಠುರ ರಾಜಕಾರಣಿಯಾಗಿದ್ದ ಕೃಷ್ಣ ಅವರು ತಮ್ಮ ಜೀವನದುದ್ದಕ್ಕೂ ಗಾಂಧಿಗಿರಿಯನ್ನು ಮೈಗೂಡಿಸಿಕೊಂಡು ಸರಳ ಜೀವನ ನಡೆಸಿದರು. ಕೃಷ್ಣ ಅವರ ಆದರ್ಶಗಳು ಹಾಗೂ ಪ್ರಾಮಾಣಿಕತೆಯನ್ನು ಯುವ ಜನಾಂಗಕ್ಕೆ ತಿಳಿಸಿಕೊಡುವ ಅಗತ್ಯ ಇರುವುದರಿಂದ ಕೃಷ್ಣ ಪ್ರತಿಷ್ಠಾನದ ಆಶ್ರಯದಲ್ಲಿ ಆಯೋಜಿಸಿರುವ ಇಂದಿನ ಕಾರ್ಯಕ್ರಮ ಅರ್ಥಪೂರ್ಣವಾಗಿದೆ ಎಂದರು.

ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಮಾತನಾಡಿ, ಕೃಷ್ಣ ಅವರ ರಾಜಕೀಯ ಜೀವನ ಒಂದು ತೆರೆದ ಪುಸ್ತಕವಿದ್ದಂತೆ. 40 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದಂತೆ ಪ್ರಾಮಾಣಿಕ ಆಡಳಿತ ನೀಡಿದ್ದಾರೆ. ತಮ್ಮ ಮನೆ ಬಾಗಿಲಿಗೆ ಗುತ್ತಿಗೆದಾರರೊಬ್ಬರು ತೆಗೆದುಕೊಂಡು ಹೋಗಿದ್ದ ಹಣ ಸ್ವೀಕರಿಸದೆ ಗೆಟೌಟ್ ಎಂದು ಹೇಳಿದ ದಿಟ್ಟ ಧೀಮಂತ ರಾಜಕಾರಣಿ ಎಂದರೆ ಅದು ಕೆ.ಆರ್.ಪೇಟೆ ಕೃಷ್ಣ ಮಾತ್ರ. ಕೃಷ್ಣ ಅವರನ್ನು ನನ್ನ ಗುರುಗಳು ಎಂದು ಹೇಳಿಕೊಳ್ಳಲು ನನಗೆ ಅಭಿಮಾನ ಎನಿಸುತ್ತದೆ ಎಂದರು.

ಕಲುಷಿತಗೊಂಡಿರುವ ಇಂದಿನ ರಾಜಕೀಯದಲ್ಲಿ ಕೃಷ್ಣ ಅವರಂತಹ ಪ್ರಾಮಾಣಿಕರು ಸಿಗುವುದು ವಿರಳ. ಮಂಡ್ಯದ ಗಾಂಧಿ ಎಂಬ ಹೆಸರಿಗೆ ಭಾಜನರಾಗಿ ಹತ್ತು ಹಲವು ಸಾಧನೆಗಳನ್ನು ಮಾಡಿದ ಕೃಷ್ಣ ರಾಜಕೀಯ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸಿದ್ದಾರೆ ಎಂದು ಬಣ್ಣಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಕೃಷ್ಣ ಅವರ ಹೆಸರಿನ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ತಾಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ, ಪ್ರತಿಷ್ಠಾನದ ಕಾರ್ಯದರ್ಶಿ ವಾಸು, ಖಜಾಂಚಿ ರಮೇಶ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್, ಕೃಷ್ಣ ಅವರ ಧರ್ಮಪತ್ನಿ ಇಂದ್ರಮ್ಮ, ರೈತ ನಾಯಕಿ ನಂದಿನಿ ಜಯರಾಮ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

> ಸಮಾಜದಲ್ಲಿ ಮೌಲ್ಯಗಳನ್ನು ಎತ್ತಿ ಹಿಡಿಯಲು ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಶ್ರಮಿಸಿದ ಕೃಷ್ಣ ಯುವ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ಕೊಡುಗೆಗಳನ್ನು ಕೆ.ಆರ್.ಪೇಟೆಗೆ ನೀಡಿದ್ದಾರೆ. – **ಹೆಚ್.ಟಿ.ಮಂಜು, ಶಾಸಕ.**

ಮಂಡ್ಯಕ್ಕೆ 84 ವರ್ಷ: ಸಿಹಿ ಹಂಚಿಕೆ



ಮಂಡ್ಯ, ಜು.1– ಮಂಡ್ಯ ಜಿಲ್ಲೆ ರಚನೆಯಾಗಿ 84 ವರ್ಷ ಆಗಿರುವ ಹಿನ್ನೆಲೆಯಲ್ಲಿ ಶನಿವಾರ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಸಾವಯವ ಬೆಲ್ಲ ಹಂಚಿದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್.ನಾಗರಾಜು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಎಸ್.ಹೆಚ್. ನಿರ್ಮಲ ಸೇರಿದಂತೆ ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ವರ್ಗದವರಿದ್ದರು.

ಸಚಿವರಿಂದ ತ್ರಿಚಕ್ರ ವಾಹನ ವಿತರಣೆ



ನಾಗಮಂಗಲ, ಜು.1– ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ನಾಲ್ವರು ವಿಕಲ ಚೇತನರಿಗೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತ್ರಿಚಕ್ರ ವಾಹನ ವಿತರಿಸಿದರು.

ತಾಲೂಕಿನ ಹೊಸಕೊಪ್ಪಲು ಗ್ರಾಮದ ಸರಸ್ವತಿ, ಕೃಷ್ಣಾಪುರ ಗ್ರಾಮದ ಉಮೇಶ, ಹೆಚ್.ಕ್ಯಾತನಹಳ್ಳಿ ಗ್ರಾಮದ ಯದು ಕುಮಾರ್, ಗೊಂಡೆನಹಳ್ಳಿ ಗ್ರಾಮದ ಮಂಜೇಗೌಡರಿಗೆ ತ್ರಿಚಕ್ರ ವಾಹನ ವಿತರಿಸಿ ಮಾತನಾಡಿದ ಅವರು, ವಾಹನ ಚಾಲನೆ ಮಾಡುವಾಗ ಜಾಗರೂಕರಾಗಿ ಚಾಲನೆ ಮಾಡಿ ಹಾಗೂ ಸಂಚಾರ ನಿಯಮ ಪಾಲಿಸುವಂತೆ ಕಿವಿಮಾತು ಹೇಳಿದರು. ಈ ವೇಳೆ ಇಓ ಚಂದ್ರಮೌಳಿ, ಪ್ರಸನ್ನ ಇತರರಿದ್ದರು.



ಶ್ರೀರಂಗಪಟ್ಟಣದ ಮಿನಿ ವಿಧಾನಸೌಧದಲ್ಲಿ ತಹಸೀಲ್ದಾರ್ ಅಶ್ವಿನಿ ಅವರು ಶನಿವಾರ ಸಿಬ್ಬಂದಿ ಜೊತೆಗೂಡಿ ಕೇಕ್ ಕತ್ತರಿಸುವ ಮೂಲಕ ಕಂದಾಯ ದಿನಾಚರಣೆ ಆಚರಿಸಿದರು.

ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜು.1– 2022–23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪಿಯುಸಿ, ಪದವಿ ಹಾಗೂ ಡಿಪ್ಲೋಮಾ ಇತರೆ ಕೋರ್ಸ್‌ಗಳಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮಂಜೂರಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.31 ಕೊನೆ ದಿನ. ಹೆಚ್ಚಿನ ಮಾಹಿತಿಗೆ ದೂ:08236–256124 ಸಂಪರ್ಕಿಸಬಹುದು ಎಂದು ಪಾಂಡವಪುರ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾಭ್ಯಾಸಕ್ಕೆ ಸಾಲ ನೀಡಲು ಅರ್ಜಿ ಆಹ್ವಾನ

ಮಂಡ್ಯ, ಜು.1– ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಡಿ ವಿದ್ಯಾಭ್ಯಾಸ ಸಾಲ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಆಂಗ್ಲೋ ಇಂಡಿಯನ್ ಸಮುದಾಯದವರು (ಸಿಇಟಿ/ನೀಟ್ ಮುಖಾಂತರ) ಎಂಬಿಬಿಎಸ್, ಬಿಡಿಎಸ್/ ಆಯುಷ್/ಬ್ಯಾಚುಲರ್ ಆಪ್ ಆರ್ಕಿಟೆಕ್ಚರ್/ಬ್ಯಾಚುಲರ್ ಆಪ್ ಇಂಜಿನಿಯರಿಂಗ್/ಬ್ಯಾಚುಲರ್ ಆಪ್ ಟೆಕ್ನಾಲಜಿ ಕೋರ್ಸ್‌ಗಳಿಗೆ ಶಿಕ್ಷಣ ವ್ಯಾಸಂಗ ಮಾಡಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಜು.7 ಕೊನೆ ದಿನ. ಆಸಕ್ತ ವಿದ್ಯಾರ್ಥಿಗಳು http://kmdconline.karnataka.gov.in/ ಮೂಲಕ ಮಾಹಿತಿ ಪಡೆಯಬಹುದು.

ಗಾಂಧೀಜಿ ಕನಸು ನನಸಾಗಿಸಲು ಎನ್‌ಎಸ್‌ಎಸ್ ಸಹಕಾರಿ

ಗ್ರಾಪಂ ಅಧ್ಯಕ್ಷ ಕೆ.ಎಸ್. ಪುಟ್ಟಸ್ವಾಮಿ ಅಭಿಪ್ರಾಯ



ಚಿನಕುರಳಿ, ಜು.1– ಗಾಂಧಿಜೀ ಕಂಡ ಕನಸು ನನಸು ಮಾಡಲು ಎನ್‌ಎಸ್‌ಎಸ್ ಶಿಬಿರ ಸಹಕಾರಿ ಎಂದು ಗ್ರಾಪಂ ಅಧ್ಯಕ್ಷ ಕೆ.ಎಸ್.ಪುಟ್ಟಸ್ವಾಮಿ(ಪಾಪಣ್ಣ) ತಿಳಿಸಿದರು.

ಇಲ್ಲಿಗೆ ಸಮೀಪದ ಲಿಂಗಾಪುರದಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಿಂದ 7 ದಿನಗಳ ಕಾಲ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಶಿಬಿರದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳು ಸ್ವಚ್ಛತೆ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು. ಗ್ರಾಮದ ಕೆರೆಕಟ್ಟೆ, ಚರಂಡಿ ಸ್ವಚ್ಛಗೊಳಿಸಬೇಕು. ರಸ್ತೆ ಬದಿ ಬೆಳೆದಿರುವ ಗಿಡಗಂಟಿಗಳನ್ನು ತೆರವುಗೊಳಿಸಬೇಕು. ಗ್ರಾಮಸ್ಥರು ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಉಪಾಧ್ಯಕ್ಷೆ ಮಂಜುಳಾ ಮಹದೇವು ಮಾತನಾಡಿ, ಎನ್‌ಎಸ್‌ಎಸ್ ಶಿಬಿರಗಳು ಪ್ರತಿ ಗ್ರಾಮದಲ್ಲೂ ನಡೆಯಬೇಕು. ಇಂತಹ ಶಿಬಿರಗಳು ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹಾಕಲು ಸಹಕಾರಿಯಾಗಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ಶಿಬಿರ ಯಶಸ್ವಿಗೊಳಿಸಬೇಕು ಎಂದರು.

ಪ್ರಾಂಶುಪಾಲ ಡಾ.ನಿಶಾಂತ್ ಎ.ನಾಯ್ಡು ಅಧ್ಯಕ್ಷತೆ ವಹಿಸಿ ಮಾತನಾಡಿ, ಎನ್‌ಎಸ್‌ಎಸ್ ಶಿಬಿರಗಳು ಕೇವಲ ಗ್ರಾಮಗಳನ್ನು ಸ್ವಚ್ಛತೆ ಮಾಡಲು ಮಾತ್ರ ಸೀಮಿತವಾಗಬಾರದು. ಅದರ ಜೊತೆಗೆ ಜನರ ಮನಸ್ಸುಗಳನ್ನು ಸಹ ಪರಿವರ್ತನೆ ಮಾಡುವಂತಾಗಬೇಕು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಸ್ವಚ್ಛತೆ ಮಾಡುವ ಜೊತೆಗೆ ಜನರಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಬೇಕು, ಸರ್ಕಾರಿ ಯೋಜನೆಗಳು, ಸವಲತ್ತುಗಳ ಬಗ್ಗೆ ತಿಳಿಸಿಕೊಡುವ ಜತೆಗೆ ಅರ್ಜಿಗಳನ್ನು ಭರ್ತಿ ಮಾಡುವುದು, ಅವಿದ್ಯಾವಂತ ಯುವಕ–ಯುವತಿಯರು, ಮಹಿಳೆಯರಿಗೆ ಅಕ್ಷರದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಶಿಬಿರಾರ್ಥಿಗಳು ಮಾಡಬೇಕು ಎಂದು ಸಲಹೆ ನೀಡಿದರು.

ಎಸ್‌ಟಿಜಿ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಿಂದ ನಡೆಯುತ್ತಿರುವ ಮೊದಲ ಎನ್‌ಎಸ್‌ಎಸ್ ಶಿಬಿರವಾಗಿದ್ದು, ಶಿಬಿರದ ಯಶಸ್ಸಿಗೆ ಎಲ್ಲಾ ವಿದ್ಯಾರ್ಥಿಗಳು ಶ್ರಮಿಸಬೇಕು. ಗ್ರಾಮದ ಜನತೆ ಶಿಬಿರಾರ್ಥಿಗಳನ್ನು ತಮ್ಮ ಮಕ್ಕಳಂತೆ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ವೇಳೆ ಗ್ರಾಪಂ ಮಾಜಿ ಸದಸ್ಯ ಸಿ.ಡಿ. ಮಹದೇವು, ಗ್ರಾಮದ ಯಜಮಾನರಾದ ರಾಜೇಗೌಡ, ಲಕ್ಷ್ಮೇಗೌಡ, ದೇವೆಗೌಡ, ಎನ್‌ಎಸ್‌ಎಸ್ ಅಧಿಕಾರಿ ನಾಗೇಂದ್ರ, ನವೀನ್ ಕುಮಾರ್, ಗಣೇಶ್, ಗಿರಿದರ್ಶನ್ ಸೇರಿದಂತೆ ಹಲವರಿದ್ದರು.

ಜಾಗೃತಿ ಜಾಥ

ಮಂಡ್ಯ, ಜು.1– ವಿಶ್ವ ಮಲೇರಿಯಾ ದಿನಾಚರಣೆ, ಮಲೇರಿಯಾ ವಿರೋಧ ಮಾಸಾಚರಣೆ ಹಾಗೂ ಡೆಂಗ್ಯೂ ವಿರೋಧ ಮಾಸಾಚರಣೆ ಅಂಗವಾಗಿ ಜು.4ರಂದು ಬೆಳಗ್ಗೆ 11 ಗಂಟೆಗೆ ಸಂಜಯ ವೃತ್ತದಲ್ಲಿ ಜಾಗೃತಿ ಜಾಥ ಹಮ್ಮಿಕೊಳ್ಳಲಾಗಿದೆ.

ಜಾಥವನ್ನು ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಉದ್ಘಾಟಿಸಲಿದ್ದು, ಜಿಲ್ಲಾ ಮಟ್ಟದ ಆರೋಗ್ಯಾಧಿಕಾರಿಗಳು ಇರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಈಜಲು ಹೋದ ಇಬ್ಬರು ಬಾಲಕರು ನೀರುಪಾಲು

ಮದ್ದೂರು, ಜು.1– ನೀರಿನಲ್ಲಿ ಈಜುತ್ತಿದ್ದಾಗ ಇಬ್ಬರು ಬಾಲಕರು ನೀರು ಪಾಲಾಗಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಮದ್ದೂರಮ್ಮ ದೇವಾಲಯದ ಹಿಂಭಾಗದ ರೈಲ್ವೆ ಹಳಿ ಬಳಿ ಇರುವ ಕೊಲ್ಲಿಯಲ್ಲಿ ಬಾಲಕರು ಈಜಲು ಹೋಗಿದ್ದ ವೇಳೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ರಾಮ್– ರಹೀಮ್ ನಗರದ ನಾಲ್ಕನೇ ಕ್ರಾಸ್ ನಿವಾಸಿ ಅಹಮ್ಮದ್ ಪಾಷಾ ಅವರ ಮಗ ಅಜಲಮ್ ಪಾಷಾ (16), ಅಕ್ಮಲ್ ಅವರ ಮಗ ಮಹಮ್ಮದ್ ಅಲಿ (13) ಸಾವನ್ನಪ್ಪಿದ ಬಾಲಕರು. ಮೃತ ಬಾಲಕರು ಸಂಬಂಧಿಗಳಾಗಿದ್ದಾರೆ.

ಮೊನ್ನೆಯಷ್ಟೇ ಬಕ್ರೀದ್ ಹಬ್ಬ ಆಚರಿಸಿದ್ದ ಬಾಲಕರು ಶನಿವಾರ ಸಂಜೆ 4:30ರಲ್ಲಿ ನೀರು ಹರಿಯುವ ಕೊಲ್ಲಿಯಲ್ಲಿ ಈಜಲು ತೆರಳಿದ್ದು, ಈ ವೇಳೆ ಮಹಮ್ಮದ್ ಆಲಿ ನೀರಿನಲ್ಲಿ ಮುಳುಗುತ್ತಿದ್ದು, ಇದನ್ನು ಕಂಡ ಅಜಲಮ್ ಪಾಷಾ ರಕ್ಷಣೆಗೆ ಮುಂದಾಗಿದ್ದು, ಆದರೆ ನೀರಿನ ಸುಳಿಗೆ ಸಿಲುಕಿ ಇಬ್ಬರು ನೀರು ಪಾಲಾಗಿದ್ದಾರೆ. ಪೊಲೀಸರು ಬಾಲಕರ ಮೃತ ದೇಹಗಳನ್ನು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದು, ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೀಮನ ಕೆಂಪೇಗೌಡ ನಿಧನ



ಕೆ.ಆರ್.ಪೇಟೆ, ಜು.1– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡ, ಬೆಂಗಳೂರು ಎನ್‌ಜಿಇಎಫ್ ಕಂಪನಿ ನಿವೃತ್ತ ನೌಕರ ಭೀಮನ ಕೆಂಪೇಗೌಡ(74) ಶನಿವಾರ ನಿಧನರಾದರು.

ಮೃತರು ಪತ್ನಿ ಗೌರಮ್ಮ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಮ್ಮದೇ ರೋಚಕ ಅನುಭವಗಳನ್ನು ಬಿಚ್ಚಿಟ್ಟ ತಮಿಳು ಲೇಖಕ ಪೆರುಮಾಳ್ ಮುರುಗನ್



ಮೈಸೂರು, ಜೂ.1(ಸಿಎನ್)– ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ 2015ರ ವತಿಯಿಂದ, ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಲಾಗಿದ್ದ, ಮೈಸೂರು ಸಾಹಿತ್ಯ ಸಂಭ್ರಮದ ಏಳನೇ ಆವೃತ್ತಿಯ 'Is the pen Mightier? politics of Culture and Defiance' ಸಂವಾದ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತು.

ಸಂವಾದದಲ್ಲಿ ಖ್ಯಾತ ತಮಿಳು ಲೇಖಕ ಪೆರುಮಾಳ್ ಮುರುಗನ್ ಪಾಲ್ಗೊಂಡು, ಕರ್ನಾಟಕದಲ್ಲಿ ಕಲ್ಬುರ್ಗಿ, ಗೌರಿ ಲಂಕೇಶ್ ರೀತಿ ನನಗೂ ಅನೇಕ ಬೆದರಿಕೆ ಕರೆಗಳು ಬಂದಿವೆ, ಇದಕ್ಕೆ ಮೂಲ ಕಾರಣ ನಾನು ವಾಸುದೇವನ್ ಅವರ 'ಮಾಥೋರುಭಾಗನ್' (2010) ಕಾದಂಬರಿಯನ್ನು ಇಂಗ್ಲಿಷ್‌ಗೆ 'ಒನ್ ಪಾರ್ಟ್ ವುಮನ್' ಅನುವಾದಿಸಿದ್ದೆ. ಘಟನೆ ನಡೆದು 7 ವರ್ಷಗಳಾಗಿವೆ. ಈ ಬಗ್ಗೆ ಈಗಲೂ ಬೇಸರವಿದೆ. ಈ ಪುಸ್ತಕದ ವಿರುದ್ಧ ಹಿಂದೂಪರ ಸಂಘಟನೆಗಳು ಸೇರಿದಂತೆ ಅನೇಕ ಗುಂಪುಗಳು ನನ್ನ ವಿರುದ್ಧ ಪ್ರತಿಭಟನೆ ನಡೆಸಿದವು. ಇದೆಲ್ಲದರಿಂದ ಬೇಸತ್ತ ನಾನು 2014ರ ಫೇಸ್‌ಬುಕ್ ಪೋಸ್ಟ್‌ನಲ್ಲಿ, ಲೇಖಕ ಪೆರುಮಾಳ್ ಮುರುಗನ್ ನಿಧನರಾಗಿದ್ದಾರೆ. ಅವನು ದೇವರಲ್ಲ. ಅವರು ಪುನರುತ್ಥಾನಗೊಳ್ಳುವುದಿಲ್ಲ. ಇನ್ನು ಮುಂದೆ ಪಿ.ಮುರುಗನ್ ಎಂಬ ಶಿಕ್ಷಕ ಮಾತ್ರ ಬದುಕಿರುತ್ತಾನೆ ಎಂದು ನಾನೇ ಬರೆದುಕೊಂಡಿದ್ದೆ ಎಂದರು.

ಪಶ್ಚಿಮ ತಮಿಳುನಾಡಿನ ಪ್ರಭಾವಿ ಮಧ್ಯವರ್ತಿ ಜಾತಿಯಾದ ಕೊಂಗು ವೆಳ್ಳಾಲ ಗೌಂಡರ್ ಸಮುದಾಯವು ನಿರ್ದಿಷ್ಟವಾಗಿ ಕಾದಂಬರಿಯಲ್ಲಿ ತಮ್ಮ ಮಹಿಳೆಯರನ್ನು ಅವಮಾನಿಸಿದ್ದಾರೆ ಮತ್ತು ಹಿಂದೂ ದೇವತೆಯನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಆದಾಗ್ಯೂ, ಜುಲೈ 2016ರಲ್ಲಿ ಮದ್ರಾಸ್ ಹೈಕೋರ್ಟ್ 'ಶಾಂತಿ ಸಭೆ' ಕಾನೂನುಬಾಹಿರ ಎಂದು ತೀರ್ಪು ನೀಡಿತ್ತು ಮತ್ತು ಲೇಖಕರ ವಿರುದ್ಧ ಜಾತಿ ಗುಂಪುಗಳು ದಾಖಲಿಸಿದ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳನ್ನು ವಜಾಗೊಳಿಸಿತು. ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯ ಪುನರುತ್ಥಾನಗೊಳ್ಳಲಿ, ಬರೆಯಿರಿ ಎಂದು ನ್ಯಾಯಾಲಯ ಹೇಳಿದೆ. 2017ರಲ್ಲಿ, 'ಒನ್ ಪಾರ್ಟ್ ವುಮನ್' ಸಾಹಿತ್ಯ ಅಕಾಡೆಮಿಯ ಅನುವಾದ ವಿಭಾಗದ ಬಹುಮಾನವನ್ನು ಪಡೆದಿದೆ ಎಂದು ಮಾಹಿತಿ ನೀಡಿದರು.

ಇಂಗ್ಲಿಷ್ ಮತ್ತು ಹಿಂದಿಯನ್ನು ಭಾರತೀಯ ಭಾಷೆಗಳಾಗಿ ಮಾತನಾಡುತ್ತಾರೆ. ಆದರೆ ಉಳಿದವುಗಳನ್ನು ಪ್ರಾದೇಶಿಕ ಭಾಷೆಗಳು ಎಂದು ವರ್ಗೀಕರಿಸಲಾಗಿದೆ. ಅದು ತಪ್ಪು. ನಮ್ಮ ಭಾಷೆಗಳ ಪುಸ್ತಕಗಳು – ದಕ್ಷಿಣದ ಭಾಷೆಗಳು ಮತ್ತು ಉತ್ತರದ ಹಿಂದಿಯೇತರ ಭಾಷೆಗಳು – ಅಂತಾರಾಷ್ಟ್ರೀಯ ಪ್ರಶಸ್ತಿ ಪಟ್ಟಿಗೆ ಬಂದಾಗ ಆ ರೀತಿಯ ಗ್ರಹಿಕೆ ಬದಲಾಗುತ್ತದೆಯೇ? ಎಂದು ಪ್ರಶ್ನಿಸಿದರು.

ಬಳಿಕ 'ಪೂನಾಚ್ಚಿ' ಪುಸ್ತಕದ ಬಗ್ಗೆ ಮಾತನಾಡಿ, ಈ ಪುಸ್ತಕ ಬರೆದಿದ್ದೆ ಒಂದು ರೋಚಕ. ಒಂದು ಮೇಕೆಯ ಬಗ್ಗೆ ಈ ಪುಸ್ತಕ ಬರೆದಿದ್ದೇನೆ. ಸುಮಾರು 200 ಪುಟಗಳ ಪುಸ್ತಕಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಪಬ್ಲಿಷರ್‌ಗಳು ಕೇಳುತ್ತಾರೆ ಬೇರೆ ವಿಷಯಗಳ ಬಗ್ಗೆ ಏಕೆ ಬರೆಯುವುದಿಲ್ಲ ಎಂದು. ಅದಕ್ಕೆ ನಾನು ಹೇಳಿದೆ, ಪ್ರಾಣಿ, ಮನುಷ್ಯನ ಬಗ್ಗೆ ಬರೆಯುತ್ತೇನೆ, ನಾಯಿ, ಬೆಕ್ಕು ಬಗ್ಗೆ ಬರೆಯುತ್ತೇನೆ. ಆದರೆ ಹಸು, ಹಂದಿ ಬಗ್ಗೆ ಬರೆದು ವಿವಾದಕ್ಕೆ ಗುರಿ ಯಾಗಲಾರೆ ಎಂದರು.

ಪೆರುಮಳ್ ಮುರುಗನ್ ಅವರು ತಮಿಳು ಭಾಷೆಯಲ್ಲಿ ಮಾತನಾಡಿದ್ದನ್ನು, ಸುಂದರಮ್ ಕಣ್ಣನ್ ಅವರು ಇಂಗ್ಲಿಷ್‌ಗೆ ಅನುವಾದಿಸಿದರು. ಸಂವಾದದಲ್ಲಿ ಲೇಖಕ ರವಿ ಜೋಶಿ ಉಪಸ್ಥಿತರಿದ್ದರು.

ದಂತಕಥೆಗಳ ಕಣ್ಣಿಗೆ ಕಟ್ಟಿದ ಸಾಧಕರು!



ಮೈಸೂರು, ಜೂ. 1(ಸಿಎನ್)– ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ 2015ರ ವತಿಯಿಂದ, ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಲಾಗಿದ್ದ, 'Bridging the Cultural Gap publishing Folklore, Historic legends' ಸಂವಾದ ನಡೆಯಿತು.

ಕಾರ್ಯಕ್ರಮದ ಎರಡನೇ ಸೆಷನ್‌ನಲ್ಲಿ ಖ್ಯಾತ ಕಾದಂಬರಿಗಾರ ಜೆರ್ರಿ ಪಿಂಟು ಮಾತನಾಡಿ, ಸಾಮಾಜಿಕ ಮಾಧ್ಯಮದಲ್ಲಿನ ನಿರಂತರ ಸ್ಕ್ರಾಲ್ ಅನ್ನು ತೊರೆದು ಪುಸ್ತಕಗಳ ಮೂಲಕ ತಮ್ಮ ಸುತ್ತಮುತ್ತಲಿನ ಜನರ ಒಳಗಣ್ಣನ್ನು ತೆರೆಸಲು ಎಲ್ಲರೂ ಮುಂದಾಗಬೇಕಿದೆ ಎಂದು ಕರೆ ನೀಡಿದರು.

'ಯುವಕರು ಒಂದು ಕಪ್ ಕಾಫಿಗೆ 180 ರೂಪಾಯಿ ಖರ್ಚು ಮಾಡುವುದನ್ನು ನಾನು ನೋಡಿದ್ದೇನೆ, ಪುಸ್ತಕಕ್ಕೆ 300 ರೂ. ಎಂದು ಹೇಳಿ ಹಿಂದೇಟು ಹಾಕುತ್ತಾರೆ.

ನಮಗೆಲ್ಲರಿಗೂ, ಸಾಕ್ಷರತೆಯು ನಮ್ಮ ಟೂಲ್ ಕಿಟ್‌ನ ಒಂದು ಭಾಗವಾಗಿದೆ. ಅದು ಒಂದು ಸವಲತ್ತು ಎಂಬುದನ್ನು ನಾವು ಮರೆತಿದ್ದೇವೆ. ಈ ಹಿಂದೆ ದೂರದರ್ಶನ ಬ್ಲಾಕ್ ಅಂಡ್ ವೈಟ್ ಆಗಿತ್ತು. ದಿನಕ್ಕೆ ನಾಲ್ಕು ಗಂಟೆಗಳ ಕಾರ್ಯಕ್ರಮ. ಒಂದೇ ಒಂದು ಚಾನೆಲ್ ಇತ್ತು ಮತ್ತು ಅದನ್ನು ಸರ್ಕಾರವೇ ನಡೆಸುತ್ತಿತ್ತು. ಹಿಂದೆ ಇಂಟರ್ನೆಟ್ ಇಲ್ಲ, ವೀಡಿಯೋಗಳಿಲ್ಲ, ಯೂಟ್ಯೂಬ್ ಇರಲಿಲ್ಲ. ಆದ್ದರಿಂದ ನಮ್ಮ ಸುತ್ತಲಿನ ಕೆಲವು ಕಠೋರ ವಾಸ್ತವಗಳಿಂದ ನಮ್ಮನ್ನು ಬೇರ್ಪಡಿಸಲು ಸಾಧ್ಯವಾಯಿತು ಎಂದರು.

ನಮ್ಮಲ್ಲಿರುವ ಅಸಡ್ಡೆಯನ್ನು ಮೊದಲು ಹೋಗಲಾಡಿಸಬೇಕು. ಎಲ್ಲರೂ ಪುಸ್ತಕ ಓದಲು ಪ್ರೇರೇಪಿಸಬೇಕು. ಅಲ್ಲದೇ ನಾವು ಓದಂತಹ ಪುಸ್ತಕಗಳನ್ನು ಇನ್ನೊಬ್ಬರಿಗೆ ಕೊಟ್ಟು ಓದಲು ಪ್ರೋತ್ಸಾಹಿಸಬೇಕು. ಎಲ್ಲೆಡೆ ಗ್ರಂಥಾಲಯಗಳನ್ನು ತೆರೆಯಬೇಕು ಎಂದರು.

ನಿಮ್ಮ ಸುತ್ತಲಿನ ಪ್ರಪಂಚಕ್ಕೆ ನಿಮ್ಮನ್ನು ತೆರೆದುಕೊಳ್ಳುವುದು, ಓದುವುದರಿಂದ ಮತ್ತು ನೀವು ಸಾಧ್ಯವಾದಷ್ಟು ಎಲ್ಲರೊಂದಿಗೆ ಬೆರೆಯುವುದರಿಂದ, ದ್ವೇಷಕ್ಕಿಂತ ಹೆಚ್ಚಾಗಿ ಸ್ನೇಹವನ್ನು ಆಧರಿಸಿ ಜಗತ್ತನ್ನು ನಿರ್ಮಿಸುವುದು ನಾವು ಬಯಸಿದರೆ, ಅದು ಸಾಧ್ಯವಿದೆ ಎಂದರು.

ನೀವು ಖರೀದಿಸುವ ಪ್ರತಿಯೊಂದು ಪುಸ್ತಕವು ವ್ಯರ್ಥವಾಗುವುದಿಲ್ಲ. ಅರಿವು ಮೂಡಿಸುತ್ತದೆ. ನಿಮಗೆ ಸವಾಲು ಹಾಕುತ್ತದೆ, ನಿಮ್ಮ ಜ್ಞಾನವನ್ನು ವಿಸ್ತರಿಸುತ್ತದೆ, ನಿಮ್ಮನ್ನು ವಿಭಿನ್ನ ವ್ಯಕ್ತಿಯನ್ನಾಗಿ ಮಾಡುತ್ತದೆ ಮತ್ತು ಬದಲಾವಣೆಯು ಆಳವಾದ ಪುಷ್ಟೀಕರಣದ ಆತ್ಮವಾಗಿದೆ ಎಂದರು.

ಬಳಿಕ ಸಾಹಿತ್ಯ ವಿಮರ್ಶಕಿ ಹಾಗೂ ಲೇಖಕಿ ಕೃಷ್ಣಾ ಮನವಳ್ಳಿ ಮಾತನಾಡಿ, ನನ್ನ ಮಾತೃಭಾಷೆ ತೆಲುಗು, ಕನ್ನಡ ರಾಜ್ಯ ಭಾಷೆ; ತದನಂತರ ಮನೆಯಲ್ಲಿ ಮತ್ತು ಸಾಮಾಜಿಕ ವಲಯಗಳಲ್ಲಿ ಯಾವಾಗಲೂ ಇಂಗ್ಲಿಷ್ ಬಳಸುತ್ತೇನೆ. ಇಂಗ್ಲಿಷ್ ಸಾಹಿತ್ಯದ ಮೇಲಿನ ಪ್ರೀತಿ ನನ್ನ ತಾತ ನಂಜುಂಡರಾವ್ ಅವರಿಂದ ಮತ್ತು ಕನ್ನಡ ಸಾಹಿತ್ಯ ಪರಿಚಯ ನನ್ನ ಚಿಕ್ಕಪ್ಪ, ವಿಮರ್ಶಕ ಕೆ.ಆರ್ ನಾಗರಾಜ್ ಅವರಿಂದ ಆಯಿತು. ನಾನು ಸಾಹಿತ್ಯದಲ್ಲಿ ಉನ್ನತ ಅಧ್ಯಯನವನ್ನು ಮುಂದುವರಿಸಿದಾಗ ಅನುವಾದವು ಸ್ವಾಭಾವಿಕವಾಗಿ ಆಕರ್ಷಿತವಾಯಿತು. ನಾನು ಭಾರತದ ಹಲವಾರು ಸ್ಥಳಗಳಲ್ಲಿ ಪ್ರಯಾಣಿಸಿದ್ದೇನೆ, ವಾಸಿಸಿದ್ದೇನೆ. ಆ ಮೂಲಕ ಸಾಕಷ್ಟು ಸೃಜನಶೀಲ ಅನುವಾದ ರೂಢಿಸಿಕೊಂಡಿದ್ದೇನೆ ಎಂದರು.

ನಂತರ ಪೊನ್ನಿಯಾನ್ ಸೆಲ್ವಂ ಪುಸ್ತಕದ ಲೇಖಕಿ ಕೃಷ್ಣ ಪ್ರೀಥಾ ರಾಜಾ ಕಣ್ಣನ್, ತಂಜಾವೂರಿನ 'ದೊಡ್ಡ ದೇವಾಲಯ'ದ ಚಿತ್ರಣ ಕಣ್ಣಿಗೆ ಕಟ್ಟಿದರು.

ಸಂವಾದದಲ್ಲಿ ಕಣ್ಣನ್ ಸುಂದರಮ್ ಹಾಗೂ ಲಕ್ಷ್ಮೀ ಪೆಲಕೊಂಡ ಉಪಸ್ಥಿತರಿದ್ದರು.

ಐಎಸ್ ಜೊತೆ ನಂಟು: ಕರ್ನಾಟಕದ 9 ಮಂದಿ ವಿರುದ್ಧ ಪೂರಕ ಆರೋಪಪಟ್ಟಿ ಸಲ್ಲಿಸಿದ ಎನ್‌ಐಎ

ನವದೆಹಲಿ: ಐಎಸ್ ಉಗ್ರ ಸಂಘಟನೆಯ ಜೊತೆ ಸೇರಿ ದೇಶದಾದ್ಯಂತ ಭಯೋತ್ಪಾದನಾ ಕೃತ್ಯ ನಡೆಸಲು ಸಂಚು ರೂಪಿಸಿದ ಪ್ರಕರಣಕ್ಕೆ ಸಂಬಂಧಿಸಿ ಕರ್ನಾಟಕದ ಒಂಬತ್ತು ಮಂದಿಯ ವಿರುದ್ಧ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಮೊದಲ ಪೂರಕ ಆರೋಪಪಟ್ಟಿ ಸಲ್ಲಿಸಿದೆ.

ಮೊಹಮ್ಮದ್ ಶಾರಿಕ್ (25), ಮಾಝ್ ಮುನೀರ್ ಅಹಮ್ಮದ್ (23), ಸಯ್ಯದ್ ಯಾಸಿನ್ (22), ರಿಶಾನ್ ತಾಜುದ್ದೀನ್ ಶೇಖ್ (22), ಹುಝೈರ್ ಫರ್ಹಾನ್ ಬೇಗ್(22), ಮಝಿನ್ ಅಬ್ದುಲ್ ರಹಮಾನ್(22), ನದೀಂ ಅಹಮ್ಮದ್ ಕೆ.ಎ.(22), ಜಬೀವುಲ್ಲಾ (32) ಮತ್ತು ನದೀಂ ಫೈಸಲ್ ಎನ್.(27) ಎಂಬುವವರ ವಿರುದ್ಧ ಪೂರಕ ಆರೋಪಪಟ್ಟಿ ಸಲ್ಲಿಸಲಾಗಿದೆ.

ಎಲ್ಲಾ ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆಯಡಿ (ಯುಎಪಿಎ) ಮತ್ತು ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಾಗಿತ್ತು ಎಂದು ಎನ್‌ಐಎ ತಿಳಿಸಿದೆ.

ದಾಳಿಗಳನ್ನು ನಡೆಸುವ ಕೌಶಲಕ್ಕಾಗಿ ಆರೋಪಿಗಳಲ್ಲಿ ಐವರಿಗೆ ರೊಬೊಟಿಕ್ಸ್ ಕೋರ್ಸ್ ಮಾಡಲು ಐಎಸ್ ಸಂಘಟನೆಯನ್ನು ನಿರ್ವಹಣೆ ಮಾಡುವವರು ಸೂಚಿಸಿದ್ದರು ಎಂದೂ ಆರೋಪಿಸಿದೆ.

ಉಗ್ರ ಚಟುವಟಿಕೆಗಳಿಗೆ ಮತ್ತು ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಸಲುವಾಗಿ ಶಾರಿಕ್, ಮುನೀರ್ ಮತ್ತು ಯಾಸಿನ್ ವಿದೇಶದಲ್ಲಿರುವ ಐಎಸ್ ಉಗ್ರರ ಜೊತೆ ಸೇರಿ ಕ್ರಿಮಿನಲ್ ಪಿತೂರಿ ನಡೆಸಿರುವುದು ತನಿಖೆಯಿಂದ ತಿಳಿದುಬಂದಿದೆ. ದೇಶದ ಸುರಕ್ಷತೆ, ಏಕತೆ ಮತ್ತು ಸಾರ್ವಭೌಮತೆಗೆ ಧಕ್ಕೆ ತರುವ ಉದ್ದೇಶದಿಂದ ಈ ಮೂವರು ಇತರ ಆರೋಪಿಗಳನ್ನು ತಮ್ಮ ಜೊತೆ ಸೇರಿಸಿಕೊಂಡಿದ್ದರು ಎಂದೂ ಎನ್‌ಐಎ ಹೇಳಿದೆ.

ಐಎಸ್ ಸಂಘಟನೆಯ ಕಾರ್ಯಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ನಿರ್ವಹಣೆ ಮಾಡುವವರು ಈ ಆರೋಪಿಗಳಿಗೆ ಕ್ರಿಪ್ಟೊ ಕರೆನ್ಸಿ ಮೂಲಕ ಹಣಕಾಸಿನ ನೆರವು ನೀಡಿದ್ದರು ಎಂದಿದೆ.

ಮಹಾರಾಷ್ಟ್ರದಲ್ಲಿ ಚಲಿಸುತ್ತಿದ್ದ ಬಸ್‌ಗೆ ಇದ್ದಕ್ಕಿದ್ದಂತೆ ಹೊತ್ತಿಕೊಂಡ ಬೆಂಕಿ; 26 ಮಂದಿ ದುರ್ಮರಣ, 7 ಪ್ರಯಾಣಿಕರಿಗೆ ಗಾಯ



ಮುಂಬೈ: ಚಲಿಸುತ್ತಿದ್ದ ಬಸ್‌ವೊಂದಕ್ಕೆ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡ ಪರಿಣಾಮ 26 ಮಂದಿ ಸಜೀವ ದಹನವಾಗಿ, 7 ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಹಾರಾಷ್ಟ್ರ ಸಮೃದ್ಧಿ ಮಹಾಮಾರ್ಗ್ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಶನಿವಾರ ನಡೆದಿದೆ.

ಬುಲ್ಧಾನ ಜಿಲ್ಲೆಯ ಸಿಂಧಖೇದರಾಜ ಬಳಿಯ ಪಿಂಪಲಖುಟಾ ಗ್ರಾಮದ ಬಳಿ ಸಮೃದ್ಧಿ ಹೆದ್ದಾರಿಯಲ್ಲಿ ಈ ಅಪಘಾತ ಸಂಭವಿಸಿದೆ. ಈ ಪ್ರಯಾಣಿಕರ ಬಸ್ ನಾಗ್ಪುರದಿಂದ ಪುಣೆಗೆ ಹೋಗುತ್ತಿತ್ತು ಎನ್ನಲಾಗಿದ್ದು, ಇಂದು ಬೆಳಗಿನ ಜಾವ 2 ಗಂಟೆಗೆ ಸುಮಾರಿಗೆ ಈ ಭೀಕರ ಅಪಘಾತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.

ಅಪಘಾತಕ್ಕೀಡಾದ ಬಸ್ ವಿದರ್ಭ ಟ್ರಾವೆಲ್ಸ್‌ಗೆ ಸೇರಿದ್ದಾಗಿದ್ದು, ಬಸ್‌ನಲ್ಲಿ ನಾಗ್ಪುರ, ವಾರ್ಧಾ ಮತ್ತು ಯವತ್ಮಾಲ್‌ನಿಂದ ಪ್ರಯಾಣಿಕರು ಪ್ರಯಾಣಿಸುತ್ತಿದ್ದರು ಎಂದು ವರದಿಗಳು ತಿಳಿಸಿವೆ.

ಸಿಂಧಖೇಡರಾಜ ಸಮೀಪದ ಪಿಂಪಲಖುಟಾ ಗ್ರಾಮದ ಬಳಿ ಸಮೃದ್ಧಿ ಹೆದ್ದಾರಿಯಲ್ಲಿ ಬಸ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ಬಸ್‌ಗೆ ಬೆಂಕಿ ಹೊತ್ತಿಕೊಂಡಿದೆ. ಬೆಂಕಿ ಕಾಣಿಸಿಕೊಂಡ ನಂತರ ಕೇವಲ ಎಂಟು ಮಂದಿ ಪ್ರಯಾಣಿಕರು ಮಾತ್ರ ಹೊರಬರಲು ಸಾಧ್ಯವಾಗಿದೆ. ಇನ್ನುಳಿದ 25 ಮಂದಿ ಪ್ರಯಾಣಿಕರು ಸಜೀವ ದಹನವಾಗಿದ್ದಾರೆ.

ಇನ್ನು ಬಸ್‌ಗೆ ಬೆಂಕಿ ಬಿದ್ದ ಸುದ್ದಿ ತಿಳಿದ ಪೊಲೀಸರು ಮತ್ತು ಅಗ್ನಿಶಾಮಕದಳ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ದೌಡಾಯಿಸಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು. ಬಸ್ಸಿನಿಂದ 25 ಮೃತದೇಹಗಳನ್ನು ಹೊರತೆಗೆದು ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಅಲ್ಲದೆ, ಘಟನೆಯಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಾಯಗೊಂಡಿದ್ದ 8 ಮಂದಿಯ ಪೈಕಿ ಇದೀಗ ಓರ್ವ ವ್ಯಕ್ತಿ ಸಾವನ್ನಪ್ಪಿದ್ದು, ಇದರೊಂದಿಗೆ ಮೃತರ ಸಂಖ್ಯೆ 26ಕ್ಕೆ ಏರಿಕೆಯಾಗಿದೆ. ಘಟನೆ ವೇಳೆ ಬಸ್ಸಿನಲ್ಲಿ ಒಟ್ಟು 33 ಜನರು ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ. ಗಾಯಾಳುಗಳನ್ನು ಬುಲ್ಧಾನ ಸಿವಿಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಬುಲ್ಧಾನ ಪೊಲೀಸ್ ಉಪ ಎಸ್ಪಿ ಬಾಬುರಾವ್ ಮಹಾಮುನಿ ತಿಳಿಸಿದ್ದಾರೆ.

ಸುರಕ್ಷಿತವಾಗಿ ಪಾರಾದವರಲ್ಲಿ ಚಾಲಕ ಮತ್ತು ಸಹಾಯಕ ಸೇರಿದ್ದಾರೆ. ಇದೇ ವೇಳೆ ಗಾಯಾಳುಗಳನ್ನು ಸಮೀಪದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಾಹಿತಿಯ ಪ್ರಕಾರ, ಈ ಪ್ರಯಾಣಿಕರಲ್ಲಿ ಹೆಚ್ಚಿನವರು ನಾಗ್ಪುರ, ವಾರ್ಧಾ ಮತ್ತು ಯವತ್ಮಾಲ್ ನಿವಾಸಿಗಳಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬಸ್ ಮೊದಲು ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದು ನಂತರ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬಸ್ ಪಲ್ಟಿಯಾಗಿದೆ. ಬಳಿಕ ಬದುಕುಳಿದ ಪ್ರಯಾಣಿಕರು ಬಸ್ಸಿನ ಬಾಗಿಲು ಒದ್ದು ಮತ್ತು ಗಾಜುಗಳನ್ನು ಒಡೆದು ಹೊರಬಂದಿದ್ದಾರೆಂದು ತಿಳಿದುಬಂದಿದೆ.

ಅಪಘಾತದ ನಂತರ ಬಸ್ಸಿನಿಂದ ಹೆಚ್ಚಿನ ಪ್ರಮಾಣದ ಡೀಸೆಲ್ ರಸ್ತೆಯ ಮೇಲೆ ಸೋರಿಕೆಯಾಗಿದೆ. ಈ ವೇಳೆ ಬಸ್‌ನ ಇಂಜಿನ್‌ನಲ್ಲಿ ಸ್ಪಾರ್ಕ್ ಆಗಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ಬಸ್‌ನಿಂದ 25 ಮೃತದೇಹಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಬಸ್ಸಿನಿಂದ ಹೊರತೆಗೆದ ಮೃತದೇಹಗಳನ್ನು ಗುರುತಿಸುವುದು ಕಷ್ಟವಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯ ಕಲ್ಪಿಸಲು ಶ್ರಮಿಸಿ

● ಡಾ.ಎಸ್.ಸೆಲ್ವಕುಮಾರ್ ಸಲಹೆ ● ಕೆಡಿಪಿ ಸಭೆ ನಡೆಸಿ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸುವ ಪ್ರಯತ್ನ ● ಸುದೀರ್ಘ ಕಾಲ ಸಭೆ ನಡೆಸಿ, ಇಲಾಖಾವಾರು ಪ್ರಗತಿ ಪರಿಶೀಲನೆ

ಮೈಸೂರು,ಜು.1(ಎಂಟಿವೈ)– ಗ್ರಾಮೀಣ ಪ್ರದೇಶಕ್ಕೆ ಮೂಲ ಸೌಲಭ್ಯ ಕಲ್ಪಿಸುವುದರೊಂದಿಗೆ ಸರ್ಕಾರದ ವಿವಿಧ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೂ ಆಗಿರುವ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವ ಕುಮಾರ್ ಸಲಹೆ ನೀಡಿದ್ದಾರೆ.



ಮೈಸೂರು ಜಿ.ಪಂ. ಸಭಾಂಗಣದಲ್ಲಿ ಶನಿವಾರ ಜಿಲ್ಲಾಮಟ್ಟದ ಮಾಸಿಕ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶ ಒಳಗೊಂಡಂತೆ ಎಲ್ಲೆಡೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರ ವಹಿಸಬೇಕು. ಮೇವು, ಕುಡಿಯುವ ನೀರಿನ ಲಭ್ಯತೆಗೆ ತಕ್ಕಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಎಲ್ಲಿಯೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಮಸ್ಯೆ ಉಲ್ಬಣಗೊಳ್ಳದಂತೆ ನೋಡಿಕೊಳ್ಳಬೇಕು ಎಂದರು.

ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು. ಅಂಗನವಾಡಿ, ಶಾಲಾ ಕೊಠಡಿ ಹಾಗೂ ಮಕ್ಕಳ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸುವ ಕಾರ್ಯ ಮಾಡಬೇಕು. ಅಪೌಷ್ಟಿಕತೆಯುಳ್ಳ ಮಕ್ಕಳ ಸರ್ವೆ ಕಾರ್ಯ ಪೂರ್ಣಗೊಳಿಸಬೇಕು ಎಂದು ಸಲಹೆ ನೀಡಿದರು.

ನಿವೃತ್ತಿಗೂ ಮುನ್ನವೇ ಹೊಸಬರ ನೇಮಕ ಮಾಡಿ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಬಸವರಾಜು ಮಾತನಾಡಿ, ಜಿಲ್ಲೆಯಲ್ಲಿ 2922 ಅಂಗನವಾಡಿ ಕೇಂದ್ರವಿದ್ದು, ಅವುಗಳಲ್ಲಿ 2768 ಅಂಗನವಾಡಿ ಕಾರ್ಯಕರ್ತೆಯರು, 2609 ಸಹಾಯಕಿಯರು ಸೇವೆ ಸಲ್ಲಿಸುತ್ತಿದ್ದಾರೆ. ಉಳಿದ ಅಂಗನವಾಡಿ ಕೇಂದ್ರಗಳಿಗೆ ನೂತನವಾಗಿ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಇದಕ್ಕೆ ಡಿಸಿ ಡಾ.ಕೆ.ವಿ.ರಾಜೇಂದ್ರ ಪ್ರತಿಕ್ರಿಯಿಸಿ ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ನಿವೃತ್ತಿಯಾಗುವ ಅಂಗನವಾಡಿ ಕಾರ್ಯಕರ್ತೆಯರ ಪಟ್ಟಿ ಮಾಡಿ ಕೊಳ್ಳಬೇಕು. ನಿವೃತ್ತಿಗೂ ಆರು ತಿಂಗಳ ಮುನ್ನವೇ ಹೊಸ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಶೀಘ್ರದಲ್ಲೇ ಸಭೆ: ಮೈಸೂರಲ್ಲಿ ನಿರ್ಮಿಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು ಇನ್ನು 20.66 ಕೋಟಿ ರೂ.ಅನುದಾನದ ಅವಶ್ಯಕತೆ ಇದೆ. ಈಗಾಗಲೇ 14.66 ಕೋಟಿ ರೂ.ಖರ್ಚಾಗಿದೆ. ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿರುವ ಮ್ಯೂಸಿಯಂ ಮಾದರಿಯಲ್ಲಿ ಇಲ್ಲಿಯೂ ಮಾಡುವ ಪ್ರಸ್ತಾವನೆ ಇಟ್ಟಿದ್ದಾರೆ. ಅದಕ್ಕಾಗಿ ಇಲಾಖೆ ಕಾರ್ಯದರ್ಶಿ, ಆಯುಕ್ತರು, ಮುಖ್ಯ ಇಂಜಿನಿಯರ್ ಸೇರಿ ಸಂಬಂಧಿಸಿದ ಅಧಿಕಾರಿಗಳ ಸಭೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಬೇಕಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಎಸ್.ಸೆಲ್ವಕುಮಾರ್ ಈ ಬಗ್ಗೆ ಸಚಿವರು ಮತ್ತು ಸರ್ಕಾರದ ಜೊತೆಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಫೆರಿಫರಲ್ ರಸ್ತೆ: ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಮಾತನಾಡಿ, ನಗರದ ಹೊರವಲಯದಲ್ಲಿ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಟೆಂಡರ್ ಕರೆಯಲಾಗಿದ್ದು, ಎರಡು ಮೂರು ದಿನಗಳಲ್ಲಿ ಟೆಂಡರ್ ಫ್ಲೋಟಿಂಗ್ ಆಗಲಿದೆ. ಅಂದಾಜು 1894 ಕೋಟಿ ರೂ.ವೆಚ್ಚದಲ್ಲಿ ಸುಮಾರು 900 ಕೋಟಿ ರೂ. ಭೂ ಸ್ವಾಧೀನಕ್ಕೆ ಬೇಕಾಗಲಿದೆ. ಉಳಿದ ಅನುದಾನ ಅಭಿವೃದ್ಧಿಗೆ ಬೇಕಾಗುತ್ತದೆ. ಅಲೈನ್‌ಮೆಂಟ್ ಸಿದ್ಧಗೊಂಡ ಬಳಿಕ ಡಿಪಿಆರ್ ತಯಾರಾಗಲಿದೆ ಎಂದು ವಿವರಿಸಿದರು.

ರೇಷ್ಮೆ ಬೆಳೆಯುವ ಪ್ರದೇಶ ವಿಸ್ತರಣೆ: ರೇಷ್ಮೆ ಇಲಾಖೆ ಉಪ ನಿರ್ದೇಶಕರು ಮಾತನಾಡಿ, ಚೈನಾದಿಂದ ರೇಷ್ಮೆ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿದ ಮೇಲೆ ಮೂರು ವರ್ಷದಿಂದ ರೇಷ್ಮೆ ಗೂಡಿಗೆ ಉತ್ತಮ ದರ ಸಿಗುತ್ತಿರುವುದರಿಂದ ರೇಷ್ಮೆ ಬೆಳೆ ಪ್ರದೇಶ ವಿಸ್ತಾರವಾಗಿದೆ. ಕಳೆದ ವರ್ಷ 350 ಎಕರೆ ಗುರಿ ಇದ್ದರೆ, 550 ಎಕರೆಯಲ್ಲಿ ಬೆಳೆದಿದ್ದು ಈ ಬಾರಿ 400 ಎಕರೆಗೆ ಕಡ್ಡಿ ಹಾಕಲಾಗಿದೆ ಎಂದರು.

ವರುಣಕ್ಕೆ ಪ್ರತ್ಯೇಕ ಆಸ್ಪತ್ರೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ವರುಣ ಹೋಬಳಿಗೆ ಚೋರನಹಳ್ಳಿಯಲ್ಲಿ ಪ್ರತ್ಯೇಕ ಆಸ್ಪತ್ರೆ ನಿರ್ಮಾಣ ಮಾಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಚೋರನಹಳ್ಳಿ ಗ್ರಾಮದ ಬಳಿ 2.2 ಎಕರೆ ಗುರುತಿಸಲಾಗಿದೆ. ಕಟ್ಟಡ ನಿರ್ಮಾಣ, ವೈದ್ಯರು, ಸಿಬ್ಬಂದಿ ನಿಯೋಜನೆಗೂ ಪ್ರಸ್ತಾಪ ಮಾಡಲಾಗಿದೆ. ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ತಾಲ್ಲೂಕುಗಳಿಗೆ ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳಿಗೆ ಬೇಡಿಕೆ ಇರುವುದರಿಂದ ಸಚಿವರ ಗಮನಕ್ಕೆ ತರಲಾಗಿದೆ. ಎಎನ್‌ಎಂ ಕೊರತೆ ನೀಗಿಸಲು ನೇಮಕಾತಿಗೆ ಸರ್ಕಾರಕ್ಕೆ ಕೋರಲಾಗಿದೆ. ಜಿಲ್ಲೆಯಲ್ಲಿ 16 ವೈದ್ಯರ ಹುದ್ದೆ ಖಾಲಿಯಿದೆ. ಪಿರಿಯಾಪಟ್ಟಣದಲ್ಲಿ ಎರಡು ಹುದ್ದೆ ಖಾಲಿಯಿದೆ. ಸರ್ಕಾರ ವೈದ್ಯರಿಗೆ 60 ಸಾವಿರ ವೇತನ ನಿಗದಿ ಮಾಡಿದ್ದು, ನೂತನವಾಗಿ ವೈದ್ಯರಾಗಲು ಬಯಸುವವರು 70 ರಿಂದ 80 ಸಾವಿರ ವೇತನ ಬಯಸುತ್ತಿದ್ದಾರೆ ಎಂದರು.

ನಗರ ಗ್ರಂಥಾಲಯಕ್ಕೆ ಕೊಡಬೇಕಿರುವ ಕರ ಬಾಕಿಯನ್ನು ಪಾವತಿಸುವ ವಿಚಾರದಲ್ಲಿ ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, 2021ರಿಂದ 2023ವರೆಗೆ ಪಾವತಿಸಲಾಗಿದೆ. 2005 ರಿಂದಲೂ ಬಾಕಿ ಉಳಿದಿರುವ ಕಾರಣ ಬೇರೆ ಬೇರೆ ವ್ಯವಸ್ಥೆ ಮಾಡಿ ಕರ ಬಾಕಿ ಮುಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಅಕ್ಟೋಬರ್‌ನಿಂದ ಬಾರದ ಪ್ರೋತ್ಸಾಹಧನ

ಹಾಲು ಉತ್ಪಾದಕರಿಗೆ ಸರ್ಕಾರದಿಂದ ಕೊಡುವ 5 ರೂ. ಪ್ರೋತ್ಸಾಹಧನ ಅಕ್ಟೋಬರ್ ತಿಂಗಳಿಂದ ಪಾವತಿಯಾಗಿಲ್ಲವೆಂದು ಮೈಮುಲ್ ಉಪ ನಿರ್ದೇಶಕರು ಉಸ್ತುವಾರಿ ಕಾರ್ಯದರ್ಶಿ ಗಮನಕ್ಕೆ ತಂದರು. 8.46 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಮೂರು ಲಕ್ಷ ಲೀಟರ್ ಹಾಲು ಮಾರಾಟವಾದರೆ, 2.88 ಟನ್ ಪೌಡರ್ ಕ್ಷೀರಭಾಗ್ಯಕ್ಕೆ ನೀಡಲಾಗುತ್ತದೆ ಎಂದರು. ಅಕ್ಟೋಬರ್‌ನಲ್ಲಿ 96, ಸೆಪ್ಟಂಬರ್‌ನಲ್ಲಿ 23, ನವೆಂಬರ್‌ನಲ್ಲಿ 43, ಡಿಸೆಂಬರ್‌ನಲ್ಲಿ 81, ಜನವರಿ ತಿಂಗಳಲ್ಲಿ 72, ಫೆಬ್ರವರಿಯಲ್ಲಿ 77, ಮಾರ್ಚ್‌ನಲ್ಲಿ 80, ಏಪ್ರಿಲ್‌ನಲ್ಲಿ 70 ಕೋಟಿ ರೂ.ಬಾಕಿ ಉಳಿಸಿಕೊಳ್ಳಲಾಗಿದೆ ಎಂದು ವಿವರಿಸಿದರು. ಈ ವೇಳೆ ಸರಿಯಾದ ಮಾಹಿತಿ ನೀಡಲು ತಡವರಿಸಿದ ಅಧಿಕಾರಿಗೆ ಬಿಸಿ ಮುಟ್ಟಿಸಿದರು.

ಭಾವ–ಭಾಮೈದರ ಜಗಳ ಬಿಡಿಸಲು ಹೋದ ಅಮಾಯಕ ಜೀವಕ್ಕೆ ಕುತ್ತು ತಂದುಕೊಂಡ!

ಮೈಸೂರು, ಜು.1–ಭಾವ–ಭಾಮೈದರ ನಡುವಿನ ಜಗಳ ಬಿಡಿಸಲು ಹೋದ ಅಮಾಯಕ ವ್ಯಕ್ತಿಯನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿದ ಘಟನೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಆರ್‌ಎಂಸಿ ಹಿಂಭಾಗ ನಡೆದಿದೆ.

ಆರ್‌ಎಂಸಿ ಹಿಂಭಾಗ ವಾಸವಿರುವ ಪಾಂಡಿಯರಾಜ್(26) ಹತ್ಯೀಡಾದವನಾಗಿದ್ದು, ಜೂ.29ರಂದು ರಾತ್ರಿ ಇವರ ನೆರೆಹೊರೆಯವರಾದ ಅಯ್ಯನ್ ಎಂಬಾತ ಆತನ ಭಾವ ಮಂಜುನಾಥ್ ಜೊತೆ ಜಗಳವಾಡುತ್ತಿದ್ದಾಗ ಇವರ ಜಗಳ ಬಿಡಿಸಲು ಪಾಂಡಿಯರಾಜ್ ಮುಂದಾಗಿದ್ದಾನೆ. ಆಗ ಅಯ್ಯನ್ ಚಾಕುವಿನಿಂದ ಆತನ ಎದೆಗೆ ಚುಚ್ಚಿ ಹತ್ಯೆಗೈದಿದ್ದಾನೆ.

ಈ ಸಂಬಂಧ ಪಾಂಡಿಯರಾಜ್‌ನ ಸಂಬಂಧಿಕರಾದ ಸೆಲ್ವರಾಜ್ ಎಂಬಾತ ಮಂಡಿ ಠಾಣೆ ಪೊಲೀಸರಿಗೆ ನೀಡಿದ ದೂರಿನಲ್ಲಿ ಅಯ್ಯನ್ ಮತ್ತು ಮಂಜುನಾಥ್ ನಡುವಿನ ಗಲಾಟೆ ಬಿಡಿಸಲು ಹೋದ ಪಾಂಡಿಯರಾಜ್‌ಗೆ ಅಯ್ಯನ್ ಕೈಯ್ಯಲ್ಲಿದ್ದ ಚಾಕು ತಾಗಿ ಆತ ಸಾವನ್ನಪ್ಪಿದ್ದಾನೆ ಈ ಸಾವು ಹೃದಯಾಘಾತದಿಂದ ಸಂಭವಿಸಿದೆಯೇ ಅಥವಾ ಚಾಕುವಿನಿಂದ ಆಗಿರುವ ಗಾಯದಿಂದ ಸಂಭವಿಸಿದೆಯೇ ಎಂಬುವುದರ ಬಗ್ಗೆ ತನಗೆ ಅನುಮಾನವಿರುವುದಾಗಿ ತಿಳಿಸಿದ್ದಾರೆ. ಆ ಸಂದರ್ಭದಲ್ಲಿ ಪೊಲೀಸರು ಯುಡಿಆರ್ ಕಲಂ 174(3) ಅನ್ವಯ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ವೇಳೆ ಚಾಕುವಿನಿಂದ ಚುಚ್ಚಿದ ಗಾಯದಿಂದಾಗಿ ಪಾಂಡಿಯರಾಜ್ ಸಾವನ್ನಪ್ಪಿದ್ದಾನೆ ಎಂಬುದು ಪ್ರಾಥಮಿಕ ವರದಿಯಿಂದ ತಿಳಿದು ಬಂದ ಹಿನ್ನೆಲೆಯಲ್ಲಿ ಜೂ.30ರಂದು ಮಂಡಿ ಠಾಣೆ ಇನ್ಸ್‌ಪೆಕ್ಟರ್ ನಾಗೇಶ್ ಅವರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

22.8 ಮಿ.ಮೀ. ಮಳೆ ಕೊರತೆ, ಬಿತ್ತನೆ, ರಸಗೊಬ್ಬರ ದಾಸ್ತಾನು

ಮೈಸೂರು, ಜು.1 (ಎಂಟಿವೈ)– ಪ್ರಸಕ್ತ ಸಾಲಿನಲ್ಲಿ ಮುಂಗಾರು ಆರಂಭವಾಗಿದ್ದರೂ ಮೈಸೂರು ಜಿಲ್ಲೆಯಲ್ಲಿ ಜೂನ್ ಅಂತ್ಯದವರೆಗೆ 22.8 ಮಿ.ಮೀರಷ್ಟು ಮಳೆ ಕೊರತೆ ಉಂಟಾಗಿದೆ. ಆದರೂ ಕೃಷಿ ಚಟುವಟಿಕೆಗೆ ಅಗತ್ಯವಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ದಾಸ್ತಾನು ಮಾಡಿಕೊಳ್ಳಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ್ ತಿಳಿಸಿದ್ದಾರೆ.

ಕೆಡಿಪಿ ಸಭೆಯಲ್ಲಿ ಕೃಷಿ ಇಲಾಖೆ ಪ್ರಗತಿ ಕುರಿತಂತೆ ಮಾಹಿತಿ ನೀಡಿದ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮೈಸೂರು ಜಿಲ್ಲೆಯಲ್ಲಿ 22.8 ಮಿ.ಮೀ ರಷ್ಟು ಮಳೆ ಕಡಿಮೆ ಬಿದ್ದಿದೆ. ಜನವರಿಯಿಂದ ಜೂನ್‌ವರೆಗೆ 290.1 ಮಿ.ಮೀ ವಾಡಿಕೆ ಮಳೆ ಬರಬೇಕಾಗಿತ್ತು. ಆದರೆ, ಈ ಬಾರಿ 267.3 ಮಿ.ಮೀನಷ್ಟು ಮಳೆಯಾಗಿದೆ. ಏಪ್ರಿಲ್‌ನಲ್ಲಿ 32.5 ಮಿ.ಮೀ, ಮೇ ತಿಂಗಳಲ್ಲಿ 38.7 ಮಿ.ಮೀ, ಜೂನ್‌ನಲ್ಲಿ 29.1 ಮಿ.ಮೀ ಕಡಿಮೆಯಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ ಶೇ.8ರಷ್ಟು ಮಳೆ ಕೊರತೆ ಕಂಡು ಬಂದಿದೆ. ಜಿಲ್ಲೆಯಲ್ಲಿ ಪಿರಿಯಾಪಟ್ಟಣ ತಾಲೂಕಲ್ಲಿ ಶೇ.34 ರಷ್ಟು, ಹುಣಸೂರು ತಾಲೂಕಲ್ಲಿ ಶೇ.14ರಷ್ಟು, ಸರಗೂರು ತಾಲೂಕಲ್ಲಿ ಶೇ.11ರಷ್ಟು, ಮೈಸೂರು, ನಂಜನಗೂಡು ತಾಲೂಕಲ್ಲಿ ಶೇ.8, ತಿ.ನರಸೀಪುರ ತಾಲೂಕಲ್ಲಿ ಶೇ.2ರಷ್ಟು ಮಳೆ ಕೊರತೆಯಾಗಿದೆ ಎಂದು ವಿವರಿಸಿದರು.



ಮೈಸೂರು ಜಿಲ್ಲೆಯಲ್ಲಿ 1,03,000 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಿದ್ದು, 64,375 ಕ್ವಿಂಟಾಲ್ ಬಿತ್ತನೆ ಭತ್ತದ ಬೇಡಿಕೆ ಇದೆ. ಅದರಲ್ಲಿ ಈಗಾಗಲೇ ರೈತರಿಗೆ ವಿತರಿಸಲು ವಿವಿಧ ತಳಿಯ 64,100 ಕ್ವಿಂಟಾಲ್ ಬಿತ್ತನೆ ಭತ್ತ ದಾಸ್ತಾನು ಮಾಡಲಾಗಿದೆ. ಸುಧಾರಿತ ತಳಿ ಜೋಳ 280 ಕ್ವಿಂಟಾಲ್, ರಾಗಿ 6750 ಕ್ವಿಂಟಾಲ್, ಮುಸುಕಿನ ಜೋಳ 5500 ಕ್ವಿಂಟಾಲ್, ತೊಗರಿ 400, ಉದ್ದು 1550, ಹೆಸರು 950, ಅಲಸಂದೆ 7500 ಕ್ವಿಂಟಾಲ್ ದಾಸ್ತಾನು ಮಾಡಲಾಗಿದೆ. ಈಗಾಗಲೇ ಭತ್ತ, ಜೋಳ, ತೊಗರಿ ಹೊರತುಪಡಿಸಿ ಉಳಿದ ದವಸ ಏಕ ಹಾಗೂ ದ್ವಿದಳ ಧಾನ್ಯಗಳ ಬಿತ್ತನೆ ಬೀಜ ವಿತರಿಸಲಾಗುತ್ತಿದೆ ಎಂದರು.

ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ವಿವಿಧ ಬಗೆಯ ರಸಗೊಬ್ಬರ ಸೇರಿದಂತೆ 1,26,999 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ವ್ಯಕ್ತವಾಗಿದೆ. ಜೂನ್ ಅಂತ್ಯದವರೆಗೆ 79,354 ಮೆಟ್ರಿಕ್ ಟನ್ ವಿತರಿಸಲಾಗಿದ್ದು, ಇನ್ನು 35,866 ಮೆಟ್ರಿಕ್ ಟನ್ ರಸಗೊಬ್ಬರು ದಾಸ್ತಾನು ಮಾಡಲಾಗಿದೆ. ಜಿಲ್ಲೆಯಲ್ಲಿ ಜ್ಯೋತಿ ತಳಿಯ ಭತ್ತಕ್ಕೆ ಬೇಡಿಕೆ ಹೆಚ್ಚಾಗಿದ್ದು, ದುರುಪಯೋಗ ತಡೆಗಟ್ಟುವ ನಿಟ್ಟಿನಲ್ಲಿ ಕ್ಯುಆರ್ ಕೋಡ್ ವ್ಯವಸ್ಥೆ ಮಾಡಲಾಗಿದ್ದು, ಕೆವೈಸಿ ಮಾಡಿಸಿರುವ ರೈತರು ಸ್ಕ್ಯಾನ್ ಮಾಡಿ, ಅಗತ್ಯಕ್ಕೆ ಅನುಗುಣವಾಗಿ ಭತ್ತ ಪಡೆದುಕೊಳ್ಳಬಹುದು ಎಂದು ತಿಳಿಸಿದರು.


ಈ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮಾತನಾಡಿ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಲಾರಿ ಬಾಡಿಗೆ ಹೆಚ್ಚಾಗಿದೆ ಎಂದು ಕಾರಣ ನೀಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ದೂರು ಕೇಳಿಬಂದಿದೆ. ಕೂಡಲೇ ಪರಿಶೀಲನೆಗೆ ಸ್ಕ್ವಾಡ್ ಕಳುಹಿಸಿ, ಯಾವ ಅಂಗಡಿಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೋ ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್ ಪ್ರತಿಕ್ರಿಯಿಸಿ, ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕಬೇಕು. ಅಲ್ಲದೇ, ರಸಗೊಬ್ಬರ ಸಾಗಾಟಕ್ಕೆ ದರ ನಿಗದಿ ಮಾಡುವುದಕ್ಕೆ ಸಂಬಂಧಿಸಿದಂತೆ ಏಜೆನ್ಸಿಯೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಅಪಘಾತದಲ್ಲಿ ಗಾಯಗೊಂಡು ನರಳುತ್ತಿದ್ದ ಕರು ಕಂಡು ಮರುಗದ ಮಹಾಜನರು!

● ವಿದ್ಯಾರ್ಥಿ ನವೀನ್ ಜೋಸ್ ತಂಡದ ಸ್ತುತ್ಯಾರ್ಹ ಕಾರ್ಯ;
● ಪೀಪಲ್ ಫಾರ್ ಅನಿಮಲ್‌ನಲ್ಲಿ ಆಶ್ರಯ ಪಡೆದ ಕರು

ಮೈಸೂರು, ಜು.1–ಮೈಸೂರಿನ ರಿಂಗ್ ರಸ್ತೆಯಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಎರಡು ಕಾಲು ಕಳೆದುಕೊಂಡು ದಿನವಿಡೀ ನರಳುತ್ತಿದ್ದ ಕರುವೊಂದನ್ನು ವಿದ್ಯಾರ್ಥಿಗಳ ತಂಡ ಆರೈಕೆ ಮಾಡಿ, ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆಗೆ ಹಸ್ತಾಂತರಿಸುವ ಮೂಲಕ ಮಾನವೀಯತೆ ಮೆರೆದಿದೆ.



ಗಾಯಗೊಂಡು ನರಳುತ್ತಿರುವ ಕರುವಿನ ಆರೈಕೆಯಲ್ಲಿ ತೊಡಗಿರುವ ವಿದ್ಯಾರ್ಥಿ ನವೀನ್ ಜೋಷಿ ತಂಡ

ಕಾಡಂಚಿನ ಗ್ರಾಮವಾದ ಹನೂರು ತಾಲೂಕು ಮಾರ್ಟಳ್ಳಿಯ ವಿದ್ಯಾರ್ಥಿ ನವೀನ್ ಜೋಸ್ ಅವರು ಮೈಸೂರಿನ ಖಾಸಗಿ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದು, ಮೈಸೂರಿನ ರಿಂಗ್ ರಸ್ತೆಯಲ್ಲಿರುವ ನಾರಾಯಣ ಹೃದಯಾಲಯದ ಎದುರಿನ ಅಲ್ಪಸಂಖ್ಯಾತರ ಹಾಸ್ಟೆಲ್‌ನಲ್ಲಿದ್ದಾರೆ.

ಇಂದು ಬೆಳಗ್ಗೆ 9.30ರ ಸುಮಾರಿನಲ್ಲಿ ಅವರು ಹಾಸ್ಟೆಲ್‌ನಿಂದ ಹೊರ ಹೋಗುತ್ತಿದ್ದಾಗ ರಿಂಗ್ ರಸ್ತೆಯ ಮಧ್ಯೆ ಎರಡು ಕಾಲು ಮುರಿದಿರುವ ಕರುವೊಂದು ನರಳುತ್ತಿತ್ತು. ಯಾವುದೋ ವಾಹನ ಡಿಕ್ಕಿ ಹೊಡೆದ ಪರಿಣಾಮ ಈ ಕರು ಕಾಲು ಕಳೆದುಕೊಂಡು ನರಳುತ್ತಿತ್ತು ಅದರ ಸುತ್ತ ಕೆಲವರು ನಿಂತಿದ್ದರಿಂದ ಈ ವ್ಯಕ್ತಿಗಳು ಕರುವಿನ ರಕ್ಷಣೆಗೆ ಮುಂದಾಗುತ್ತಾರೆ ಎಂಬ ವಿಶ್ವಾಸದಿಂದ ನವೀನ್ ಜೋಸ್ ಅಲ್ಲಿಂದ ತೆರಳಿದ್ದರು.

ಸಂಜೆ 7.30ರ ಸುಮಾರಿಗೆ ಆಕಸ್ಮಿಕವಾಗಿ ಆ ಸ್ಥಳಕ್ಕೆ ಬಂದಾಗ ಕರು ಇನ್ನೂ ಅಲ್ಲೇ ನರಳುತ್ತಿತ್ತು ಅದನ್ನು ಯಾರೂ ರಕ್ಷಿಸಿರಲಿಲ್ಲ. ಅದರ ಸ್ಥಿತಿ ಕಂಡ ನವೀನ್ ಜೋಸ್ ತನ್ನೂರಿನವರೇ ಆಗಿದ್ದು, ಇವರಿರುವ ಹಾಸ್ಟೆಲ್‌ನಲ್ಲೇ ವಾಸ್ತವ್ಯವಿರುವ ವಿದ್ಯಾರ್ಥಿಗಳಾದ ಸೀಸಲ್, ಪ್ರವೀಣ್, ರಾಹುಲ್, ಸೆಲ್ವಂ ಅವರುಗಳನ್ನು ಕರೆಸಿಕೊಂಡು ಬಕೆಟ್‌ವೊಂದರಲ್ಲಿ ನೀರು ತಂದು ಕರುವಿಗೆ ಕುಡಿಸಿ ಅದರ ಆರೈಕೆಯಲ್ಲಿ ತೊಡಗಿದರು. ಆದರೆ ಈ ಕರುವನ್ನು ರಕ್ಷಿಸುವುದು ಹೇಗೆ ಎಂಬುದು ಅವರಿಗೆ ತಿಳಿಯಲಿಲ್ಲ. ಹೀಗಾಗಿ ಅವರು 'ಮೈಸೂರು ಮಿತ್ರ'ನಿಗೆ ಕರೆ ಮಾಡಿ ವಿಷಯ ತಿಳಿಸಿದರು.

'ಮಿತ್ರ'ನಿಂದ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂಗೆ ಮಾಹಿತಿ ನೀಡಲಾಗಿ ಅಲ್ಲಿದ್ದ ಸಿಬ್ಬಂದಿ, ನಗರ ಪಾಲಿಕೆಯವರಿಗೆ ವಿಷಯ ತಿಳಿಸಿ ಕರುವಿನ ರಕ್ಷಣೆಗೆ ಮುಂದಾಗುವುದಾಗಿ ಹೇಳಿದ್ದರು. ಗಂಟೆಗಳೇ ಕಳೆದರೂ ಕರು ರಕ್ಷಣೆಗೆ ಯಾರೂ ಧಾವಿಸಿಲ್ಲ ಎಂದು ನವೀನ್ ಜೋಸ್ ನೊಂದು ಕರೆ ಮಾಡಿದಾಗ ಮತ್ತೆ ಕಂಟ್ರೋಲ್ ರೂಂ ಅನ್ನು ಸಂಪರ್ಕಿಸಲಾಗಿ ನಗರ ಪಾಲಿಕೆಯವರು ಕರೆ ಸ್ವೀಕರಿಸುತ್ತಿಲ್ಲ ಎಂಬ ಉತ್ತರ ಬಂತು.

ಕೊನೆಗೆ ಯಾರಿಂದಲೋ ಪೀಪಲ್ ಫಾರ್ ಅನಿಮಲ್ ಸಂಸ್ಥೆಯ ದೂರವಾಣಿ ಸಂಖ್ಯೆಯನ್ನು ಪಡೆದ ನವೀನ್ ಜೋಸ್ ಹಾಗೂ ಸ್ನೇಹಿತರು, ಕೊನೆಗೆ ರಾತ್ರಿ 10.15ರ ಸುಮಾರಿನಲ್ಲಿ ಪೀಪಲ್ ಫಾರ್ ಅನಿಮಲ್ ಸಂಸ್ಥೆಯ ಆಂಬುಲೆನ್ಸ್‌ನಲ್ಲಿ ಕರುವನ್ನು ಸಾಗಿಸುವ ಮೂಲಕ ಅದನ್ನು ರಕ್ಷಿಸಿ ಮಾನವೀಯತೆ ಮೆರೆದಿದ್ದಾರೆ. ಕಾಡಂಚಿನ ಗ್ರಾಮವಾದ ಮಾರ್ಟಳ್ಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳನ್ನು ಸಾಕಲಾಗುತ್ತಿದೆ. ಅಲ್ಲಿನ ಗ್ರಾಮಸ್ಥರು ಪ್ರೀತಿಯಿಂದ ಜಾನುವಾರುಗಳನ್ನು ಕಾಡಿಗೆ ಅಟ್ಟಿಕೊಂಡು ಹೋಗಿ ಮೇಯಿಸುತ್ತಾರೆ. ಅದೇ ರೀತಿ ಹೈನುಗಾರಿಕೆಯಿಂದ ಸಾಧ್ಯವಾದಷ್ಟು ಆದಾಯವನ್ನೂ ಗಳಿಸುತ್ತಾರೆ. ಆ ಗ್ರಾಮದ ಇಂತಹ ವಾತಾವರಣವೇ ಈ ವಿದ್ಯಾರ್ಥಿಗಳು ಕರುವಿನ ಕರುಣಾಜನಕ ಸ್ಥಿತಿಯನ್ನು ನೋಡಿ ಮರುಗುವಂತೆ ಮಾಡಿತ್ತು ನೋವಿನ ಸಂಗತಿ ಎಂದರೆ ಈ ರಸ್ತೆಯಲ್ಲಿ ಸಂಚರಿಸುವ ನೂರಾರು ಮಂದಿ ಕರುವಿನ ಸ್ಥಿತಿ ನೋಡಿಯೂ ಅದರ ರಕ್ಷಣೆಗೆ ಮುಂದಾಗದೇ ಹೋದದ್ದಂತೂ ಅಮಾನವೀಯ ವರ್ತನೆಯೇ ಸರಿ.



ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಶನಿವಾರ ಸುತ್ತೂರು ಮಠಕ್ಕೆ ಕುಟುಂಬ ಸದಸ್ಯರೊಂದಿಗೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.



ಮೈಸೂರು ಜಿಲ್ಲಾ ಫುಟ್ಬಾಲ್ ಅಸೋಸಿಯೇಷನ್ ಅಧ್ಯಕ್ಷರಾಗಿ ಆಯ್ಕೆಯಾದ ಮಾಜಿ ಕಾರ್ಪೋರೇಟರ್ ಎನ್.ಕುಶಲ್ ಕುಮಾರ್ ಹಾಗೂ ನೂತನ ಕಾರ್ಯದರ್ಶಿ ಇಟ್ಟಿಗೆಗೂಡಿನ ಮಂಜುನಾಥ್ ಅವರನ್ನು ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ಲೋಕನಾಥಗೌಡ, ಬಿ.ಕೆ.ಸೋಮಶೇಖರ್, ನಾಗರಾಜು ಮುಂತಾದವರು ಅಭಿನಂದಿಸಿದರು.

ವಿಪಕ್ಷ ನಾಯಕನ ಆಯ್ಕೆ ಸಂಬಂಧ ಇಂದು ದೆಹಲಿಯಲ್ಲಿ ಸಭೆ; ಯಡಿಯೂರಪ್ಪ ಉಪಸ್ಥಿತಿ

ಬೆಂಗಳೂರು, ಜು.1–ಬಿಜೆಪಿ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನಾಳೆ (ಭಾನುವಾರ) ಬೆಳಗ್ಗೆ 11 ಗಂಟೆಗೆ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ನಾಳೆ ಮಧ್ಯಾಹ್ನ 3 ಗಂಟೆಗೆ ದೆಹಲಿಯ ರಾಷ್ಟ್ರೀಯ ಬಿಜೆಪಿ ಕಚೇರಿಯಲ್ಲಿ ನಡೆಯುವ ಮಹತ್ವದ ಸಭೆಯಲ್ಲಿ ಯಡಿಯೂರಪ್ಪ ಭಾಗವಹಿಸಲಿದ್ದು, ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಆಯ್ಕೆ ಸಂಬಂಧ ನಡೆಯಲಿರುವ ಚರ್ಚೆಯಲ್ಲಿ ಪಕ್ಷದ ವರಿಷ್ಠರಿಗೆ ಸೂಕ್ತ ಸಲಹೆ ನೀಡಲಿದ್ದಾರೆ. ಜು.3ರಂದು ವಿಧಾನ ಮಂಡಲ ಅಧಿವೇಶನ ಆರಂಭವಾಗುವ ಹಿನ್ನೆಲೆಯಲ್ಲಿ ಅಷ್ಟರೊಳಗಾಗಿ ವಿಪಕ್ಷ ನಾಯಕರ ಆಯ್ಕೆ ನಡೆಯಬೇಕಾದ ಅನಿವಾರ್ಯತೆ ಇರುವುದರಿಂದ ನಾಳಿನ ಸಭೆ ಮಹತ್ವದ್ದಾಗಿದೆ. ಬಿಜೆಪಿ ವರಿಷ್ಠರು ಯಡಿಯೂರಪ್ಪ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಲಹೆಯ ಮೇರೆಗೆ ವಿಪಕ್ಷ ನಾಯಕನ ಆಯ್ಕೆ ಮಾಡಲಿದ್ದು, ನಾಳೆ ಸಂಜೆಯೊಳಗಾಗಿ ವಿಧಾನಸಭೆ ವಿಪಕ್ಷ ನಾಯಕನ ಹೆಸರು ಘೋಷಣೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಪಿಹೆಚ್.ಡಿ ಪದವಿ

ಮೈಸೂರು, ಜು.1– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರೊ.ಡಿ.ನಾಗಣ್ಣ ಅವರ ಮಾರ್ಗದರ್ಶನದಲ್ಲಿ ಜಮೀರ್ ಅಹಮದ್ ಅವರು ಸಾದರಪಡಿಸಿದ 'ಮೈಸೂರು ನಗರದ ಮುಸ್ಲಿಂರು: ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧವನ್ನು ಮುಕ್ತ ವಿವಿ, ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ. ಹಾಸನ ಜಿಲ್ಲೆ, ಅರಕಲಗೂಡು ತಾಲೂಕು ಕೊಣನೂರು ನಿವಾಸಿಯಾದ ಜಮೀರ್ ಅಹಮದ್, ಪ್ರಸ್ತುತ ಕೊಡಗು ವಿಶ್ವವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಗ್ಯಾರಂಟಿ ಹೆಸರಲ್ಲಿ ಜನರಿಗೆ ಮೋಸ ಮಾಡಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ

● ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪರಿಂದ ವಾಗ್ದಾಳಿ
● ಕೇಂದ್ರದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ತರುವವರೆಗೆ ವಿಶ್ರಮಿಸಲ್ಲ



ಬೆಂಗಳೂರು, ಜು. 1(ಕೆಎಂಶಿ)–ಕೇಂದ್ರದಲ್ಲಿ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವವರೆಗೆ ವಿಶ್ರಮಿಸುವುದಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಜನರು ಬೆಂಬಲಿಸಲಿದ್ದಾರೆ. ಮೋಸಗಾರರಾದ ಕಾಂಗ್ರೆಸ್‌ನವರನ್ನು ಬೆಂಬಲಿಸುವುದಿಲ್ಲ; ಬಿಜೆಪಿ ಕಳೆದ ಬಾರಿ 25 ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ಸಿಗೆ ಕೇವಲ ಒಂದು ಸ್ಥಾನ ಮಾತ್ರ ಸಿಕ್ಕಿತ್ತು ಎಂದು ತಿಳಿಸಿದರು.

ಅಲ್ಲೊಬ್ಬರು, ಇಲ್ಲೊಬ್ಬರು ಪಕ್ಷದ ನಾಯಕರ ವಿರುದ್ಧ ಮಾತನಾಡುವುದು ಮತ್ತು ಆಪಾದನೆ ಮಾಡುವುದು ಸೂಕ್ತವಲ್ಲ ಎಂದು ಮುಖಂಡರು ಸೂಚಿಸಿದ್ದಾರೆ. ಬಿಜೆಪಿಯಲ್ಲಿ ಬಹಿರಂಗ ಹೇಳಿಕೆ ಕೊಡುವ ಪ್ರಶ್ನೆ ಇಲ್ಲ. ನಮ್ಮ ಪಕ್ಷದಲ್ಲಿ ಇನ್ನು ಮುಂದೆ ಅಶಿಸ್ತು ಇರುವುದಿಲ್ಲ ಎಂಬ ವಿಶ್ವಾಸ ನಮಗೆಲ್ಲರಿಗೂ ಇದೆ ಎಂದರು.

ಗ್ಯಾರಂಟಿಗಳನ್ನು ಕೊಟ್ಟು ಜನರಿಗೆ ಮೋಸ ಮಾಡಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಿದೆ. ಅವರು ಇದೀಗ ವಿದ್ಯುತ್ ದರ ಏರಿಸಿ ಬರೆ ಎಳೆದಿದ್ದಾರೆ. 200 ಯೂನಿಟ್ ವಿದ್ಯುತ್ ಉಚಿತ ಎಂದಿದ್ದರು. ವಿದ್ಯುತ್ ದರ ಏರಿಕೆ, ದಿನ ಬಳಕೆ ವಸ್ತುಗಳ ದರ ಏರಿಕೆಯಿಂದ ಜನಜೀವನ ಕಷ್ಟವಾಗಿದೆ. ನಿರುದ್ಯೋಗ ಭತ್ಯೆ, ಗೃಹಿಣಿಗೆ 2 ಸಾವಿರ ಕೊಡುವುದಾಗಿ ಹೇಳಿದ್ದು, ಅದು ಇನ್ನೂ ಜಾರಿ ಆಗಿಲ್ಲ ಎಂದು ಆಕ್ಷೇಪಿಸಿದರು.

ಅಕ್ಕಿ ವಿಚಾರದಲ್ಲಿ ಕೇಂದ್ರವನ್ನು ಎಳೆದು ತಂದದ್ದು ಸರಿಯಲ್ಲ. 10 ಕೆಜಿ ಅಕ್ಕಿ ಕೊಡಲಾಗದುದಕ್ಕೆ ಹಣ ಕೊಡಲು ಕೇಳಿದ್ದೆವು. ಈಗ 5 ಕೆಜಿಗೆ 170 ರೂ. ಕೊಡುವುದಾಗಿ ಹೇಳಿದ್ದಾರೆ. ಕೇಂದ್ರದ 5 ಕೆಜಿಗೂ ನಿಮಗೂ ಸಂಬಂಧ ಇಲ್ಲ. ಆದ್ದರಿಂದ ಮಾರುಕಟ್ಟೆ ದರದಂತೆ ಪ್ರತಿ ಮನೆಯ ಪ್ರತಿ ವ್ಯಕ್ತಿಗೂ 10 ಕೆಜಿ ಅಕ್ಕಿಗೆ ಹಣ ಕೊಡಿ ಎಂದು ಆಗ್ರಹಿಸಿದರು. ಈ ವಿಚಾರದಲ್ಲೂ ಟೋಪಿ ಹಾಕದಿರಿ ಎಂದು ತಿಳಿಸಿದರು.

ಮನೆಯೊಡತಿಗೆ 2 ಸಾವಿರ ಕೊಡುವ ವಿಚಾರದಲ್ಲೂ ಮೋಸ ಆಗಿದೆ. ಇದರ ದಿನಾಂಕ ಪ್ರಕಟಿಸಿ ಎಂದು ಒತ್ತಾಯಿಸಿದರು. ಉಚಿತ ಬಸ್ ವಿಚಾರದಲ್ಲೂ ಮೋಸವಾಗಿದೆ; ಖಾಸಗಿ ಬಸ್ಸಿನಲ್ಲಿ ಓಡಾಡುವವರು ನಿಮ್ಮ ಮತದಾರರಲ್ಲವೇ? ಎಂದು ಪ್ರಶ್ನಿಸಿದರು. ಆಟೋರಿಕ್ಷಾದವರ ಹೊಟ್ಟೆ ಮೇಲೆ ತಣ್ಣೀರಿನ ಬಟ್ಟೆ ಹಾಕುವಂತಾಗಿದೆ. ಖಾಸಗಿ ಬಸ್ ಸಿಬ್ಬಂದಿ ಪರಿಸ್ಥಿತಿ ಸುಧಾರಣೆ ಹೇಗೆ ಎಂದು ಪ್ರಶ್ನಿಸಿದರು.

ರಾಜ್ಯ ಕಾಂಗ್ರೆಸ್ ಸರಕಾರವು ಕೊಟ್ಟ ಆಶ್ವಾಸನೆ ಈಡೇರಿಸುವಂತೆ ಆಗ್ರಹಿಸಿ ಬಿಜೆಪಿ ಹೋರಾಟ ಮಾಡಲಿದೆ. ವಿಧಾನಮಂಡಲದ ಒಳಗೆ ನಮ್ಮ ಪಕ್ಷದ ಶಾಸಕರು, ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಯಡಿಯೂರಪ್ಪನವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಬಾಂಬೆ ಬಾಯ್ಸ್ ಬಗ್ಗೆ ಮಾತಾಡಿಲ್ಲ: ಬಾಂಬೆ ಬಾಯ್ಸ್ ವಿಚಾರ ನಾನು ಪ್ರಸ್ತಾಪ ಮಾಡಿಲ್ಲ. ಬಿಜೆಪಿಯಲ್ಲಿ ತುಂಬ ಅಶಿಸ್ತಿದೆ; ಇದಕ್ಕೇನು ಕಾರಣ ಎಂದು ಪತ್ರಕರ್ತರು ಈಚೆಗೆ ಪ್ರಶ್ನಿಸಿದ್ದರು. ಕಾಂಗ್ರೆಸ್ಸಿನ ಅಶಿಸ್ತಿನ ಗಾಳಿ ಬೀಸಿದೆಯೇ ಎಂದೂ ಕೇಳಿದ್ದರು. ಕಾಂಗ್ರೆಸ್ ಅಶಿಸ್ತು ನಮ್ಮ ಪಕ್ಷದ ಮೇಲೂ ಬೀಸುತ್ತಿದೆ ಎಂದು ಹೇಳಿದ್ದೆ. ಅದನ್ನು ಬಿಜೆಪಿ ಸೇರಿದ 17 ಜನ ಶಾಸಕರ ಜೊತೆ ಸೇರಿಸುವ ಪ್ರಯತ್ನ ನಡೆಯಿತು ಎಂದರು.

ಇತರ ಪಕ್ಷಗಳಿಂದ 17 ಜನರು ಬಂದ ಬಳಿಕ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ ಎಂದಿದ್ದೆ. ಆದರೆ, ಒಂದು ಟಿ.ವಿ.ಯಿಂದ ಈ ಸಮಸ್ಯೆ ಆಗಿದೆ. ಸಂಬಂಧಿತ ಟಿ.ವಿ.ಗೆ ಕೂಡಲೇ ಮಾತನಾಡಿ, ವಿಷಯ ತಿಳಿಸಿದ್ದೇನೆ ಎಂದು ಹೇಳಿದರು. ಕಾಂಗ್ರೆಸ್– ಜೆಡಿಎಸ್‌ನಿಂದ ನಮ್ಮ ಪಕ್ಷಕ್ಕೆ ಬಂದ ಶಾಸಕರಿಂದ ಅಶಿಸ್ತು ಆಗಿಲ್ಲ. ಅವರಿಂದ ಸರಕಾರ ಅಧಿಕಾರಕ್ಕೆ ಬಂದಿದೆ. ಅವರ ಬಗ್ಗೆ ಒಂದೇ ಒಂದು ಆಪಾದನೆ ಮಾಡಿಲ್ಲ. ಅವರು ಶಿಸ್ತಿನಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಚುನಾವಣೆ ಮುಗಿದ ಬಳಿಕ ಒಬ್ಬರ ಮೇಲೊಬ್ಬರು ಹೇಳಿಕೆ ನೀಡುತ್ತಿರುವುದು ದುರದೃಷ್ಟಕರ. ಹಿರಿಯರ ತಪಸ್ಸಿನ ಫಲ ಬಿಜೆಪಿ ಬೆಳವಣಿಗೆಯ ಹಿಂದಿದೆ. ಕಾಂಗ್ರೆಸ್ ಪಕ್ಷದ ಮೋಸದ ಗ್ಯಾರಂಟಿಯಿಂದ ಅವರಿಗೆ ಪ್ರಯೋಜನ ಲಭಿಸಿತು. ಚುನಾವಣೆ ಫಲಿತಾಂಶವನ್ನು ಕೆಟ್ಟ ಕನಸೆಂದು ಭಾವಿಸಿದ್ದೇವೆ. ನರೇಂದ್ರ ಮೋದಿಜಿ ಅವರನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸಲು 7 ತಂಡಗಳಾಗಿ ರಾಜ್ಯ ಪ್ರವಾಸ ಮಾಡುತ್ತಿದ್ದು, ಕಾರ್ಯಕರ್ತರ ಸಮಾವೇಶಗಳು ಯಶಸ್ವಿಯಾಗಿವೆ. ಒಂದೆರಡು ಕಡೆ ಸಣ್ಣಪುಟ್ಟ ಗೊಂದಲ ಉಂಟಾಗಿದೆ ಎಂದು ತಿಳಿಸಿದರು.

ಮತಾಂತರ ನಿಷೇಧ ಕಾಯ್ದೆ ರದ್ದಿಗೆ ವಿರೋಧ

ಮತಾಂತರ ನಿಷೇಧ ಕಾಯ್ದೆ ರದ್ದು ಮಾಡುವ ಪ್ರಸ್ತಾಪವನ್ನು ಅವರು ವಿರೋಧಿಸಿದರು. ಎಲ್ಲ ಸಾಧು ಸಂತರ ಆಶಯದಂತೆ ಮತಾಂತರ ನಿಷೇಧ ಕಾಯ್ದೆ ರದ್ದು ಮಾಡಬಾರದು; ಗೋಹತ್ಯಾ ನಿಷೇಧ ಕಾಯ್ದೆ ರದ್ದು ಮಾಡುವುದನ್ನು ಕೈಬಿಡಿ. ದ್ವೇಷದ ರಾಜಕಾರಣ ಮಾಡದಿರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಮಾಡಿದರು. ಇದೇ ವೇಳೆ ಸಿದ್ದರಾಮಯ್ಯನವರು ಕೇರಳ ಸ್ಟೋರಿ ನೋಡಲಿ ಎಂದು ಆಗ್ರಹಿಸಿದರು.



ಪ್ರಾಕೃತಿಕ ವಿಕೋಪ ಸಂಭವಿಸಿದಲ್ಲಿ ಹೇಗೆ ರಕ್ಷಣಾ ಕಾರ್ಯ ಕೈಗೊಳ್ಳಬೇಕು ಎಂಬ ಬಗ್ಗೆ 'ಅಣಕು ಪ್ರದರ್ಶನ' ಪ್ರಾತ್ಯಕ್ಷಿಕೆಯು ತಾಲೂಕಿನ ಹೆಬ್ಬೆಟ್ಟಗೇರಿ ಗ್ರಾಮದಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ನೇತೃತ್ವದಲ್ಲಿ ನಡೆಯಿತು. 9ಕ್ಕೂ ಹೆಚ್ಚು ರೀತಿಯ ಅಣಕು ಪ್ರದರ್ಶನ ನೀಡಲಾಯಿತು.

ಹೇಗಿರಲಿದೆ ಪ್ರಾಕೃತಿಕ ವಿಕೋಪದ ವೇಳೆ ರಕ್ಷಣಾ ಕಾರ್ಯ

ಮಡಿಕೇರಿ, ಜು.1– ಪ್ರಾಕೃತಿಕ ವಿಕೋಪ ಸಂಭವಿಸಿದಲ್ಲಿ ಹೇಗೆ ರಕ್ಷಣಾ ಕಾರ್ಯ ಕೈಗೊಳ್ಳಬೇಕು ಎಂಬ ಬಗ್ಗೆ 'ಅಣಕು ಪ್ರದರ್ಶನ' ಪ್ರಾತ್ಯಕ್ಷಿಕೆಯು ತಾಲೂಕಿನ ಹೆಬ್ಬೆಟ್ಟಗೇರಿ ಗ್ರಾಮದಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ನೇತೃತ್ವದಲ್ಲಿ ಜಿಲ್ಲಾಡಳಿತ, ಎನ್‌ಡಿಆರ್‌ಎಫ್, ಪೊಲೀಸ್ ಮತ್ತು ಅಗ್ನಿಶಾಮಕ, ಗೃಹರಕ್ಷಕ ದಳ ಹೀಗೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಡೆಯಿತು.

ಭೂಕುಸಿತ, ಪ್ರವಾಹ ಮತ್ತಿತರ ವಿಪತ್ತುಗಳು ಸಂಭವಿಸಿದ ಸಂದರ್ಭದಲ್ಲಿ ರಕ್ಷಣಾ ಕಾರ್ಯಗಳನ್ನು ಹೇಗೆ ಕೈಗೊಳ್ಳಬೇಕು ಎಂಬ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಪ್ರಾಕೃತಿಕ ವಿಕೋಪ ಸಂಭವಿಸಿದಲ್ಲಿ ಅಂಥ ಸ್ಥಳದಲ್ಲಿ ವಿದ್ಯುತ್ ಕಡಿತಗೊಳಿಸುವುದು, ಘಟನಾ ಸ್ಥಳವನ್ನು ಸೀಲು ಮಾಡುವುದು, ಬಳಿಕ ರಕ್ಷಣಾ ಕಾರ್ಯ ಕೈಗೊಂಡು ಪ್ರಥಮ ಚಿಕಿತ್ಸೆ ನೀಡುವುದು, ಗಂಭೀರ ಗಾಯವಾಗಿದ್ದಲ್ಲಿ ಆಸ್ಪತ್ರೆಗೆ ಕರೆದೊಯ್ಯುವುದು... ಹೀಗೆ 9ಕ್ಕೂ ಹೆಚ್ಚು ರೀತಿಯ ಅಣಕು ಪ್ರದರ್ಶನ ಜರುಗಿತು. ಅಣಕು ಪ್ರದರ್ಶನದಲ್ಲಿ ಎನ್‌ಡಿಆರ್‌ಎಫ್, ಪೊಲೀಸ್, ಅಗ್ನಿಶಾಮಕ,

ಹೆಬ್ಬೆಟ್ಟಗೇರಿಯಲ್ಲಿ ಗಮನ ಸೆಳೆದ 'ಅಣಕು ಪ್ರದರ್ಶನ'

ಗೃಹರಕ್ಷಕ ದಳ ಜೊತೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿ ಕೈಜೋಡಿಸಿದರು. ಹೆಚ್ಚಿನ ಮಳೆಯಿಂದ ಪ್ರವಾಹ, ಭೂಕುಸಿತ ಹೀಗೆ ವಿವಿಧ ರೀತಿಯ ಅತೀವೃಷ್ಟಿ ಉಂಟಾದಲ್ಲಿ ರಕ್ಷಣಾ ಕಾರ್ಯ ಕೈಗೊಳ್ಳುವ ಬಗ್ಗೆ ಮಾಹಿತಿ ನೀಡಲಾಯಿತು.

ಅಣಕು ಕಾರ್ಯಾಚರಣೆಯಲ್ಲಿ ಎನ್‌ಡಿಆರ್‌ಎಫ್ ತಂಡದ ಇನ್ಸ್‌ಪೆಕ್ಟರ್ ಶಾಂತಿ ಲಾಲ್ ಜಾಟಿಯಾ ಅವರ ನೇತೃತ್ವದಲ್ಲಿ 23 ಮಂದಿ, ಪೊಲೀಸ್ ಇಲಾಖೆಯಿಂದ ಡಿಎಆರ್ ತಂಡದ ಆರ್‌ಪಿಐ ಚೆನ್ನನಾಯಕ ನೇತೃತ್ವದಲ್ಲಿ 15 ಪೊಲೀಸರು, ಅಗ್ನಿಶಾಮಕ ಇಲಾಖೆಯಿಂದ ನಾಗರಾಜು ನೇತೃತ್ವದಲ್ಲಿ 8 ಮಂದಿ, ಗೃಹ ರಕ್ಷಕ ದಳ ವಿಭಾಗದಿಂದ ಅಕ್ಷಯ್ ಅವರ ನೇತೃತ್ವದ 8 ಮಂದಿ, ಒಟ್ಟು 54 ಸಿಬ್ಬಂದಿ ಅಣಕು ಪ್ರದರ್ಶನದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಬಳಿಕ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಮಾತನಾಡಿ, ಜಿಲ್ಲಾಡಳಿತದ ಸಹಯೋಗದಲ್ಲಿ ಎನ್‌ಡಿಆರ್‌ಎಫ್, ಪೊಲೀಸ್, ಗೃಹರಕ್ಷಕ ದಳ ವಿವಿಧ ಇಲಾಖೆಗಳ ಸಹಕಾರದಲ್ಲಿ ಅಣಕು ಪ್ರದರ್ಶನ ಏರ್ಪಡಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ 2018, 2019, 2020 ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದಿಂದ ತುಂಬಾ ತೊಂದರೆ ಆಗಿತ್ತು. ಆ ನಿಟ್ಟಿನಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿದಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ಹೇಗೆ ಕೈಗೊಳ್ಳಬೇಕು ಎಂಬ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಅಣಕು ಪ್ರದರ್ಶನದಿಂದ ಮಾಹಿತಿ ನೀಡಲಾಗಿದೆ ಎಂದರು.

ಎನ್‌ಡಿಆರ್‌ಎಫ್ ತಂಡದ ಪ್ರಮುಖರಾದ ಅರ್ಜುನ್ ಮಾತನಾಡಿ, ಪ್ರಾಕೃತಿಕ ವಿಕೋಪದಿಂದ ಭೂಕುಸಿತ ಹಾಗೂ ಪ್ರವಾಹ ಉಂಟಾದಲ್ಲಿ ಹೇಗೆ ರಕ್ಷಣಾ ಕಾರ್ಯ ಕೈಗೊಳ್ಳಲಾಗುತ್ತದೆ ಎಂಬ ಬಗ್ಗೆ ವಿವರಿಸಲಾಗಿದೆ. ಆ ನಿಟ್ಟಿನಲ್ಲಿ ವಿವಿಧ ರಕ್ಷಣಾ ಚಟುವಟಿಕೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪ್ರಯತ್ನಿಸಲಾಗಿದೆ ಎಂದು ಹೇಳಿದರು.


ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರಾದ ಅನನ್ಯ ವಾಸುದೇವ್ ಅವರು ಪ್ರಾಕೃತಿಕ ವಿಕೋಪ ಉಂಟಾದ ಸಂದರ್ಭದಲ್ಲಿ ಕಾರ್ಯಾಚರಣೆ ಕೈಗೊಳ್ಳುವ ಬಗ್ಗೆ ಹಲವು ಮಾಹಿತಿ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್, ತಹಶೀಲ್ದಾರ್ ಕಿರಣ್ ಗೌರಯ್ಯ, ಗಣಿ ಮತ್ತು ಭೂ ವಿಜ್ಞಾನಿಗಳಾದ ರಾಹುಲ್, ರೋಜಾ, ಪಿಡಿಒ ಸೆಲ್ವಿನ್, ಕಂದಾಯ ನಿರೀಕ್ಷಕರಾದ ರುದ್ರೇಶ್, ಪ್ರಸಾದ್, ಕಾರ್ಮಿಕ ಇಲಾಖೆ ಅಧಿಕಾರಿ ಹರ್ಷವರ್ಧನ್, ಪ್ರಮುಖರಾದ ಡೀನ್ ಬೋಪಣ್ಣ ಇತರರು ಇದ್ದರು.

ಗಾಂಜಾ ಮಾರಾಟ, ಸೇವನೆ ಪ್ರಕರಣ

ಅಂತಾರಾಜ್ಯ ವ್ಯಕ್ತಿ ಸೇರಿ ಮೂವರ ಬಂಧನ





ಮಡಿಕೇರಿ/ನಾಪೋಕ್ಲು, ಜು.1– ಗಾಂಜಾ ಮಾರಾಟ ಮತ್ತು ಸೇವನೆಯ ಎರಡು ಪ್ರತ್ಯೇಕ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಾರಾಜ್ಯ ವ್ಯಕ್ತಿ ಸೇರಿದಂತೆ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ನಾಪೋಕ್ಲು ಪೊಲೀಸರು ಯಶಸ್ವಿಯಾಗಿದ್ದಾರೆ.

ಕೇರಳದ ತಲಚೇರಿ ನಾಲಮ್ ಮೈಲ್ ನಿವಾಸಿ ರಜಾಕ್(42) ಮತ್ತು ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯ ಮಗ್ಗೆ ಗ್ರಾಮದ ನಿವಾಸಿ ಕೆ.ಕೆ.ಯೂಸುಫ್(52) ಬಂಧಿತ ಆರೋಪಿಗಳು. ವಿರಾಜಪೇಟೆ ಭಾಗದಲ್ಲಿ ಲೋಡರ್ಸ್ ಕೆಲಸ ನಿರ್ವಹಿಸುತ್ತಿದ್ದ ಇಬ್ಬರು ಆರೋಪಿಗಳು ಅಕ್ರಮವಾಗಿ ಗಾಂಜಾವನ್ನು ತಂದು ನಾಪೋಕ್ಲು ವ್ಯಾಪ್ತಿಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದು ಕಾರ್ಯಾಚರಣೆ ನಡೆಸಿದ್ದರು. ನಾಪೋಕ್ಲು ವೆಸ್ಟ್ ಕೊಳಕೇರಿ ಗ್ರಾಮದ ಪ್ರಯಾಣಿಕರ ಬಸ್ಸು ತಂಗುದಾಣದ ಬಳಿ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದಾಗ ಪೊಲೀಸರು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ ಅವರ ಬಳಿಯಿದ್ದ 305 ಗ್ರಾಂ ಗಾಂಜಾ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಗಾಂಜಾ ಸೇವನೆ–ಬಂಧನ: ಗಾಂಜಾ ಸೇವನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಳಕೇರಿ ಗ್ರಾಮದ ರಸ್ತೆ ಬದಿಯಲ್ಲಿ ಗಾಂಜಾ ಸೇವನೆ ಮಾಡುತ್ತಿರುವ ಬಗ್ಗೆ ಲಭಿಸಿದ ಖಚಿತ ಮಾಹಿತಿ ಮೇರೆಗೆ ಕಕ್ಕಬ್ಬೆ ಕುಂಜಿಲ ಗ್ರಾಮದ ನಿವಾಸಿ ಎನ್.ಕೆ ಹಾರಿಸ್ ಎಂಬ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಎಸ್ಪಿ ಕೆ.ರಾಮರಾಜನ್ ಮತ್ತು ಅಡಿಷನಲ್ ಎಸ್ಪಿ ಸುಂದರ್ ರಾಜ್ ನಿರ್ದೇಶನದಂತೆ, ಡಿವೈಎಸ್‌ಪಿ ಜಗದೀಶ್, ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್, ಸಿಬ್ಬಂದಿಗಳಾದ ಲವಕುಮಾರ್, ಶರತ್ ಕುಮಾರ್, ರಾಜೇಶ್, ಶಿವಕುಮಾರ್, ಪ್ರದೀಪ್ ಕುಮಾರ್, ಗಿರೀಶ್ ಮತ್ತು ಷರೀಫ್ ಪಾಲ್ಗೊಂಡಿದ್ದರು.

ಜಿಲ್ಲಾಡಳಿತ ಭವನದ ತಡೆಗೋಡೆ ಕಾಮಗಾರಿ ಕಳಪೆ

ಪಿಡಬ್ಲ್ಯೂಡಿ ಕಿರಿಯ ಇಂಜಿನಿಯರ್ ಅಮಾನತು



ಕಳೆದ ಜುಲೈ ತಿಂಗಳಲ್ಲಿ ಸುರಿದ ಧಾರಾಕಾರ ಮಳೆಗೆ ಅಂದಾಜು 50 ಮೀಟರ್ ಉದ್ದಕ್ಕೂ ತಡೆಗೋಡೆಗಳ ಕಾಂಕ್ರೀಟ್ ಸ್ಲ್ಯಾಬ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಬಳಿಕ ಹಾನಿಗೊಳಗಾದ ಎಲ್ಲಾ ಸ್ಲ್ಯಾಬ್‌ಗಳನ್ನು ಬದಲಿಸುವ ಕಾಮಗಾರಿ ನಡೆಸಲಾಯಿತು. ಈ ತಡೆಗೋಡೆಯನ್ನು 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಕಾಮಗಾರಿಯ ಪ್ರಾರಂಭದಲ್ಲೇ ತಡೆಗೋಡೆಯ ಭದ್ರತೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನಗಳು ವ್ಯಕ್ತವಾಗಿತ್ತು. ಇಂತಹ ತಂತ್ರಜ್ಞಾನ ಕೊಡಗಿನಂತಹ ಗುಡ್ಡಗಾಡು ಪ್ರದೇಶಕ್ಕೆ ಸೂಕ್ತವಲ್ಲ ಎಂಬ ಮಾತುಗಳು ಕೇಳಿ ಬಂದಿತ್ತಾದರೂ, 'ಜಪಾನ್' ತಂತ್ರಜ್ಞಾನ ಎಂದು ಸಬೂಬು ನೀಡಿ ಕಾಮಗಾರಿ ನಡೆಸಲಾಗಿತ್ತು. ತಡೆಗೋಡೆ ಬಿರುಕು ಬಿಟ್ಟು ಕುಸಿಯುವ ಹಂತಕ್ಕೆ ತಲುಪಿದ ಸಂದರ್ಭ ಈ ಪ್ರಕರಣ ರಾಜ್ಯ ವ್ಯಾಪಿ ಸುದ್ದಿಯಾಗಿತ್ತಲ್ಲದೇ, ಅಂದಿನ ಬಿಜೆಪಿ ಸರಕಾರಕ್ಕೆ ತೀವ್ರ ಮುಜುಗರ ಉಂಟು ಮಾಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಬಿರುಕು ಬಿಟ್ಟಿದ್ದ ಎಲ್ಲಾ ಸ್ಲ್ಯಾಬ್‌ಗಳನ್ನು ತೆರವು ಮಾಡಲಾಗಿದ್ದು, ಸ್ಥಳದಲ್ಲಿ ಬೃಹತ್ ಪ್ಲಾಸ್ಟಿಕ್ ಹೊದಿಕೆ ಅಳವಡಿಸಲಾಗಿದೆ.

ಮಡಿಕೇರಿ, ಜು.1– ಜಿಲ್ಲಾಡಳಿತ ಭವನದ ತಡೆಗೋಡೆ ಕಳಪೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಮಡಿಕೇರಿ ಉಪ ವಿಭಾಗದ ಕಿರಿಯ ಇಂಜಿನಿಯರ್ ಕೆ.ಎಲ್. ದೇವರಾಜು ಅವರನ್ನು ಅಮಾನತು ಮಾಡಲಾಗಿದೆ.

ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಇಲಾಖೆ ವಿಚಾರಣೆ ನಡೆಸುವಂತೆ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ (ಸಂಪರ್ಕ ಮತ್ತು ಕಟ್ಟಡ) ಆದೇಶ ಹೊರಡಿಸಿದ್ದಾರೆ.

ಕೆ.ಎಲ್.ದೇವರಾಜು ವಿರುದ್ಧ ಜಿಲ್ಲಾಧಿಕಾರಿಗಳ ಕಚೇರಿ ಮುಂದಿನ ತಡೆಗೋಡೆ ಕಳಪೆ ಕಾಮಗಾರಿ, ನಿರ್ವಹಣೆ, ಗ್ರೇಟರ್ ರಾಜಾಸೀಟ್ ಯೋಜನೆಯಲ್ಲಿ ನಕಲಿ ಎಂ.ಬಿ.ಪುಸ್ತಕಗಳ ಬಳಕೆ ಹಾಗೂ ಕರಿಕೆ ಗ್ರಾಪಂ ವ್ಯಾಪ್ತಿಯ ಗೋಪಾಲ ಎಸ್‌ಸಿ ಕಾಲೋನಿಗೆ ಒದಗಿಸಲಾಗಿದ್ದ ಅನುದಾನವನ್ನು ಬೇರೆಡೆ ನಿರ್ವಹಿಸಿ ದುರ್ಬಳಕೆ ಮಾಡಿರುವುದು ಮೇಲ್ನೋಟಕ್ಕೆ ಕಂಡ ಬಂದಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತುಗೊಳಿಸಿ ಮುಖ್ಯ ಇಂಜಿನಿಯರ್ ವಿ.ಗೋವಿಂದರಾಜ್ ಅವರು ಆದೇಶ ಹೊರಡಿಸಿದ್ದಾರೆ.

ಸಚಿವರಿಗೆ ದೂರು: ಜಿಲ್ಲಾಡಳಿತ ಭವನದ ತಡೆಗೋಡೆ ಕಳಪೆ ಗುಣಮಟ್ಟದಿಂದ ಕೂಡಿರುವ ಬಗ್ಗೆ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಅವರು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ವಿಸ್ತೃತ ದೂರು ಸಲ್ಲಿಸಿದ್ದರು.

ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ



ಸಿದ್ದಾಪುರ, ಜು.1– ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವ ಮೂಲಕ ಕಾರ್ಮಿಕರು ಬೆಳೆಗಾರರಲ್ಲಿ ಆತಂಕವನ್ನು ಉಂಟುಮಾಡುತ್ತಿದ್ದ ಕಾಡಾನೆಗಳನ್ನು ಕಾಡಿಗಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ವಿರಾಜಪೇಟೆ ಅರಣ್ಯ ವಲಯ ವ್ಯಾಪ್ತಿಯ ಹಾಲುಗುಂಡ, ಕಣ್ಣಂಗಾಲ ಗ್ರಾಮಗಳಲ್ಲಿ ಕೃಷಿ ತೋಟಗಳಿಗೆ ಹಾನಿ ಮಾಡುತ್ತಿರುವ ಕಾಡಾನೆಗಳನ್ನು ಕಾಡಿಗೆ ಅಟ್ಟುವ ಕಾರ್ಯಾಚರಣೆ ನಡೆಸಲಾಯಿತು.

ಆನೆ ಕಾರ್ಯಾಚರಣೆ ಬಗ್ಗೆ ಮೊದಲೇ ಬೆಳೆಗಾರರು ಹಾಗೂ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲಾಗಿತ್ತು ಕಾಫಿ ತೋಟಗಳ ಮಾರ್ಗದಲ್ಲಿ ತೆರಳಿದ ಅರಣ್ಯ ಇಲಾಖೆಯ 20ಕ್ಕೂ ಹೆಚ್ಚು ಸಿಬ್ಬಂದಿ ಬೈರಂಬಾಡ, ಹಚ್ಚಿನಾಡು, ಕುಂಬೇರಿ, ಕಾರ್ಮಾಡು, ಇಂಜಲಗೆರೆ, ಪುಲಿಯೇರಿ ಗ್ರಾಮಗಳಲ್ಲಿ ಬೀಡು ಬಿಟ್ಟು ಕಾರ್ಮಿಕರು ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡುತ್ತಿರುವ 14 ಕಾಡಾನೆಗಳ ಹಿಂಡುಗಳನ್ನು ಪಟಾಕಿ ಸಿಡಿಸುವುದರ ಮೂಲಕ ಹಿಂಬಾಲಿಸಿ ಕಾಡಿಗೆ ಅಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶರಣ ಬಸಪ್ಪ ಎಸಿಎಫ್ ನೆಹರು, ವಲಯ ಅರಣ್ಯಾಧಿಕಾರಿ ಕಳ್ಳಿರ ಎಂ. ದೇವಯ್ಯ, ಉಪ ವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ ಹಾಗೂ ಆರ್‌ಆರ್‌ಟಿ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ



ಚಾಮರಾಜನಗರ, ಜು.1– ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಕುಡಿಯುವ ನೀರಿಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು. ಮುಂದೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಆಗದಿದ್ದರೆ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಿರಲು ಈಗಿನಿಂದಲೇ ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ಆ ಮೂಲಕ ಜನರಿಗೆ ಕುಡಿಯುವ ನೀರಿನ ಬವಣೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕೆಂದು ನಿರ್ದೇಶನ ನೀಡಿದರು.

ಜಿಲ್ಲೆಯ ಕೃಷಿ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದ ಸಚಿವರು ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ಬಿತ್ತನೆ ಬೀಜ, ರಸಗೊಬ್ಬರ ಇನ್ನಿತರ ಪರಿಕರಗಳನ್ನು ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಇಟ್ಟುಕೊಂಡಿರಬೇಕು. ಬೇಡಿಕೆಗೆ ತಕ್ಕಂತೆ ರೈತರಿಗೆ ಪೂರೈಸಬೇಕು. ಬೆಳೆ ವಿಮೆ ಬಗ್ಗೆ ಕರಪತ್ರ, ರೈತ ಸಂಪರ್ಕ ಕೇಂದ್ರಗಳು ಸೇರಿದಂತೆ ಇನ್ನಿತರ ವಿಧಾನಗಳ ಮೂಲಕ ಹೆಚ್ಚಿನ ಜಾಗೃತಿ ಮೂಡಿಸಬೇಕು. ತಾಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ಈ ಬಗ್ಗೆ ಜವಾಬ್ದಾರಿ ನೀಡಬೇಕೆಂದು ತಿಳಿಸಿದರು.

ಅಧಿಕಾರಿಗಳು ಜನರನ್ನು ಅಲೆದಾಡಿಸದೇ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು. ಯಾವುದೇ ಸಬೂಬು, ಕಾರಣ ಹೇಳಿ ಜನರ ಕೆಲಸ ಮಾಡುವುದನ್ನು ನಿಲ್ಲಿಸಬಾರದು. ಸರ್ಕಾರ ಇರುವುದೇ ಜನರ ಕೆಲಸಕ್ಕಾಗಿ. ಸಾರ್ವಜನಿಕರ ಒಳಿತಿಗೆ ಕಾರ್ಯ ನಿರ್ವಹಿಸಿದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಎಂದು ತಿಳಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಮುಂಗಾರು ಹಂಗಾಮಿಗೆ ಈವರೆಗೆ ಎಷ್ಟು ರೈತರು ಬೆಳೆ ವಿಮೆಗೆ ನೋಂದಾಯಿಸಿದ್ದಾರೆ? ಕಳೆದ ಬಾರಿ ವಿಮೆ ಮಾಡಿಸಿದವರಿಗೆ ಹಣ ಬಂದಿದೆಯೇ? ಎಂಬ ಬಗ್ಗೆ ವಿವರ ನೀಡಬೇಕು. ಸಕಾಲದಲ್ಲಿ ಪ್ರಯೋಜನ ರೈತರಿಗೆ ತಲುಪಬೇಕು ಎಂದು ತಿಳಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಕಳೆದ ಬಾರಿ ಮಳೆಯಿಂದ ಬಾಳೆ ಸೇರಿದಂತೆ ಇತರೆ ಬೆಳೆಗಳು ಹಾನಿಗೀಡಾಗಿವೆ. ಈ ಬಗ್ಗೆ ನೀಡಲಾಗಿರುವ ಪರಿಹಾರ ಕ್ರಮದ ಕುರಿತು ಮಾಹಿತಿ ನೀಡಬೇಕು. ಮುಂದೆ ಮಳೆ ಬರದಿದ್ದರೆ ಪರಿಸ್ಥಿತಿ ನಿಭಾಯಿಸಲು ಯಾವ ಸಿದ್ಧತೆ ಕೈಗೊಂಡಿದ್ದೀರಿ ಎಂಬ ಬಗ್ಗೆ ವಿವರ ನೀಡಬೇಕು ಎಂದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಹನೂರಿನ ಹಲವೆಡೆ ಇತ್ತೀಚೆಗೆ ಬೀಸಿದ ಗಾಳಿಗೆ ಸಾಕಷ್ಟು ಬೆಳೆ ಹಾನಿಯಾಗಿದೆ. ಇದಕ್ಕೆ ಹೆಚ್ಚಿನ ಪರಿಹಾರ ನೀಡಬೇಕು ಎಂದರು.

ಸಹಕಾರ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಮಾತನಾಡಿ, ಮಳೆ ಮುನ್ಸೂಚನೆ ಬಗ್ಗೆ ಹವಾಮಾನ ಇಲಾಖೆ ನಿಖರ ಮಾಹಿತಿ ನೀಡಲಿದೆ. ಮಳೆ ಕೊರತೆಯಾದರೆ ಪರ್ಯಾಯವಾಗಿ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಅಧಿಕಾರಿಗಳು ಪೂರ್ವ ಸಿದ್ಧತೆ ಕೈಗೊಳ್ಳಬೇಕು ಎಂದರು.

ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿದರು. ಇದೇ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪಶು ಸಂಗೋಪನೆ, ತೋಟಗಾರಿಕೆ, ರೇಷ್ಮೆ, ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು. ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಎಸ್.ಪೂವಿತ, ಎಡಿಸಿ ಗೀತಾ ಹುಡೇದ, ಎಎಸ್ಪಿ ಉದೇಶ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ರಮೇಶ್ ಕುಮಾರ್, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ದೀಪಾ, ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಬೇಕೇ?

ಚಾಮರಾಜನಗರ, ಜು.1– ಮಾಹಿತಿ ಹಕ್ಕು ಕಾಯ್ದೆಯಡಿ ಗ್ರಾಪಂಗೆ ಅರ್ಜಿ ಸಲ್ಲಿಸಿದ ಇಬ್ಬರಿಗೆ ಮಾಹಿತಿ ಬೇಕಾದರೆ ಒಬ್ಬರಿಗೆ 1.72 ಲಕ್ಷ, ಮತ್ತೊಬ್ಬರಿಗೆ 1.20 ಲಕ್ಷ ರೂ. ಪಾವತಿಸುವಂತೆ ಗ್ರಾಪಂ ಅಧಿಕಾರಿಗಳು ಲಿಖಿತವಾಗಿ ತಿಳಿಸಿರುವ ವಿಷಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು.

ಗುಂಡ್ಲುಪೇಟೆ ತಾಲೂಕಿನ ಬೊಮ್ಮನಹಳ್ಳಿ ಗ್ರಾಪಂ ವ್ಯಾಪ್ತಿಯ ಕುಂದಕೆರೆ ಗ್ರಾಮದ ಕೆ.ಎಂ.ವಿನೋದ್ ಎಂಬುವರು ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿ ಬೊಮ್ಮನಹಳ್ಳಿ ಗ್ರಾಪಂಗೆ ಸೇರಿದ ನರೇಗಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2019–20ರಿಂದ 2022–23ರವರೆಗೆ ನರೇಗಾ ಮತ್ತು 15ನೇ ಹಣಕಾಸು ಯೋಜನೆ ಕಾಮಗಾರಿಗಳ ಬಗ್ಗೆ ಮಾಹಿತಿ ಕೋರಿದ್ದರು.

ಇದಕ್ಕೆ ಗ್ರಾಪಂ ಕಾರ್ಯದರ್ಶಿ ಒಂದು ಪುಟಕ್ಕೆ 2 ರೂ.ನಂತೆ 1058 ಪುಟಗಳಿಗೆ 21,160 ರೂ. ಒಂದು ಫೋಟೋಗೆ 50 ರೂ.ನಂತೆ 3035 ಫೋಟೋಗಳಿಗೆ 1,51,750 ರೂ. ಪೋಸ್ಟಲ್ ಚಾರ್ಜ್ 560 ರೂ. ಸೇರಿ ಒಟ್ಟು 1,73,470 ರೂ. ಪಾವತಿಸಿದರೆ ಮಾಹಿತಿ ನೀಡುವುದಾಗಿ ತಿಳಿಸಿದ್ದರು.

ಅದೇ ಗ್ರಾಪಂಗೆ ಕುಂದಗೆರೆ ಗ್ರಾಮದ ಮಹೇಂದ್ರ ಕೆ.ಎಸ್. ಎಂಬುವರು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ

1.72 ಲಕ್ಷ ಶುಲ್ಕ ಪಾವತಿಸಿ!

ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಕೇಳಿದ್ದರು. ಇದಕ್ಕೆ ಗ್ರಾಪಂ ಕಾರ್ಯದರ್ಶಿ 4910 ಪುಟಗಳಿಗೆ 2ರೂ. ನಂತೆ 9820 ರೂ., ಒಂದು ಫೋಟೋಗೆ 50 ರೂ. ನಂತೆ 2385 ಫೋಟೋಗಳಿಗೆ 1,19,250 ರೂ. ಪೋಸ್ಟಲ್ ಚಾರ್ಜ್ 540 ರೂ. ಸೇರಿ ಒಟ್ಟು 1,29,610 ರೂ. ಪಾವತಿಸಿ ಮಾಹಿತಿ ಪಡೆದುಕೊಳ್ಳುವಂತೆ ತಿಳಿಸಿದ್ದರು.

ಈ ವಿಚಾರವನ್ನು ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಸಭೆಯ ಮುಂದಿಟ್ಟರು. ಈ ಬಗ್ಗೆ ಸಭೆಯಲ್ಲಿ ಸಾಕಷ್ಟು ಚರ್ಚೆಗಳು ನಡೆದವು. ಮಾಹಿತಿ ಕೇಳಿರುವ ವರ್ಷದ ಅವಧಿಯಲ್ಲಿ ಸಾಕಷ್ಟು ಕಾಮಗಾರಿಗಳು ನಡೆದಿದೆ. ಈ ಬಗ್ಗೆ ಮಾಹಿತಿ ನೀಡಲು ಹಣ ಪಾವತಿಸುವಂತೆ ಕೇಳಿರುವುದು ನಿಜ ಎಂದು ಸಂಬಂಧಿಸಿದ ಅಧಿಕಾರಿಗಳು ಮಾಹಿತಿ ನೀಡಿದರು.

ಜಿಪಂ ಸಿಇಓ ಪೂವಿತಾ ಮಾತನಾಡಿ, ಕಾನೂನು ಪ್ರಕಾರ ಹಣ ಪಾವತಿಸುವಂತೆ ಸೂಚಿಸಲಾಗಿದೆ. ಹಣ ಪಾವತಿಸಿದರೆ ಮಾಹಿತಿ ನೀಡುವುದಾಗಿ ಹೇಳಿದರು. ಈ ವೇಳೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಯಾರೂ ಮಾಹಿತಿ ಕಾಯ್ದೆಯಡಿ ಮಾಹಿತಿ ಕೇಳಬಾರದು ಎಂಬಂತೆ ತಿಳಿಸಲಾಗಿದೆ ಎಂದರು. ಈ ವೇಳೆ ಎಲ್ಲರೂ ನಕ್ಕರು. ಇಷ್ಟಕ್ಕೆ ಈ ವಿಷಯದ ಚರ್ಚೆ ಮುಗಿಯಿತು.

ಅಧಿಕಾರಿಗಳ ವಿರುದ್ಧ ಎಆರ್‌ಕೆ ಅಸಮಾಧಾನ

ಚಾಮರಾಜನಗರ: ನಗರದ ಜಿಪಂ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೆಲವು ಇಲಾಖೆ ಅಧಿಕಾರಿಗಳು ನೀಡಿದ ವರದಿಯಲ್ಲಿ ತಪ್ಪು ಮಾಹಿತಿ ಇದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು.

ಅಧಿಕಾರಿಗಳು ನೀಡಿರುವ ಮಾಹಿತಿ ಅಸ್ಪಷ್ಟವಾಗಿದೆ. ಕಾಟಾಚಾರಕ್ಕೆ ಮಾಹಿತಿ ನೀಡುವುದನ್ನು ಅಧಿಕಾರಿಗಳು ನಿಲ್ಲಿಸಬೇಕು. ಮುಂದಿನ ಸಭೆಯಲ್ಲಿ ಎಲ್ಲಾ ಇಲಾಖೆ ಅಧಿಕಾರಿಗಳು ವಿಧಾನಸಭಾ ಕ್ಷೇತ್ರವಾರು ವರದಿ ನೀಡಬೇಕು. ಇದರಿಂದ ನಮ್ಮ ಕ್ಷೇತ್ರಗಳಲ್ಲಿ ಎಷ್ಟು ಕೆಲಸಗಳು ಆಗಿವೆ ಹಾಗೂ ಎಷ್ಟು ಬಾಕಿ ಉಳಿದಿವೆ ಎಂಬುದರ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಗೆ ಸಂಬಂಧಿಸಿದಂತೆ ಹನೂರು ಭಾಗದಲ್ಲಿ ಕಾಮಗಾರಿಗಳನ್ನೇ ಕೈಗೆತ್ತಿಕೊಳ್ಳದೇ ಹಣ ಖರ್ಚು ಮಾಡಿರುವ ಬಗ್ಗೆ ಮಾಹಿತಿ ನೀಡಿದ್ದೀರಿ. ತಮ್ಮ ಮಾಹಿತಿಯಲ್ಲಿ ಶೇ.43ರಷ್ಟು ಕಾಮಗಾರಿಗೆ ಶೇ.48ರಷ್ಟು ಹಣ ವ್ಯಯ ಮಾಡಿರುವ ಬಗ್ಗೆ ವರದಿ ದಾಖಲಿಸಿದ್ದು, ಬಹಳಷ್ಟು ವ್ಯತ್ಯಾಸಗಳು ಕಂಡು ಬರುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉಸ್ತುವಾರಿ ಸಚಿವರಿಂದ ವನ ಮಹೋತ್ಸವಕ್ಕೆ ಚಾಲನೆ



ಚಾಮರಾಜನಗರ, ಜು.1– ಜಿಲ್ಲಾಡಳಿತ, ಜಿಪಂ ಹಾಗೂ ಅರಣ್ಯ ಇಲಾಖೆಯಿಂದ ಗಿಡಗಳನ್ನು ನೆಡುವ ವನ ಮಹೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.


ತಾಲೂಕಿನ ಬದನಗುಪ್ಪೆ ಬಳಿಯ ಕೈಗಾರಿಕಾ ಪ್ರದೇಶದಲ್ಲಿ ಗಿಡ ನೆಡುವ ಮೂಲಕ ಉಸ್ತುವಾರಿ ಸಚಿವರು ವನ ಮಹೋತ್ಸವಕ್ಕೆ ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಸಚಿವರು ವನಮಹೋತ್ಸದ ಅಂಗವಾಗಿ 6 ಲಕ್ಷ ಗಿಡಗಳನ್ನು ನೆಡುವ ಗುರಿ ಹೊಂದಲಾಗಿದೆ ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಚ್.ಎಂ.ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಎಸ್.ಪೂವಿತ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ದೀಪಾ ಇತರರಿದ್ದರು.

ಆದರ್ಶ ವಿದ್ಯಾಲಯದಲ್ಲಿ 7 ರಿಂದ 9ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.1– ಚಾಮರಾಜನಗರದ ಆದರ್ಶ ವಿದ್ಯಾಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ 7 ರಿಂದ 9ನೇ ತರಗತಿಯವರೆಗೆ ಖಾಲಿ ಇರುವ ಸೀಟುಗಳಿಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಚಾಮರಾಜನಗರ ತಾಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಜುಲೈ 11ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಚಾಮರಾಜನಗರದ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಎರಡ್ಮೂರು ತಿಂಗಳ ನಂತರ ಅಕ್ಕಿ ವಿತರಣೆ



ಚಾಮರಾಜನಗರ, ಜು.1– ಸರ್ಕಾರ ಅಕ್ಕಿ ಬದಲಿಗೆ ಹಣ ನೀಡಲು ಮುಂದಾಗಿದ್ದು, ಮುಂದಿನ ಎರಡ್ಮೂರು ತಿಂಗಳ ಬಳಿಕ ಜನತೆಗೆ ನೀಡಿದ ಗ್ಯಾರಂಟಿಯಂತೆ 10 ಕೆಜಿ ಅಕ್ಕಿ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ಕಿ ಬದಲು ಹಣ ಕೊಡುತ್ತಿರುವುದಕ್ಕೆ ವಿರೋಧ ಮಾಡುವವರು ಮಾಡಲಿ. ಅಕ್ಕಿ ಸಂಗ್ರಹವಾದ ಮೇಲೆ ಅಕ್ಕಿ ನೀಡುತ್ತೇವೆ. ಇದು ತಾತ್ಕಾಲಿಕ ವ್ಯವಸ್ಥೆ. ಜನರಿಗೆ ಕೊಟ್ಟ ಭರವಸೆ ಈಡೇರಿಸಲು ಅಕ್ಕಿ ಸಿಗದ ಕಾರಣ ಹಣ ಕೊಡುತ್ತಿದ್ದೇವೆ, ಕೇಂದ್ರ ಸರ್ಕಾರ ಅಕ್ಕಿ ಕೊಡದ ಕಾರಣ ವಿಧಿ ಇಲ್ಲದೆ ಹಣ ಕೊಡುತ್ತಿದ್ದೇವೆ. ಎರಡ್ಮೂರು ತಿಂಗಳ ಬಳಿಕ ಅಕ್ಕಿ ನೀಡುತ್ತೇವೆ ಎಂದರು.

ಇಂದಿನಿಂದ ವಿದ್ಯುತ್, ಅಕ್ಕಿ ಗ್ಯಾರಂಟಿ ಜಾರಿಯಾಗಿದೆ. ನಾವು ಕೊಟ್ಟ ಭರವಸೆ ಜಾರಿಗೊಳಿಸುತ್ತೇವೆ. ಪ್ರತಿ ಪಕ್ಷದವರು ಹೇಳಿದ ಹಾಗೇ ಕೇಳಲು ಸಾಧ್ಯವಿಲ್ಲ. ಬಿಜೆಪಿ ಅವರಿಗೆ ಇನ್ನೇನು ಕೆಲಸ ಇದೆ. ಏನಾದರೊಂದು ಹೇಳುತ್ತಾರೆ ಎಂದು ಟೀಕಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಪ್ರತಿಭಟನೆಗೆ ಮುಂದಾಗಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ಪ್ರತಿಭಟನೆ ಮಾಡುವವರಿಗೆ ಬೇಡ ಎನ್ನಲು ಆಗುವುದಿಲ್ಲ. ಅವರು ಮಾಡಲಿ ಬಿಡಿ ಎಂದು ಉತ್ತರಿಸಿದರು.



ಚಾಮರಾಜನಗರದ ಜೈಹಿಂದ್ ಪ್ರತಿಷ್ಠಾನ, ಋಗ್ವೇದಿ ಯೂತ್ ಕ್ಲಬ್ ವತಿಯಿಂದ ಪತ್ರಿಕಾ ದಿನಾಚರಣೆ ಅಂಗವಾಗಿ ಕಳೆದ 55 ವರ್ಷಗಳಿಂದ ಪತ್ರಿಕಾ ವಿತರಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ, ಪತಂಜಲಿ ಯೋಗ ಸಮಿತಿ ಅಜಿತ್, ಶಂಕರಪುರ ಹಿತರಕ್ಷಣಾ ಸಮಿತಿ ಶ್ರೀನಿವಾಸ್, ಋಗ್ವೇದಿ ಯೂತ್ ಕ್ಲಬ್‌ನ ಶ್ರಾವ್ಯ ಋಗ್ವೇದಿ ಹಾಗೂ ಯುವಕರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಯಳಂದೂರು ಜು.1– ಯಳಂದೂರು ವಿವಿ ಕೇಂದ್ರದಲ್ಲಿ ಲಿಂಕ್‌ಲೈನ್ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಜು.2ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಯಳಂದೂರು ಟೌನ್, ಯರಿಯೂರು, ಮದ್ದೂರು, ಆಲ್ಕೆರೆ ಅಗ್ರಹಾರ, ಬೂದಿತಿಟ್ಟು, ಎ.ದೇವರಹಳ್ಳಿ, ಟಿ.ಹೊಸೂರು ಹಾಗೂ ಶಿವಕಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರನಿಗೆ ತೀವ್ರ ಗಾಯ

ಯಳಂದೂರು, ಜು.1– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಉಪ್ಪಿನಮೋಳೆ ಗ್ರಾಮದ ಬಳಿ ನಡೆದಿದೆ.

ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದ ನಿವಾಸಿ ನಾಗರಾಜನಾಯಕ ತೀವ್ರ ಗಾಯಗೊಂಡವರು. ಈತ ಯಳಂದೂರಿನಿಂದ ಗುಂಬಳ್ಳಿ ಗ್ರಾಮದ ಕಡೆಗೆ ಹೋಗುತ್ತಿದ್ದ ವೇಳೆ ಬಿಳಿಗಿರಿರಂಗನಬೆಟ್ಟದಿಂದ ಯಳಂದೂರು ಕಡೆಗೆ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ನಾಗರಾಜನಾಯಕನಿಗೆ ಯಳಂದೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಬೆಳಗುತಿದೆ ಗೃಹಜ್ಯೋತಿ

ಸಂಪರ್ಕ ಪಡೆದ ಗ್ರಾಹಕರಿಗೆ ಬಳಕೆಯ ಇತಿಹಾಸ ಇಲ್ಲದಿರುವುದರಿಂದ ಮಾಸಿಕ 53 ಯುನಿಟ್‌ಗಳನ್ನು ನಿಗದಿಪಡಿಸಿ, ಅವರಿಗೂ ಉಚಿತ ವಿದ್ಯುತ್ ದೊರೆಯಲಿದೆ.

ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಪಡಿತರ ಚೀಟಿದಾರರಿಗೆ ಹೆಚ್ಚುವರಿಯಾಗಿ ಐದು ಕೆಜಿ ಅಕ್ಕಿ ನೀಡಲು ಸರ್ಕಾರಕ್ಕೆ ಒಂದರ ಮೇಲೊಂದು, ಅಡ್ಡಿ ಆತಂಕಗಳು ಎದುರಾಗುತ್ತಿವೆ. ಅಗತ್ಯ ಅಕ್ಕಿ ದೊರೆಯದ ಕಾರಣ ಪ್ರತಿ ಯೂನಿಟ್‌ಗೆ ಐದು ಕೆಜಿಗೆ 170 ರೂ. ಹಣವನ್ನು ಕುಟುಂಬದ ವಾರಸುದಾರರಿಗೆ ಪಾವತಿಸುವ ತೀರ್ಮಾನವನ್ನು ಕಳೆದ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿತ್ತು.

ಕುಟುಂಬದಲ್ಲಿ ಐದು ಮಂದಿ ಇದ್ದರೆ ಅಂತಹ ಕುಟುಂಬಕ್ಕೆ ಮಾಸಿಕ 850 ರೂ.ಗಳನ್ನು ಜುಲೈ 1, ರಿಂದಲೇ ಅವರ ಖಾತೆಗೆ ವರ್ಗಾವಣೆ ಮಾಡುವ ನಿರ್ಧಾರ ಕೈಗೊಂಡಿತ್ತು. ಅಕ್ಕಿ ಬದಲು ಹಣ ನೀಡುವ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದ್ದರು. ಆದರೆ ಇಂದು ಯೋಜನೆ ಅನುಷ್ಠಾನಗೊಂಡಿಲ್ಲ. ಮುಖ್ಯಮಂತ್ರಿಯವರು ಹೇಳುವಂತೆ ಜುಲೈ 10 ರ ನಂತರ ಯೋಜನೆ ಜಾರಿಗೆ ಬರಲಿದೆ. ನಾವು ಇಂದಿನಿಂದಲೇ ಅನುಷ್ಠಾನಗೊಳಿಸುತ್ತೇವೆ ಎಂದು ಹೇಳಿಲ್ಲ. ಆದರೆ ಈ ಹಿಂದೆ ನೀಡುತ್ತಿದ್ದ ಐದು ಕೆಜಿ ಅಕ್ಕಿ ಬಿಪಿಎಲ್ ಪಡಿತರ ಚೀಟಿದಾರರಿಗೆ ಎಂದಿನಂತೆ ದೊರೆಯಲಿದೆ. ನಾವು ಹೆಚ್ಚುವರಿಯಾಗಿ ಐದು ಕೆಜಿ ಅಕ್ಕಿ ನೀಡುವುದಾಗಿ ಮಾಡಿದ್ದ ಘೋಷಣೆಗೆ ಅಕ್ಕಿ ದೊರೆಯದ ಕಾರಣ ಹಣ ನೀಡುವ ತೀರ್ಮಾನ ಕೈಗೊಂಡಿದ್ದೇವೆ ಎಂದಿದ್ದರು.

ಸರ್ಕಾರದ ನಿರ್ಧಾರಕ್ಕೆ ಫಲಾನುಭವಿಗಳು ಸ್ವಾಗತಿಸಿದ್ದಾರೆ. ಎಲ್ಲಾ ಬಿಪಿಎಲ್ ಪಡಿತರದಾರರು ಆಧಾರ್ ಕಾರ್ಡ್‌ನೊಂದಿಗೆ ಲಿಂಕ್ ಮಾಡಿಕೊಂಡು ವಾರಸುದಾರರು ಬ್ಯಾಂಕ್ ಖಾತೆ ವಿವರ ನೀಡಬೇಕಾಗಿದೆ. ಈಗಾಗಲೇ ಶೇಕಡ 95ರಷ್ಟು ಕುಟುಂಬಗಳು ಲಿಂಕ್ ಪಡೆದುಕೊಂಡಿವೆ. ಉಳಿದವರಿಗೂ ಒಂದಷ್ಟು ಸಮಯಾವಕಾಶ ನೀಡುತ್ತೇವೆ. ಸರ್ಕಾರ ಪ್ರಕಟಿಸಿರುವಂತೆ ಈ ತಿಂಗಳಿನಿಂದಲೇ ಅನ್ನಭಾಗ್ಯ ಯೋಜನೆ ಜಾರಿಗೊಳ್ಳುತ್ತದೆ. ಆದರೆ 10ರ ನಂತರ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಮಾಡುವುದಾಗಿ ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ಪ್ರಕಟಿಸಿದ್ದ ಗ್ಯಾರಂಟಿಗಳಲ್ಲಿ ಈಗಾಗಲೇ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ವ್ಯವಸ್ಥೆ ಜಾರಿಗೆ ಬಂದಿದೆ. ಇಂದಿನಿಂದ ಭಾಗ್ಯಜ್ಯೋತಿ ಕಾರ್ಯಕ್ರಮವೂ ಅನುಷ್ಠಾನಗೊಂಡಿದೆ. ಅನ್ನಭಾಗ್ಯ ಯೋಜನೆಯೂ ಇದೇ ತಿಂಗಳಲ್ಲಿ ಜಾರಿಗೊಳ್ಳಲಿದೆ. ಕುಟುಂಬದ ಯಜಮಾನಿಗೆ ಮಾಸಿಕ ಎರಡು ಸಾವಿರ ರೂ. ಪಾವತಿಸುವ ಗೃಹ ಲಕ್ಷ್ಮಿ ಯೋಜನೆ ಆಗಸ್ಟ್ 17 ರಿಂದ ಜಾರಿಗೆ ಬರಲಿದೆ. ಇನ್ನು ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ ಮೂರು ಸಾವಿರ ನೀಡುವ ಯುವ ನಿಧಿ ಯೋಜನೆ ನವೆಂಬರ್‌ನಿಂದ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

'ಗೃಹಜ್ಯೋತಿ'ಗೆ ಡೆಡ್‌ಲೈನ್ ಇಲ್ಲ

ಮಾಡಬೇಕಾಗುತ್ತದೆ ಎಂದರು. 86.5 ಲಕ್ಷ ಜನರಿಂದ ಅರ್ಜಿ: ಗೃಹ ಜ್ಯೋತಿ ಯೋಜನೆಗೆ 86.5 ಲಕ್ಷ ಜನರು ಅರ್ಜಿ ಸಲ್ಲಿಸಿದ್ದಾರೆ ಜೂನ್ ತಿಂಗಳ ವಿದ್ಯುತ್ ಬಿಲ್ ಜುಲೈ ತಿಂಗಳಿಗೆ ಬರುತ್ತದೆ. ಜುಲೈ ತಿಂಗಳಿನಿಂದ ಎಲ್ಲಾ ಫಲಾನುಭವಿಗಳಿಗೆ ಉಚಿತ ಕರೆಂಟ್ ಜಾರಿಯಾಗಲಿದೆ. ಗೃಹಜ್ಯೋತಿಗೆ ಅರ್ಜಿ ಹಾಕದವರಿಗೆ ಮುಂದಿನ ತಿಂಗಳು ಬಿಲ್ ಬರುತ್ತೆ. 'ಗೃಹಜ್ಯೋತಿ' ಲಾಭ ಪಡೆಯಲು ಎಲ್ಲರೂ ಅರ್ಜಿ ಹಾಕಲೇಬೇಕು. ಆದಷ್ಟು ಬೇಗ ಗೃಹ ಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಸಿದ್ರೆ ಒಳ್ಳೆಯದು. ಅರ್ಜಿ ಹಾಕಲು ದಿನಾಂಕದ ಗಡುವು ಇಲ್ಲ. ಆದರೆ ಸರ್ಕಾರದಿಂದ ಉಚಿತ ಸಿಗಬೇಕೆಂದರೆ ನಾಗರಿಕರು ಅರ್ಜಿ ಹಾಕಲೇಬೇಕು. ಆದಷ್ಟು ಬೇಗನೆ ಅರ್ಜಿ ಹಾಕಿದರೆ ಜನರಿಗೇ ಲಾಭ, ಇಲ್ಲದಿದ್ದರೆ ವಿದ್ಯುತ್ ಶುಲ್ಕ ಕಟ್ಟಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಕೊಡಗಿನ ದಂಪತಿ ಸಾವು

ಮಧ್ಯಾಹ್ನ 1 ಗಂಟೆ ವಿಮಾನದಲ್ಲಿ ಮೈಸೂರಿಗೆ ಹೊರಡುತ್ತಿರುವ ಬಗ್ಗೆ ತಮ್ಮ ತಂದೆಗೆ ತಿಳಿಸಿದ್ದರಂತೆ. ವಿಮಾನ 3.15ರ ಸುಮಾರಿಗೆ ಮೈಸೂರು ತಲುಪುತ್ತದೆ ಎಂಬ ನಿರೀಕ್ಷೆಯಲ್ಲಿ ಆಕೆಯನ್ನು ಕರೆತರಲು ಬೆಳ್ಳಿಯಪ್ಪ ದಂಪತಿ ಕಾರಿನಲ್ಲಿ ತೆರಳುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಹೈದರಾಬಾದ್‌ನಿಂದ ವಿಮಾನದಲ್ಲಿ ಮೈಸೂರಿಗೆ ಬಂದಿಳಿದ ಬೆಳ್ಳಿಯಪ್ಪ ಪುತ್ರಿ ಶೃತಿ ಅವರ ತಮ್ಮ ತಂದೆ-ತಾಯಿಗಾಗಿ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದ ವೇಳೆ ಪರಿಚಿತರು ಕರೆ ಮಾಡಿ ಅಪಘಾತದ ವಿಚಾರವನ್ನು ಆಕೆಗೆ ತಿಳಿಸಿದ್ದಾರೆ. ಹುಣಸೂರು ಆಸ್ಪತ್ರೆಗೆ ಆಗಮಿಸಿದ ಶೃತಿ ಅವರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ದಂಪತಿಯ ಮತ್ತೋರ್ವ ಪುತ್ರಿ ಸ್ಪರ್ಷಾ ಬೆಂಗಳೂರಿನಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮೂಲತಃ ಸೋಮವಾರಪೇಟೆ ತಾಲೂಕು ಹಿರೀಕೆರೆ ಗ್ರಾಮದವರಾದ ಬೆಳ್ಳಿಯಪ್ಪ ಅವರು ಮರಗೋಡಿನ ಸರ್ಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ್ದಾರೆ. ಇವರು ಗುಡ್ಡೆಹೊಸೂರಿನ ಬಾಡಿಗೆ ಮನೆಯಲ್ಲಿ ವಾಸವಿದ್ದು, ಬಿಎಸ್‌ಪಿ ಪಕ್ಷದ ಜಿಲ್ಲಾ ಉಪಾಧ್ಯಕ್ಷರಾಗಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು.

ಹೈವೇಯಲ್ಲಿ 2ನೇ ಟೋಲ್ ಆರಂಭ

ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಸಂಗ್ರಹ ಆರಂಭವಾ ಗಿತ್ತು. ಇದೀಗ ಗಣಂಗೂರು ಟೋಲ್ ನಲ್ಲಿಯೂ ಶುಲ್ಕ ಸಂಗ್ರಹ ಆರಂಭವಾ ಗಿದ್ದು, ಇದರ ವಿರುದ್ಧ ಕೆಲ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಗಣಂಗೂರು ಟೋಲ್ ಪ್ಲಾಜಾ ಬಳಿ ಪ್ರತಿಭಟನೆ ನಡೆಸಿದ ಸಂಘಟನೆಗಳ ಕಾರ್ಯ ಕರ್ತರು, ಕೇಂದ್ರ

ಸರ್ಕಾರ ಹಾಗೂ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿದರು. ಟೋಲ್ ಸಂಗ್ರಹ ಹಾಗೂ ಕನ್ನಡಿಗರಿಗೆ ಉದ್ಯೋಗ ನೀಡದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ಟೋಲ್ ಸಂಗ್ರಹಿಸದಂತೆ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿದ್ದರೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಗಣಂಗೂರು ಟೋಲ್ ಬಳಿ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು. ಪ್ರಾಧಿಕಾರ ಪ್ರಯಾಣಿಕರಿಂದ ಹಣ ಸುಲಿಗೆ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ದುಬಾರಿ ಟೋಲ್ ಸಂಗ್ರಹದ ವಿರುದ್ಧ ಪ್ರಯಾಣಿಕರು ಸಹ ಅಸಮಾಧಾನ ವ್ಯಕ್ತಪಡಿಸಿದರು. ಬೆಂಗಳೂರಿನಿಂದ ಮೈಸೂರಿಗೆ ಹೋಗಿ ವಾಪಸ್ ಬರುವುದಕ್ಕೆ 480 ರೂ. ಶುಲ್ಕ ಕಟ್ಟಬೇಕು. ಇದ್ಯಾವ ನ್ಯಾಯ ಎಂದು ಪ್ರಶ್ನಿಸಿದರು. ಪ್ರತಿಭಟನೆ ಬಳಿಕ ಮಾತನಾಡಿದ ಟೋಲ್ ಸಂಸ್ಥೆ ಮಾಲೀಕ ಇಂದ್ರದೀಪ್, ಕೇಂದ್ರ ಸರ್ಕಾರದ ಜೊತೆ ಆಗಿದ್ದ ಕರಾರಿನ ಪ್ರಕಾರ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಇಂದಿನಿಂದ ಟೋಲ್ ಸಂಗ್ರಹ ಆರಂಭವಾಗಿರುವುದರಿಂದ ಕೆಲ ತಾಂತ್ರಿಕ ಸಮಸ್ಯೆ ಉಂಟಾಗುತ್ತಿದ್ದು, ಅವುಗಳನ್ನು ತಕ್ಷಣವೇ ಸರಿ ಪಡಿಸಿಕೊಳ್ಳುತ್ತೇವೆ. ಟೋಲ್ ಸಂಗ್ರಹ ಆರಂಭವಾದರೂ ಕೆಲ ಮೂಲ ಸಮಸ್ಯೆಗಳಿವೆ. ಈಗ ತಾನೆ ಅಧಿಕೃತವಾಗಿ ಸ್ಟೇಜ್ 2 ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಮೂಲಸೌಕರ್ಯ ನೀಡುತ್ತೇವೆ ಎಂದು ಹೇಳಿದರು. ಸ್ಥಳೀಯರಿಗೆ 80 ರೂಪಾಯಿ ಹಣ ವಸೂಲಿ ವಿಚಾರದ ಬಗ್ಗೆ ಮಾತನಾಡಿ, ಸ್ಥಳೀಯ ವೈಟ್ ಬೋರ್ಡ್ ವಾಹನಗಳಿಗೆ ಪಾಸ್ ನೀಡುತ್ತೇವೆ. ಆ ವಾಹನದ ಸಂಖ್ಯೆಯನ್ನು ದಾಖಲಿಸಿಕೊಂಡು ಓಡಾಡಲು ಅವಕಾಶ ಕಲ್ಪಿಸುತ್ತೇವೆ ಎಂದು ತಿಳಿಸಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಹೊತ್ತಿ ಉರಿದ ಕಾರು

ಕಾರನ್ನು ನಿಲ್ಲಿಸಿದ ಚಾಲಕ ಪಿರಾನ್ ಪರಿಶೀಲನೆ ನಡೆಸಿದ್ದಾರೆ. ಆಗ ಬೆಂಕಿ ಹೊತ್ತಿಕೊಂಡಿರುವುದು ಗೊತ್ತಾಗಿದ್ದು, ಕೂಡಲೇ ಕಾರಿನಲ್ಲಿದ್ದ ಮಕ್ಕಳನ್ನು ಸ್ಥಳೀಯರ ಸಹಾಯದಿಂದ ಕೆಳಗಿಳಿಸಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಿದ್ದಾರೆ. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆ

ಮಡಿಕೇರಿ ಮೂಲದ ಮುತ್ತಪ್ಪ ಎಂಬ ಯುವಕ ಬೆಂಗಳೂರಿನಿಂದ ಮಡಿಕೇರಿಗೆ ತೆರಳುತ್ತಿದ್ದಾಗ ಮದ್ದೂರಿನ ಐಶ್ವರ್ಯ ಕಾನ್ವೆಂಟ್ ಬಳಿ ಸರ್ವೀಸ್ ರಸ್ತೆಯಲ್ಲಿ ಕಾರು ನಿಲ್ಲಿಸಿದ್ದಾರೆ. ಈ ವೇಳೆ ಅವರ ಕುತ್ತಿಗೆಗೆ ಮಾರಕಾಸ್ತ್ರಗಳನ್ನಿಟ್ಟು ಬೆದರಿಸಿ, ಅಂದಾಜು 3.50 ಲಕ್ಷ ಮೌಲ್ಯದ 65 ಗ್ರಾಂ ಚಿನ್ನದ ಸರ ಕಸಿದುಕೊಂಡು ಮೂವರು ದರೋಡೆಕೋರರು ಪರಾರಿ ಯಾಗಿದ್ದಾರೆ. ಅನಾರೋಗ್ಯ ನಿಮಿತ್ತ ಮುತ್ತಪ್ಪ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆದು, ಶುಕ್ರವಾರ ತಮ್ಮ ಇನ್ನೋವಾ ಕ್ರಿಸ್ಟಾ ಕಾರಿನಲ್ಲಿ ರಾತ್ರಿ 11.30ರ ವೇಳೆಯಲ್ಲಿ ಬೆಂಗಳೂರಿನಿಂದ ಮಡಿಕೇರಿ ಕಡೆಗೆ ಹೊರಟಿದ್ದಾರೆ. ಚನ್ನಪಟ್ಟಣದ ಬಳಿ ಟೀ ಕುಡಿದು, ಸರಿರಾತ್ರಿ 2.15ರ ವೇಳೆಗೆ ಮದ್ದೂರಿನ ಐಶ್ವರ್ಯ ಕಾನ್ವೆಂಟ್ ಬಳಿ ಬರುತ್ತಿದ್ದಂತೆಯೇ ಸುಸ್ತಾದ ಕಾರಣ ಕಾರನ್ನು ಸರ್ವೀಸ್ ರಸ್ತೆಯಲ್ಲಿ ನಿಲ್ಲಿಸಿ, ವಿಶ್ರಾಂತಿಗೆ ಮುಂದಾಗಿದ್ದಾರೆ.

ಕೆಲ ನಿಮಿಷದ ಬಳಿಕ ಪ್ರತ್ಯಕ್ಷರಾದ ಮೂವರು ದುಷ್ಕರ್ಮಿಗಳು, ನಾವು ಪೊಲೀಸ್ ಸಿಬ್ಬಂದಿ. ನೀವು ಕುಡಿದು ಮಲಗಿದ್ದೀರಾ. ತಪಾಸಣೆ ಮಾಡಬೇಕೆಂದು ಬಲವಂತವಾಗಿ ಕಾರಿನ ಬಾಗಿಲನ್ನು ತೆರೆಸಿದ್ದಾರೆ. ಅವರು ಕಾರಿನ ಬಾಗಿಲು ತೆರೆಯುತ್ತಿದ್ದಂತೆ ಇಬ್ಬರು ಒಳ ನುಸುಳಿ ತಮ್ಮ ಬಳಿ ಇದ್ದ ಮಾರಕಾಸ್ತ್ರಗಳನ್ನು ಮುತ್ತಪ್ಪ ಅವರ ಕತ್ತಿನ ಮೇಲಿಟ್ಟು ಹಣ ಮತ್ತು ಚಿನ್ನಾಭರಣ ನೀಡುವಂತೆ ಧಮಕಿ ಹಾಕಿದ್ದಾರೆ. ಅದಕ್ಕೆ ಮುತ್ತಪ್ಪ ಒಪ್ಪದಿದ್ದಾಗ ಅವರ ಬಲಗೈ ಮತ್ತು ಕತ್ತಿನ ಬಳಿ ಮಾರಕಾಸ್ತ್ರಗಳಿಂದ ಗಾಯಗೊಳಿಸಿದ್ದಾರೆ. ಈ ವೇಳೆ ಹೆದರಿದ ಮುತ್ತಪ್ಪನವರಿಂದ ಅಂದಾಜು 65 ಗ್ರಾಂ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಕೆಲ ಹೊತ್ತಿನಲ್ಲೇ ಸ್ಥಳಕ್ಕೆ ಆಗಮಿಸಿದ ಹೆದ್ದಾರಿ ಗಸ್ತು ಪೊಲೀಸರು ಮದ್ದೂರು ಆಸ್ಪತ್ರೆಯಲ್ಲಿ ಮುತ್ತಪ್ಪಗೆ ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ಮುತ್ತಪ್ಪ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಈ ಸಂಬಂಧ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಯತೀಂದ್ರ ಸಿದ್ದರಾಮಯ್ಯ, ಹರೀಶ್ ಗೌಡರಿಗೆ ಅಭಿನಂದನೆ



ಮೈಸೂರು, ಜು.1(ಜಿಎ)–ನೂತನ ಶಾಸಕರು ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಾಲಾ–ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಅಲ್ಲಿನ ಸಮಸ್ಯೆಗಳನ್ನು ಆಲಿಸಿ ಎಂದು ಪ್ರಗತಿಪರ ಚಿಂತಕ ಡಾ.ಕೆ. ಕಾಳಚನ್ನೇಗೌಡ ಸಲಹೆ ನೀಡಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಸ್ನೇಹ ಬಳಗ ವತಿಯಿಂದ ಶನಿವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ನೂತನ ಶಾಸಕ ಕೆ.ಹರೀಶ್ ಗೌಡ ಮತ್ತು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿ ಮಾತನಾಡಿದರು.

ಯತೀಂದ್ರ ಸಿದ್ದರಾಮಯ್ಯ ಮತ್ತು ಕೆ.ಹರೀಶ್‌ಗೌಡ ಇಬ್ಬರು ಸರಳ ವ್ಯಕ್ತಿತ್ವದವರಾಗಿದ್ದು, ಎಲ್ಲರಿಗೂ ಸಿಗುತ್ತಾರೆ. ಹರೀಶ್ ಗೌಡರು ಹೋರಾಟ ಮನೋಭಾವದೊಂದಿಗೆ ಬೆಳೆದು ಬಂದ ಸ್ನೇಹಜೀವಿಯಾಗಿದ್ದಾರೆ. ಗುರಿಯನ್ನು ಮುಟ್ಟಲು ತಾಳ್ಮೆಯನ್ನು ಕಾಯ್ದುಕೊಳ್ಳುತ್ತಾರೆ. ಅದಕ್ಕೆ ಅವರು ಈ ಚುನಾವಣೆ ಗೆದ್ದಿದ್ದೇ ಸಾಕ್ಷಿಯಾಗಿದೆ ಎಂದರು.

ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದ್ದು, ಅದನ್ನು ಜನರಿಗೆ ತಲುಪಿಸಬೇಕು. ಅದಕ್ಕಾಗಿ ಅಬ್ದುಲ್ ನಜೀರ್ ಸಾಬ್ ಅವರು ಸರ್ಕಾರದ ಯೋಜನೆಗಳ ಬಗ್ಗೆ ಪುಸ್ತಕ ಬರೆದಿದ್ದಾರೆ. ಅದು ಸ್ಪಷ್ಟವಾಗಿ ಸರಳವಾಗಿದೆ. ಪ್ರತಿಯೊಬ್ಬ ಶಾಸಕರು ಅದನ್ನು ಓದಿಕೊಂಡರೆ ಸಾಕು. ಜನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸಬಹುದು. ಉಚಿತ ಯೋಜನೆಗೆ ಆರಂಭದಲ್ಲಿ ಕೆಲ ತೊಡಕು ಉಂಟಾಯಿತು. ಆದರೆ, ಈಗ ಎಲ್ಲವೂ ಸರಿಯಾಗಿದೆ ಎಂದು ತಿಳಿಸಿದರು.

ನಗರದ ಪಾರಂಪರಿಕ ಕಟ್ಟಡಗಳ ಬಗ್ಗೆ ಹೆಚ್ಚು ಗಮನಹರಿಸಿ. ಮೈಸೂರಿನಲ್ಲಿ ಶಿಕ್ಷಣಕ್ಕೆ ವಿಶೇಷ ಆದ್ಯತೆ ಇದ್ದು, ಅದರಂತೆ ಮಹಾರಾಜ, ಮಹಾರಾಣಿ ಮತ್ತು ಮೈಸೂರು ವಿವಿ ಸೇರಿದಂತೆ ನಗರ ಬಹುತೇಕ ಹಳೆಯ ಕಾಲೇಜುಗಳಲ್ಲಿ ಅಭಿವೃದ್ಧಿ ಕಡಿಮೆ ಆಗುತ್ತಿದ್ದು, ನಿಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಆಲಿಸಿ, ಅನೇಕ ಯೋಜನೆಗಳನ್ನು ಪ್ರಚಾರ ಮಾಡಿ ವಿದ್ಯಾರ್ಥಿಗಳಲ್ಲಿ ಕೌಶಲ್ಯತೆ ಹೆಚ್ಚಿಸುವುದಕ್ಕೆ ಆದ್ಯತೆ ನೀಡುವುದರ ಮೂಲಕ ಮೂಲಭೂತ ಸೌಕರ್ಯಗಳ ಬಗ್ಗೆಯೂ ಗಮನಹರಿಸಿ ಎಂದರು.

ಯತೀಂದ್ರ ಸಿದ್ದರಾಮಯ್ಯ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದು, ಎಲ್ಲರೊಟ್ಟಿಗೆ ಸರಳತೆಯಿಂದ ಬೆರೆಯುತ್ತಾರೆ. ಅವರು ಶಾಸಕರಲ್ಲದಿದ್ದರೂ ಅವರಿಗೆ ಖ್ಯಾತಿ ಇದ್ದು, ಸಿದ್ದರಾಮಯ್ಯ ಅವರ ಗೆಲುವಿನಲ್ಲಿ ಸಿಂಹ ಪಾಲಿದೆ. ಸಮಾಜ ಒಂದು ದೇಹವಾಗಿದೆ. ರಸ್ತೆಗಳು ನರನಾಡಿಗಳು. ನೀವು ವೈದ್ಯರಾಗಿರುವುದರಿಂದ ಅವುಗಳ ತೊಂದರೆಯನ್ನು ಸರಿಪಡಿಸಿ ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಶ್ರಮಿಸಿ ಎಂದು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ನಗರದಲ್ಲಿ ಸಾಕಷ್ಟು ಪಾರಂಪರಿಕ ಕಟ್ಟಡಗಳಿದ್ದು, ಶಾಸಕರು ಅದನ್ನು ಸಂರಕ್ಷಿಸುವ ಕಾರ್ಯಕ್ಕೆ ಮುಂದಾಗಬೇಕಿದೆ. ಮೈಸೂರಿನ ಅಭಿವೃದ್ಧಿ ಮತ್ತು ಪ್ರವಾಸೋದ್ಯಮಕ್ಕೆ ಒತ್ತು ನೀಡುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಟ್ಟಿಗೆ ನಗರದ ವಿವಿಧ ಸಂಘ–ಸಂಸ್ಥೆಗಳೊಂದಿಗೆ ಸಂವಾದ ಏರ್ಪಡಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ನಾನು ಶಾಸಕನಾಗಿ ಬೇಸಿಕ್ ಆಗಿ ಕೆಲಸ ಮಾಡಿದ್ದೇನೆ ಅಷ್ಟೇ. ಆದರೂ ಸನ್ಮಾನ ಮಾಡಿದ್ದಾರೆ. ಆದರೆ, ಹರೀಶ್ ಗೌಡರು ಶಾಸಕರಾಗುವ ಮುಂಚಿತವಾಗಿ ಬಹಳಷ್ಟು ಕೆಲಸ ಮಾಡಿದ್ದಾರೆ. ಟಿಕೆಟ್ ಪಕ್ಕಾ ಎಂದು ಯಾರೂ ಹೇಳಿರಲಿಲ್ಲ. ಆದರೂ ಅವರು ಕೊರೊನಾ ಸಂದರ್ಭದಲ್ಲಿ ಸ್ವಂತ ಖರ್ಚಿನಲ್ಲಿ ಸೇವೆ ಮಾಡಿದ್ದಾರೆ. ಅಧಿಕಾರವಿಲ್ಲದಾಗಲೇ ಜನರ ಮೇಲೆ ಕಾಳಜಿ ಇಟ್ಟುಕೊಂಡಿರುವ ಅವರು ಈಗ ಶಾಸಕರಾದ ಮೇಲೆ ಜನರಿಗೆ ಉತ್ತಮ ಸೇವೆ ಸಲ್ಲಿಸಲಿದ್ದಾರೆ ಎಂದರು.

ಇಂದಿನ ಕಾರ್ಯಕ್ರಮದಲ್ಲಿ ಮೈಸೂರಿನ ಅಭಿವೃದ್ಧಿ ಮತ್ತು ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡಬೇಕೆಂದು ಅನೇಕ ಸಲಹೆಗಳು ಬಂದಿವೆ. ನಮ್ಮ ತಂದೆ ಅವರು ಮೈಸೂರಿನವರೇ ಆಗಿರುವುದರಿಂದ ಜಿಲ್ಲೆಯ ಮೇಲೆ ಹೆಚ್ಚಿನ ಒಲವಿದೆ. ಮೈಸೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಗಮನಕ್ಕೆ ತರುತ್ತೇನೆಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ 1 ಕೆಜಿ ತೂಕದ ಬೆಳ್ಳಿ ಖಡ್ಗ ಹಾಗೂ ಹರೀಶ್‌ಗೌಡರಿಗೆ 1 ಕೆಜಿ ತೂಕದ ಬೆಳ್ಳಿ ಕಿರೀಟ ಧಾರಣೆ ಮಾಡುವ ಮೂಲಕ ಸನ್ಮಾನಿಸಲಾಯಿತು. ಈ ವೇಳೆ ಕನ್ನಡ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ಜೆಪಿಎನ್ ಪ್ರಾಪರ್ಟೀಸ್‌ನ ಮಾಲೀಕ ಪಿ.ನಾಗೇಂದ್ರ, ಶ್ರೀ ವೈಷ್ಣವಿ ಸ್ವೀಟ್ಸ್ ಮಾಲೀಕ ಜಿ.ನವೀನ್, ಕನ್ನಡ ಸ್ನೇಹ ಬಳಗದ ಅಧ್ಯಕ್ಷ ಪಿ.ಬಂದಿಗೌಡ, ಸಾಹಿತಿ ಸತೀಶ್ ಜವರೇಗೌಡ ಮತ್ತು ಪದಾಧಿಕಾರಿಗಳಾದ ಸಿ.ರಮೇಶ್, ಬಾಲಚಂದ್ರ, ಎಂ.ಮಾದಪ್ಪ, ಕೃಷ್ಣಪ್ಪ ಮತ್ತು ರಾಜ್‌ಕುಮಾರ್ ಉಪಸ್ಥಿತರಿದ್ದರು.

ಯತೀಂದ್ರ ಅವರು ನಮ್ಮ ಕ್ಯಾಪ್ಟನ್...

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡರು, ಅಭಿನಂದನಾ ಸಮಾರಂಭ ನಡೆಯುತ್ತಿರುವುದು ಚಾಮರಾಜ ಕ್ಷೇತ್ರದ ಮತದಾರರ ಕೃಪೆ ಮತ್ತು ಸಿದ್ದರಾಮಯ್ಯ ಹಾಗೂ ಯತೀಂದ್ರ ಸಿದ್ದರಾಮಯ್ಯ ಅವರ ಸಹಕಾರದಿಂದ. ಅವರಿಗೆ ನಾನು ಜೀವನಪೂರ್ತಿ ಚಿರಋಣಿಯಾಗಿರುತ್ತೇನೆ ಎಂದರು.

ಜೆಡಿಎಸ್ ಪಕ್ಷದಲ್ಲಿ ಟಿಕೆಟ್ ದೊರಕದ ಸಂದರ್ಭದಲ್ಲಿ ನನಗೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಡಿಸಲು ಯತೀಂದ್ರ ಅವರು ಸಾಕಷ್ಟು ಶ್ರಮಪಟ್ಟಿದ್ದರು. ಕಾಂಗ್ರೆಸ್‌ನಲ್ಲಿ ಯಾವ ನಾಯಕರೂ ಬಿ ಫಾರಂ ನೀಡುವ ಬಗ್ಗೆ ಭರವಸೆ ನೀಡಿರಲಿಲ್ಲ. ಆದರೆ, ತಂದೆ ಸಮಾನರಾದ ಸಿದ್ದರಾಮಯ್ಯ ಅವರು ಪೂರ್ಣ ಪ್ರಮಾಣದಲ್ಲಿ ಭರವಸೆ ನೀಡಿದರು. ಅವರಿಗೆ ಆಭಾರಿಯಾಗಿದ್ದೇನೆ ಎಂದು ಹೇಳಿದರು.

ಯತೀಂದ್ರ ಅವರನ್ನು ಎಂಎಲ್‌ಸಿ ಮಾಡಿ ಮಂತ್ರಿ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸುತ್ತಿದ್ದೇನೆ. ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ಸಾಕಷ್ಟು ಶಾಸಕರು ಮೊದಲ ಬಾರಿ ಚುನಾಯಿತರಾಗಿದ್ದು, ನಮಗೆಲ್ಲ ಯತೀಂದ್ರ ಅವರು ಕ್ಯಾಪ್ಟನ್. ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ಜನಪದ ದೇಶ ಕಟ್ಟುವ ಸಂಸ್ಕೃತಿ: ಜ್ಞಾನಪ್ರಕಾಶ್ ಸ್ವಾಮೀಜಿ



ಮೈಸೂರು, ಜು.1(ಜಿಎ)– ಜನಪದ ಸಂಸ್ಕೃತಿ ಎಲ್ಲರನ್ನು ಒಳಗೊಂಡು ದೇಶದ ಮನಸುಗಳನ್ನು ಕಟ್ಟುವ ಸಂಸ್ಕೃತಿಯಾಗಿದೆ ಎಂದು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಮತ್ತು ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ರಂಗಭೂಮಿ, ಜಾನಪದ ಕಲಾಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಜನಪದ ಕಲಾ ಪ್ರಕಾರಗಳು ಇಂದು ವಿಶ್ವಕ್ಕೆ ಮಾದರಿಯಾಗಿವೆ. ಅಷ್ಟು ಅದ್ಭುತ ಪ್ರತಿಭೆಯ ಕಲಾ ಪ್ರಕಾರಗಳು ನಮ್ಮಲ್ಲಿವೆ, ಅದನ್ನು ಅರ್ಥ ಮಾಡಿಕೊಳ್ಳುವ ಸಾಮಾನ್ಯ ಪ್ರಜ್ಞೆ ನಮ್ಮಲ್ಲಿರಬೇಕಾದ ಅವಶ್ಯಕತೆಯಿದೆ. ಒಂದು ದೇಶವೆಂದರೆ ಕಲ್ಲು, ಗುಡ್ಡೆ, ನದಿ, ನೀರು ಪರ್ವತಗಳಲ್ಲ, ಅದೇ ರೀತಿ ದೇಶವೆಂದರೆ ಭೂಪಟವು ಅಲ್ಲ, ದೇಶವೆಂದರೆ ಸಂಸ್ಕೃತಿಯ ಸಂಪತ್ತು. ಜಾನಪದ ಮತ್ತು ಜನಪದ ಸಂಸ್ಕೃತಿ ಭಾರತದ ಬೇರುಗಳು. ಈ ಬೇರುಗಳು ವಿಶ್ವದಾದ್ಯಂತ ಪಸರಿಸಿವೆ ಎಂದರು.

ನಮ್ಮ ಸಂಸ್ಕೃತಿ ದೀಪದಿಂದ ದೀಪವನ್ನು ಬೆಳಗುವ ಸಂಸ್ಕೃತಿ. ನಾಡು ನುಡಿ ಜಲ ಭಾಷೆಯನ್ನು ಜೀವಂತವಾಗಿರಿಸುವ ನಮ್ಮ ಮಣ್ಣಿನ ಮೂಲ ಸಂಸ್ಕೃತಿ ಜನಪದ ಸಂಸ್ಕೃತಿಯಾಗಿದ್ದು, ಇಂತಹ ಸಂಸ್ಕೃತಿಯನ್ನು ರಕ್ಷಣೆ ಮಾಡಲೆಂದೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಾವಿರಾರು ಕೋಟಿ ಹಣ ವಿನಿಯೋಗ ಮಾಡುತ್ತಿದೆ. ಆದರೆ ಇಂದು ರಂಗಭೂಮಿ, ರಂಗಭೂಮಿ ಯಾಗಿ ಉಳಿದಿಲ್ಲ. ಅಲ್ಲಿನ ದೃಷ್ಟಿಕೋನವೇ ಬದಲಾಗಿದೆ ಎಂದು ವಿಷಾದಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಜನಪದ ಕಲೆಗಳು ಎಂದು ಕೂಡ ಮರೆಯಾಗಬಾರದು, ಈ ರೀತಿ ಎಚ್ಚರ ಮೂಡಿಸುವುದು ಇಡೀ ಸಮಾಜದ ಕರ್ತವ್ಯ. ಈ ಕಲೆಗಳನ್ನು ಮುಂದುವರೆಸಿಕೊಂಡು ಹೋಗೋಣ, ಈ ಕಲೆಗಳು ಯುವ ಶಕ್ತಿಗೆ ನೀಡುತ್ತ, ಈ ನೆಲ ಮೂಲದ ಸಂಸ್ಕೃತಿಯನ್ನು ಉಳಿಸಿಕೊಳ್ಳುತ್ತ, ಸಂಸ್ಕೃತಿಯನ್ನು ಸಮೃದ್ಧಗೊಳಿಸೋಣ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಎಚ್.ಜನಾರ್ಧನ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ಗೌತಮ ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಉಪಸ್ಥಿತರಿದ್ದರು.

ಇಬ್ಬರು ಹಿರಿಯ ವೈದ್ಯರಿಗೆ "ವೈದ್ಯ ರತ್ನ" ಪ್ರಶಸ್ತಿ ಪ್ರದಾನ



ಮೈಸೂರು, ಜು.1(ಜಿಎ)–ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ವೈದ್ಯರಿಗೆ ವೈದ್ಯ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಪತ್ರಕರ್ತರ ಭವನದಲ್ಲಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮತ್ತು ಸಮಾಜ ಸೇವಕ ರಘುರಾಮ್ ವಾಜಪೇಯಿ ಅವರು ವೈದ್ಯರಾದ ಡಾ.ಕೆ.ವಿ. ಲಕ್ಷ್ಮೀದೇವಿ ಮತ್ತು ಡಾ.ಪೂರ್ಣಿಮಾ ಮಧುಸೂಧನ್ ಅವರಿಗೆ ವೈದ್ಯ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ನಂತರ ಸಮಾಜ ಸೇವಕ ರಘುರಾಮ್ ವಾಜಪೇಯಿ ಮಾತನಾಡಿ, ವೈದ್ಯರಾಗಿದ್ದ ಡಾ.ಬಿ.ಸಿ.ರಾಯ್ ಅವರು ಗಾಂಧೀಜಿ ಅವರ ವಿಚಾರಧಾರೆಗಳ ಪ್ರೇರಣೆ ಪಡೆದು ಪಶ್ಚಿಮ ಬಂಗಾಳದಲ್ಲಿ ಸಮಾಜ ಸೇವೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡಿದ್ದರು. ನಂತರ ಗಾಂಧೀಜಿ ಅವರ ಸಲಹೆಯಂತೆ ರಾಜಕೀಯ ಪ್ರವೇಶಿಸಿ ಅಲ್ಲಿನ ಮುಖ್ಯಮಂತ್ರಿಗಳಾಗಿ ಉತ್ತಮ ಸೇವೆ ನೀಡಿದರು. ಹಾಗೇ ತಮ್ಮ ವೃತ್ತಿಯನ್ನು ಮರೆಯದ ಅವರು ಸಂಜೆ ವೇಳೆ ಜನರಿಗಾಗಿ ಕ್ಲಿನಿಕ್ ತೆರೆಯುತ್ತಿದ್ದರು ಎಂದು ಸ್ಮರಿಸಿದರು..

ಈ ವೇಳೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಮಾತನಾಡಿ, ನಾನು ಸೈನಿಕನಾಗಿ ಪಂಜಾಬಿನಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಒಮ್ಮೆ ಹೊಟ್ಟೆಗೆ ಗುಂಡೇಟು ಬಿದ್ದಿತು. ಈ ವೇಳೆ ಕೋಮಾ ಸ್ಥಿತಿಗೆ ತಲುಪಿದೆ. ಅಂದು ವೈದ್ಯರು ಸೂಕ್ತ ಚಿಕಿತ್ಸೆ ನೀಡದಿದ್ದರೆ, ಇಂದು ಎಂಎಲ್‌ಸಿ ಆಗುತ್ತಿರಲಿಲ್ಲ ಎಂದು ನೆನೆದರು. ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ಫೌಂಡೇಷನ್ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು ಮತ್ತು ಸಂಚಾಲಕ ಎನ್.ಅನಂತ್ ಉಪಸ್ಥಿತರಿದ್ದರು.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

ಮೈಸೂರು, ಜು.1–ನಗರದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 4 ಪರೀಕ್ಷಾ ಕೇಂದ್ರಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಗ್ರೇಡ್–1 ಹುದ್ದೆಗಳಿಗೆ ಪರೀಕ್ಷೆ ನಡೆಯುತ್ತಿದ್ದು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಜು.1 ರಿಂದ 2 ರವರೆಗೆ ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಲಂ 144 ಸಿ.ಆರ್.ಪಿ.ಸಿ ಅನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ನಿಷೇಧಾಜ್ಞೆಗೆ ಒಳಪಡುವ ಕಾಲೇಜುಗಳು: ನಜರ್‌ಬಾದ್ ಪೀಪಲ್ಸ್ ಪಾರ್ಕ್‌ನಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಕುವೆಂಪುನಗರದಲ್ಲಿನ ಅನಿಕೇತನ ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು, ದೇವರಾಜ ಪೊಲೀಸ್ ಠಾಣೆಯ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಸರಕಾರಿ ಪದವಿ ಪೂರ್ವ ಕಾಲೇಜು ಹಾಗೂ ಎಂಜಿ ಕೊಪ್ಪಲಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸುತ್ತಲೂ ನಿಷೇಧಾಜ್ಞೆ ಜಾರಿಯಲ್ಲಿ ಇರುವುದರಿಂದ ಈ ಸ್ಥಳಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಮತ್ತು ಪರೀಕ್ಷಾ ಕೇಂದ್ರಗಳ ಸುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಿಂದ ಅಹವಾಲು ಸ್ವೀಕಾರ

ಮೈಸೂರು, ಜು.1–ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಹೆಚ್.ಸಿ.ಮಹದೇವಪ್ಪ ಇಂದು ಜಲದರ್ಶಿನಿ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಸಾರ್ವಜನಿಕರು ತಮ್ಮ ವೈಯಕ್ತಿಕ ಹಾಗೂ ಸಾರ್ವಜನಿಕ ಸಮಸ್ಯೆಗಳ ಕುರಿತು ಮನವಿಗಳನ್ನು ಸಲ್ಲಿಸಿದರು.

ಸಮರ್ಪಕ ಮಳೆ ಬರುವವರೆಗೂ ನೀರಿನ ಮಿತ ಬಳಕೆ ಜಾಗೃತಿ ಮೂಡಿಸಿ

ಜಿಲ್ಲಾಮಟ್ಟದ ಮಾಸಿಕ ಕೆಡಿಪಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸೂಚನೆ



ಮೈಸೂರು,ಜು.1(ಎಂಟಿವೈ)– ಮಳೆ ಕೊರತೆಯಿಂದಾಗಿ ಜಲಾಶಯಗಳಲ್ಲಿ ನೀರಿನ ಮಟ್ಟ ಕ್ಷೀಣಿಸಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನದಲ್ಲಿ ಮಳೆಯಾಗದಿದ್ದರೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆಯಿರುವುದರಿಂದ ಜಿಲ್ಲಾದ್ಯಂತ ಕುಡಿಯುವ ನೀರಿನ ಮಿತ ಬಳಕೆ ಕುರಿತು ಜಾಗೃತಿ ಮೂಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಮಟ್ಟದ ಮಾಸಿಕ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರಿಗೆ ಕುಡಿಯುವ ನೀರು ಪೂರೈಸುತ್ತಿದ್ದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ನೀರಿನ ಪ್ರಮಾಣ ಕ್ಷೀಣಿಸಿದೆ. ಈ ಸಂಬಂಧ ಈಗಾಗಲೇ ಅಧಿಕಾರಿಗಳ ಸಭೆ ನಡೆಸಲಾಗಿದೆ. ಜಿಲ್ಲೆಯಲ್ಲಿ 13 ಸ್ಥಳೀಯ ಸಂಸ್ಥೆ, ಮೈಸೂರು ಮಹಾನಗರ ಪಾಲಿಕೆ, 256 ಗ್ರಾಪಂ ಇವೆ. ಕೆ.ಆರ್.ನಗರ ತಾಲೂಕಿನ ಒಂದು ಗ್ರಾಮಕ್ಕೆ ಮಾತ್ರ ಟ್ಯಾಂಕರ್‌ನಲ್ಲಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿತ್ತು. ಇದೀಗ ಆ ಸಮಸ್ಯೆಯೂ ಬಗೆಹರಿದಿದೆ. ಜಲಾಶಯಗಳಲ್ಲಿರುವ ನೀರಿನಿಂದ ಆ.15ರವರೆಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ. ಆಗಸ್ಟ್ ಎರಡನೇ ವಾರದವರೆಗೆ ಮಳೆಯಾಗದಿದ್ದರೆ ನಂತರದ ದಿನಗಳಲ್ಲಿ ಸ್ವಲ್ಪ ಕುಡಿಯುವ ನೀರಿನ ಸಮಸ್ಯೆ ಆರಂಭವಾಗುತ್ತದೆ. ಹೀಗಾಗಿ ನೀರಿನ ಮಿತ ಬಳಕೆಗೆ ಜಾಗೃತಿ ಮೂಡಿಸುವಂತೆ ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳ ಸಭೆ ಮಾಡಿ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

1.10 ಕೋಟಿ ರೂ.ಗಳಲ್ಲಿ 79 ಬೋರ್ ವೆಲ್: ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಎಂಜಿನಿಯರ್ ಸುರೇಶ್ ಬಾಬು ಕುಡಿಯುವ ನೀರು ಪೂರೈಕೆಗಾಗಿ ಕೈಗೊಂಡಿರುವ ಕ್ರಮ ಕುರಿತಂತೆ ಮಾಹಿತಿ ನೀಡಿ, ಆ.15ರವರೆಗೆ ಮಳೆಯಾಗದಿದ್ದರೆ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರವಹಿಸಲು ಕ್ರಮ ಕೈಗೊಳ್ಳಲಾಗಿದೆ. 1,10 ಲಕ್ಷ ರೂ. ವೆಚ್ಚದಲ್ಲಿ 79 ಬೋರ್‌ವೆಲ್ ಕೊರೆಸಲು ಕ್ರಮ ಕೈಗೊಳ್ಳಲಾಗಿದೆ. ಹೆಚ್.ಡಿ.ಕೋಟೆ, ಹುಣಸೂರು ತಾಲೂಕಲ್ಲಿ ತಲಾ 12, ಕೆ.ಆರ್.ನಗರ, ಸಾಲಿಗ್ರಾಮ, ಪಿರಿಯಾಪಟ್ಟಣ ತಾಲೂಕಲ್ಲಿ ತಲಾ 10, ಸರಗೂರು 9, ಮೈಸೂರು 5, ನಂಜನಗೂಡು 7, ತಿ.ನರಸೀಪುರ 4 ಹೊಸದಾಗಿ ಬೋರ್‌ವೆಲ್ ತೋಡಿಸಲು ಸ್ಥಳ ಗುರುತಿಸಲಾಗಿದೆ. ಒಟ್ಟು 79 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ನೈಟ್ರೇಟ್ ಹೆಚ್ಚಳ: ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಕುಡಿಯುವ ನೀರು ಪೂರೈಸುತ್ತಿರುವ ನೀರಿನ ಮೂಲದಿಂದ ನೀರಿನ ಸ್ಯಾಂಪಲ್ ಪರಿಶೀಲಿಸಲಾಗಿದೆ. ಏ.1 ರಿಂದ ಜೂನ್ ಅಂತ್ಯದವರೆಗೆ 148 ಕಡೆ ಕಂಟಾಮಿನೇಷನ್ ಆಗಿದೆ. ಈ ಭಾಗದಲ್ಲಿ ನೈಟ್ರೇಟ್ ಅಂಶ ಹೆಚ್ಚಾಗಿರುವುದು ಕಂಡು ಬಂದಿದೆ. ಈ ಮೂಲಗಳಿಂದ ನೀರು ಪಡೆಯದಂತೆ ಬಂದ್ ಮಾಡಲಾಗಿದೆ ಬದಲಾಗಿ ಈ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಪಡಿತರ ವಿತರಣೆಗೆ ಕ್ರಮ: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕಿ ಕುಮುದಾ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಬಿಪಿಎಲ್, ಎಪಿಎಲ್, ಅಂತ್ಯೋದಯ ಸೇರಿದಂತೆ 7,11,314 ಪಡಿತರ ಚೀಟಿ ಹಂಚಿಕೆಯಾಗಿದ್ದು, 22,99,625 ಮಂದಿಗೆ ಪಡಿತರ ವಸ್ತುಗಳನ್ನು ವಿತರಿಸಲಾಗುತ್ತಿದೆ. ಅಂತ್ಯೋದಯ ಕಾರ್ಡ್ ಹೊಂದಿರುವವರಿಗೆ 7057.54 ಕೆಜಿ ರಾಗಿ, 10586,31 ಕೆಜಿ ಅಕ್ಕಿ ಸೇರಿದಂತೆ ತಿಂಗಳಿಗೆ 17643.85 ಕೆಜಿ ಧಾನ್ಯ ಬೇಕಾಗುತ್ತದೆ. ಬಿಪಿಎಲ್ ಕಾರ್ಡ್‌ದಾರರಿಗೆ 41,648.85 ಕೆಜಿ ರಾಗಿ, 83297.60 ಕೆಜಿ ಅಕ್ಕಿ ಸೇರಿದಂತೆ 12494640 ಕೆಜಿ ಧಾನ್ಯದ ಅಗತ್ಯವಿದೆ. ಎಪಿಎಲ್ ಕಾರ್ಡ್‌ವುಳ್ಳವರಿಗೆ 3582.65 ಕೆಜಿ ಅಕ್ಕಿ ಅವಶ್ಯಕತೆಯಿದೆ ಎಂದು ವಿವರಿಸಿದರು.


ಜಿಲ್ಲೆಯಲ್ಲಿ 7,11,314 ಪಡಿತರ ಕಾರ್ಡ್ ನೀಡಲಾಗಿದ್ದು, ಅವುಗಳಲ್ಲಿ ಶೇ.95.18 ರಷ್ಟರಂತೆ 628428 ಕಾರ್ಡ್‌ದಾರರು ಕೆವೈಸಿ ಮಾಡಿಸಿದ್ದಾರೆ. ಹೊಸದಾಗಿ ಪಡಿತರ ಚೀಟಿ ಪಡೆಯಲು 42,144 ಮಂದಿ ಅರ್ಜಿ ಸಲ್ಲಿಸಿದ್ದರು. ಅದರಲ್ಲಿ 2358 ಮಂದಿ ಅರ್ಜಿಯನ್ನು ಹಿಂಪಡೆದಿದ್ದಾರೆ. 20634 ಅರ್ಜಿಗಳನ್ನು ಅಪ್ರೂವ್ ಮಾಡಲಾಗಿದೆ. 13,195 ಅರ್ಜಿ ತಿರಸ್ಕರಿಸಲಾಗಿದೆ. 8315 ಅರ್ಜಿಗಳು ಪೆಂಡಿಂಗ್ ಇಡಲಾಗಿದೆ ಎಂದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಡಿಸಿಎಫ್‌ಗಳಾದ ಸೌರಭ್‌ಕುಮಾರ್, ಬಸವರಾಜು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಶಕ್ತಿ ಯೋಜನೆಯಿಂದ 12.57 ಕೋಟಿ ರೂ. ಬಾಕಿ

ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮಾತನಾಡಿ, ಮೈಸೂರಲ್ಲಿ 1071 ಬಸ್‌ಗಳಿದ್ದು, ಅವುಗಳಲ್ಲಿ 730 ಬಸ್ ಶಕ್ತಿ ಯೋಜನೆಗೆ ಬಳಕೆಯಾಗುತ್ತಿದೆ. ಪ್ರತಿದಿನ 3 ಲಕ್ಷ ಮಹಿಳಾ ಪ್ರಯಾಣಿಕರಂತೆ ಇದುವರೆಗೂ 57 ಲಕ್ಷ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯಡಿ ಉಚಿತವಾಗಿ ಪ್ರಯಾಣಿಸಿದ್ದು, ಮೈಸೂರು ವಿಭಾಗಕ್ಕೆ ಜೂ. 11 ರಿಂದ ಜೂ. 29 ರವರೆಗೆ 12.57 ಕೋಟಿ ರೂ. ಸರ್ಕಾರದಿಂದ ಬರಬೇಕಾಗಿದೆ ಎಂದು ತಿಳಿಸಿದರು.

ನೆಮ್ಮದಿ



ಹಕ್ಕಿಗಳ ಹಸಿವು ನೀಗಿಸಲು ನಾಲ್ಕಾರು ಕಾಳುಗಳು ಸಾಕು. ಆದರೆ ಮನುಷ್ಯನ ಹಸಿವು ನೀಗಿಸಲು ಹತ್ತಾರು ಖಜಾನೆಯಾದರೂ ಬೇಕು. ಈ ಧೋರಣೆಯನ್ನು ಬಿಟ್ಟು ಹಕ್ಕಿಯಂತೆ ಆಗಬೇಕು, ಹಕ್ಕಿಯಂತೆ ಹಾರಬೇಕು. ಈ ಜೀವನದಲ್ಲಿ ನೆಮ್ಮದಿಗಿಂತ ಮತ್ಯಾವುದೇ ಸಂಪಾದನೆ ಇಲ್ಲ, ನೆಲೆಯೂರಿರುವ ಎರಡು ಪಾದದಷ್ಟಾದರೂ ನೆಮ್ಮದಿ ಇದ್ದರೆ ಜೀವನವಿದು ಬಲು ಸೌಖ್ಯ. ನೆಮ್ಮದಿ ಎಂದಿಗೂ ಹುಡುಕುವ, ಅರಸುತ್ತಾ ಸಾಗಿ ಗಳಿಸುವ ವಸ್ತುವಲ್ಲ ಬದಲಿಗೆ ಅದು ತಾನಾಗಿಯೇ ಇರುವ, ಕೇವಲ ಅನುಭವಜನ್ಯವಾದ ಮನಸ್ಥಿತಿಯ ಅಂತಸ್ತು.

ಜೀವನದಲ್ಲಿ ಸಂತೃಪ್ತಿಯಿಂದ ಬದುಕಲು ಎಲ್ಲವೂ ಹೇರಳವಾಗಿರಬೇಕೆಂದೇನು ಇಲ್ಲ. ಇರುವುದರಲ್ಲೇ ತೃಪ್ತಿ–ಆನಂದದಿಂದ ಜೀವಿಸಿದರೆ ಸಾಕು ನೆಮ್ಮದಿಯನ್ನು ಸೆರೆ ಹಿಡಿಯಬಹುದು. ಅಂತೆಯೇ **"ಎಲ್ಲಿದೆ ನಂದನ, ಎಲ್ಲಿದೆ ಬಂಧನ, ಎಲ್ಲಾ ಇವೆ ಇಲ್ಲಿ ನಮ್ಮೊಳಗೆ, ಒಳಗಿನ ತಿಳಿಯನು ಕಲಕದೆ ಇದ್ದರೆ ಅಮೃತದ ಸವಿ ಇದೆ ನಾಲಗೆಗೆ..."** ಎಂಬ ಜಿಎಸ್‌ಎಸ್ (ಜಿ.ಎಸ್. ಶಿವರುದ್ರಪ್ಪ) ಅವರ ಅಮೃತಸುಧೆಯ ಅಮರ ವಾಣಿಯನ್ನು ಸಂಸ್ಮರಿಸಿಕೊಂಡು ಈ ಮೂರು ದಿನದ ಬಾಳಾಟದಲ್ಲಿ ಅನುಸಂಧಾನದ ಸೆರಗನ್ನು ಸರಿಸಿ, ಅನುಬಂಧವನ್ನು ಬದಿಗೊತ್ತಿ ಚಿರ ಬಾಂಧವ್ಯದಲ್ಲಿ ಬಿರುಕು ಮೂಡಿಸುತ್ತಿದ್ದೇವೆ. ಕಾಣದ ಮತ್ತು ಸದಾ ಆಕರ್ಷಿಸುವ ಅಂದಕ್ಕೆ ಮನಸೋತು ಆನಂದವನ್ನು ಮಾರಾಟ ಮಾಡಿ, ದುಗುಡ ಹಾಗೂ ಸಾಕಷ್ಟು ದುಃಖವನ್ನು ಸಂಪಾದಿಸುತ್ತಾ ಬದುಕಿನ ನಿಜವಾದ ಸಾರ್ಥಕತೆಯನ್ನು ಮರೆತು ಬಿಡುತ್ತಿದ್ದೇವೆ.

ಪ್ರಸ್ತುತ ಘಟಿಸುತ್ತಿರುವ ಸಾವು–ನೋವುಗಳು ಮನುಷ್ಯನ ಮನವನ್ನು ಅಷ್ಟು ಕದಡಿಲ್ಲ(ಕಲಕಿಲ್ಲ) ಅಥವಾ ಕಣ್ಣು ತೆರೆಸಿಲ್ಲ ಎನಿಸಿ ಬಿಡುತ್ತದೆ (ಒಳ್ಳೆಯ ಮಾರ್ಗದಲ್ಲಿ ನಡೆಯಲು ಮನಸ್ಸು ಮಾಡಿಲ್ಲ). ಏಕೆ ಈ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ ಎಂದರೆ ಜೀವನ ಎಂಬುದು ನೀರ ಮೇಲೆ ಕಾಲು ಚಾಚಿ ನಿಂತಿರುವ ಗುಳ್ಳೆಯಂತೆ ಯಾವ ಕ್ಷಣದಲ್ಲಿ "ಪಟ್" ಎಂದು ಗುಳ್ಳೆ ಒಡೆದು ಹೋಗುತ್ತದೆ, ಪ್ರಾಣ ಪಕ್ಷಿ ಹಾರಿ ಹೋಗುತ್ತದೆ ಎಂದು ಊಹಿಸಲು ಸಾಧ್ಯವಾಗದ ಹಾಗೆ ದುರಂತದ ಸಾಕ್ಷಿಗಳಾಗಿ (ಸಜ್ಜನರ ಸಾವು, ಚಿಕ್ಕ ವಯಸ್ಸಿನಲ್ಲಿಯೇ ಅಮೋಘ ಸಾಧನೆ ಮಾಡಿ ಮನುಷ್ಯರಾಗಿ ಹುಟ್ಟಿ ವಿಧಿಯ ಕೆಂಗಣ್ಣಿಗೆ ಗುರಿಯಾಗಿ ದೈವತ್ವದಲ್ಲಿ ಬದುಕಿರುವ ಮಹಾತ್ಮರು) ನಡೆದು ಹೋಗುತ್ತಿವೆ. ಕೆಲವರು ಬದುಕಿದ್ದು ಮಡಿದಂತೆ ಇರುತ್ತಾರೆ, ಮತ್ತೆ ಕೆಲವರು ಮಡಿದರು ಮಡಿಯಿಂದ ಹೃದಯದಲ್ಲಿ ಬದುಕಿರುತ್ತಾರೆ. ಸಾವು ಕಂಡಾಗ ನಶ್ವರತೆಯ ನೀತಿ ಪಾಠ ಹೇಳುವ ಮನುಷ್ಯ ಮರೆಯಾದಾಗ ಮತ್ತೆ ಬದುಕಿಗೆ ಅಂಟಿಕೊಂಡು ಎಲ್ಲವೂ ನಾನೇ, ನನ್ನಿಂದಲೇ ಲೋಕ ಸಾಕಾರವಾಗುತ್ತಿದೆ. ಜಗತ್ತು ಬದುಕಿರುವುದೇ ತನ್ನಿಂದ ಎಂದು ಹೇಳುವ ಮನುಷ್ಯ, ಈ ನಡೆಯನ್ನು ಸ್ಮಶಾನ ವೈರಾಗ್ಯ ಎಂದೇ ಹೇಳಬೇಕು. ಹುಟ್ಟಿದಾಗ ಏನನ್ನು ಹೊತ್ತು ತರದ ಮನುಷ್ಯ ಸಾಯುವಾಗಲೂ ಏನನ್ನು ಹೊತ್ತು ಸಾಗುವುದಿಲ್ಲ. ಈ ನಡುವೆ ಎರಡು ದಿನದ ಬದುಕಿಗೆ ಕಿತ್ತಾಟ, ಹೋರಾಟ, ಹಾರಾಟ, ಚೀರಾಟದಲ್ಲಿಯೇ ಮಗ್ನನಾಗಿ ಗಲಭೆ ಎಬ್ಬಿಸಿ ಶಾಂತಿಯ ತೋಟದಲ್ಲಿ ಅಶಾಂತಿಯ ಬೆಳೆಯನ್ನು ಬೆಳೆಯುವುದು ಎಷ್ಟು ಸರಿ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

ಜೀವನದಲ್ಲಿ ದೇವರು ಎಲ್ಲವನ್ನು ಕೊಟ್ಟಿದ್ದರು ಖುಷಿಯಾಗಿರುವುದರ ಬದಲು ವಿನಾಕಾರಣ ಕಣಿತೆಗೆದು ನಾವು 'ಅದು ಬೇಕಿತ್ತು ಇದು ಬೇಕಿತ್ತು' ಎಂದು ಒದ್ದಾಡುತ್ತೇವೆ. ಇಲ್ಲಿ ಹೇಳಹೊರಟಿರುವ ನಿದರ್ಶನ ನಮ್ಮ ಬಾಳಿಗೆ ಬೆಳಕಿನ ಪನ್ನೀರ ಧಾರೆ ಎರೆಯಬಹುದು. ಒಂದು ರಾಜ್ಯ ಅಲ್ಲೊಬ್ಬ ರಾಜ. ಭಗವಂತ ಈ ರಾಜನಿಗೆ ಸಕಲೆಂಟು ಸಂಪತ್ತು, ಭವ್ಯ ಅರಮನೆ ಆಳು–ಕಾಳು, ಮುದ್ದಾದ ಹೆಂಡತಿ, ಚೆಲುವಾದ ಮಕ್ಕಳನ್ನು ಕೊಟ್ಟಿದ್ದ. ಅಂತೆಯೇ ರಾಜ್ಯದ ಜನತೆಯು ಸುಭೀಕ್ಷೆಯಿಂದ ಬದುಕಿದ್ದರೂ, ಆತನದು ಒಂದೇ ಗೊಣಗಾಟ–ಬೇಜಾರು ನನಗೆ ನೆಮ್ಮದಿ ಇಲ್ಲ, ಸಂತೋಷ ಇಲ್ಲ, ಖುಷಿಯಂತೂ

ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಉಪನ್ಯಾಸಕರು
ಹಾಗೂ ಹವ್ಯಾಸಿ ಬರಹಗಾರ
ಮೊ. 7795862281

ಇಲ್ಲವೇ ಇಲ್ಲ ಎಂದು. ಒಮ್ಮೆ ತನ್ನ ತೋಟದ ಅಂಚಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ನೋಡಿದ. ಆತನೋ ತುಂಬಾ ಖುಷಿಯಿಂದ ಗಾಯನ ಹಾಡುತ್ತಾ, ಬದುಕಿನ ಹಾಡು ಹಾಡುತ್ತಾ ತನ್ನ ಕಾಯಕದಲ್ಲಿ ನಿರತನಾಗಿದ್ದ. 'ಇಂತಹ ಖುಷಿ ಮನುಷ್ಯನನ್ನು ಎಲ್ಲಿಯೂ ನೋಡಿಯೇ ಇಲ್ಲ' ಎಂದು ಬಗೆದು ಆ ವ್ಯಕ್ತಿಯ ಹತ್ತಿರ ಬಂದು 'ಏನಪ್ಪಾ ಇಷ್ಟೊಂದು ಖುಷಿಯಾಗಿ, ಸಂತೋಷವಾಗಿ ಅದೂ ಹಾಡ್ತಾ ಕೆಲಸ ಮಾಡ್ತಾ ಇದ್ದಿಯಲ್ಲ, ನಿನಗೆ ಯಾವುದು ತೊಂದರೆ–ತಾಪತ್ರಯ, ಏನು ಇಲ್ವಾ? ಇಷ್ಟು ಖುಷಿಯಿಂದ ಇರಲು ಏನು ಕಾರಣ, ಏನಿದೆ ಈ ಬದುಕಲ್ಲಿ, ಇದರ ಒಳಗುಟ್ಟೇನು ಎಂದು ಕೇಳುತ್ತಾನೆ. ಅದಕ್ಕೆ ಆತ ಹೇಳುತ್ತಾನೆ ಮಹಾರಾಜರೇ, ನಿಮ್ಮಷ್ಟು ಶ್ರೀಮಂತಿಕೆ ಇಲ್ಲದೆ ಇರಬಹುದು. ಭೌತಿಕ ವಸ್ತುಗಳು ನಿಮ್ಮಲ್ಲಿ ಸಾಕಷ್ಟು ಹೇರಳವಾಗಿಯೇ ಇರಬಹುದು ಆದರೆ ಅಂತಹ ಭಾಗ್ಯ ನನಗೆ ಇಲ್ಲ. ಆದರೆ ಅದಕ್ಕಾಗಿ ನಾನು ಕೊರಗುವುದಿಲ್ಲ, ನನ್ನೊಳಗೆ ಹೃದಯ ಶ್ರೀಮಂತಿಕೆ ಅನಂತವಾಗಿದೆ. ಅಂತಹ ಬತ್ತಲಾರದ ಗಂಗೆ–ತುಂಗೆ ಇರುವಾಗ ಬಡತನ ಎಂದೂ ನನ್ನನ್ನು ಬಾಧಿಸಿಲ್ಲ. ಇದರಿಂದ ನನ್ನ ಜೀವನಕ್ಕೆ ಏನೇನು ಅವಶ್ಯಕತೆ ಇದೆಯೋ ಅದು ಇದರಿಂದ ಸಾಧ್ಯವಾಗಿದೆ. ಇರೋದಕ್ಕೆ ಅಂದರೆ ಆಶ್ರಯಕ್ಕೆ ಒಂದು ಮನೆ ಬೇಕು, ಅದು ಇದೆ. ಹಸಿವು ಬಾಧಿಸಿದಾಗ ಮೂರು ಹೊತ್ತು ಊಟಬೇಕು. ಅದೂ ಇದೆ. ಬೇಜಾರಾಗೋದಕ್ಕೆ ಏನು ಕಾರಣ ಇಲ್ಲವಲ್ಲ ಎಂದ.

ಒಮ್ಮೆ ರಾಜ ಯೋಚಿಸಿದ; ಇವನು ಹೇಳುವುದರಲ್ಲಿ ಅರ್ಥ ಇದೆ. ಆದರೆ ಇಷ್ಟು ಖುಷಿಯಾಗಿ ಇರಲಿಕ್ಕೆ ಹೇಗೆ ಸಾಧ್ಯ. ಏನಾದ್ರು ಸಮಸ್ಯೆ ಇದ್ದೇ ಇರುತ್ತದೆ. ನಾನೇಕೆ ಇಷ್ಟು ದುಃಖಿ, ನಾನೇಕೆ ಸುಖಿಯಾಗಿಲ್ಲ ಎಂದು ತನ್ನನ್ನು ತಾನೇ ಪ್ರಶ್ನೆ ಮಾಡಿಕೊಂಡು ತನ್ನ ರಾಜ್ಯದಲ್ಲಿನ ಸಕಲೆಂಟು ವಿದ್ಯೆಗಳಲ್ಲು ಪಾರಾಂಗತರಾದ ಪಂಡಿತರು, ಚಾಣಾಕ್ಷತನದ ಮಂತ್ರಿಗಳನ್ನು ಖುದ್ದು ಭೇಟಿ ಮಾಡಿ, ತನ್ನ ತಾಪತ್ರಯದ ಗೋಳನ್ನು ಹೇಳಿದನು. ಅವರಲ್ಲಿ ಅತೀ ಶ್ರೇಷ್ಠರೆನಿಸಿದ ಮಂತ್ರಿಗಳಲ್ಲಿ ಒಬ್ಬರು ರಾಜನ ನೋವನ್ನು ಅರ್ಥ ಮಾಡಿಕೊಂಡು ರಾಜ, ಆ ವ್ಯಕ್ತಿ ಇನ್ನೂ 99ರ ಗುಂಪಿಗೆ ಸೇರಿಲ್ಲ ಎಂದಾಗ ರಾಜನಿಗೆ ಅರ್ಥವಾಗದೆ ಈ 99ರ ಗುಂಪು ಎಂದರೆ ಏನು ಎಂದು ಅರ್ಥವಾಗುವಂತೆ ಹೇಳಿ ಇದರಲ್ಲಿ ಯಾರು ಯಾರು ಇದ್ದಾರೆ ಎಂದು ಮರು ಪ್ರಶ್ನೆ ಕೇಳಿದಾಗ ಮಂತ್ರಿಗಳು ಅರ್ಥವಾಗುವಂತೆ ಈ ರೀತಿಯಲ್ಲಿ ವಿವರಿಸುತ್ತಾರೆ.

ಈ ಕೆಲ್ಸದೋನು ತನ್ನ ನೆಮ್ಮದಿಯನ್ನು ಕಳೆದುಕೊಳ್ಳುವ ಒಂದು ಉಪಾಯ ನಮ್ಮಲ್ಲಿ ಇದ್ದೇ ಇದೆ. ಒಂದು ಚೀಲದಲ್ಲಿ 99 ಬಂಗಾರದ ನಾಣ್ಯಗಳಿರುವ ಒಂದು ಗಂಟನ್ನು ಒಂದು ಮುಂಜಾನೆ ಯಾರೂ ಇಲ್ಲದ ಸಮಯದಲ್ಲಿ ಅವನ ಮನೆಯ ಮುಂದೆ ಇರಿಸುವಂತೆ ಮಾಡುತ್ತಾರೆ. ಆತ ಬೆಳಗ್ಗೆ ಎದ್ದು ಆ ಗಂಟನ್ನು ಬಿಚ್ಚಿ ಅದರಲ್ಲಿರುವ ಬಂಗಾರದ ನಾಣ್ಯವನ್ನು ಕಾಣುತ್ತಾನೆ. ಆ ಬಂಗಾರ ಆತನ ಬಂಗಾರದಂತಹ ಮನಸ್ಸನ್ನು ಕದಡುತ್ತದೆ. ಇದುವರೆಗೂ ನೆಮ್ಮದಿಯ ನೆಲೆಯಲ್ಲಿ ಜೀವದ ಸೆಲೆಯನ್ನು ಸಮೃದ್ಧಗೊಳಿಸಿಕೊಂಡಿದ್ದ ಆತ ತಾನು ಏನೂ ಇಲ್ಲದೆ ಇರುವಾಗ ಸುಖಿಯಾಗಿದ್ದೆ ಎಂಬುದನ್ನು ಮರೆತು, ಆ ಬಂಗಾರದ ನಾಣ್ಯಗಳನ್ನು ಎಣಿಸುವ ಕಾರ್ಯದಲ್ಲಿ ಮುಳುಗಿದ. ಆತ ಎಷ್ಟು ಬಾರಿ ಎಣಿಸಿದರೂ ಪ್ರತಿ ಬಾರಿಯು 99 ನಾಣ್ಯಗಳು ಲೆಕ್ಕಕ್ಕೆ ಸಿಕ್ಕುತ್ತಿದ್ದವು. ಇದು ಇಡೀ ದಿನ ಸಾಗಿ ತಿಂಡಿ, ಊಟ, ನಿದಿರೆ, ಬಾಂಧವ್ಯದ ಮಾತುಗಳು, ನೆಮ್ಮದಿಯನ್ನು ಇನ್ನಿಲ್ಲದಂತೆ ಕೊಂದು ಬಿಟ್ಟಿತು. ಆ ವ್ಯಕ್ತಿ ರಾಜನೊಂದಿಗೆ ಆಡಿದ ಮಾತುಗಳು ಮರೆಯಾದವು. ಏಕೆಂದರೆ ಆತ ಎಣಿಸುವುದರಲ್ಲೇ ಉಳಿದ ಜೀವನವನ್ನು ಕಳೆಯಲು ಮೀಸಲಾಗಿರಿಸಿದ. ಈಗ ರಾಜನಿಗೆ ಅರ್ಥವಾಯಿತು. ನಾವು ಏನೂ ಇಲ್ಲದಿರುವಾಗ ನೆಮ್ಮದಿ–ಸೌಖ್ಯದಲ್ಲಿರುತ್ತೇವೆ. ಭೌತಿಕ ವಸ್ತು, ಸಂಪತ್ತಿನ ಆಶಾಗೋಪುರದಲ್ಲಿ ಸಿಲುಕಿ ಬದುಕಿನ ಬಾಂಧವ್ಯವನ್ನು ಬರ್ಬರ ಹತ್ಯೆಗೆ ಒಳಗು ಮಾಡಿಕೊಂಡು ಬಿಟ್ಟಿರುತ್ತೇವೆ.

ಹಕ್ಕಿಗಳ ಹಸಿವು ನೀಗಿಸಲು ನಾಲ್ಕಾರು ಕಾಳುಗಳು ಸಾಕು. ಆದರೆ ಮನುಷ್ಯನ ಹಸಿವು ನೀಗಿಸಲು ಹತ್ತಾರು ಖಜಾನೆಯಾದರೂ ಬೇಕು. ಈ ಧೋರಣೆಯನ್ನು ಬಿಟ್ಟು ಹಕ್ಕಿಯಂತೆ ಆಗಬೇಕು, ಹಕ್ಕಿಯಂತೆ ಹಾರಬೇಕು. ಈ ಜೀವನದಲ್ಲಿ ನೆಮ್ಮದಿಗಿಂತ ಮತ್ಯಾವುದೇ ಸಂಪಾದನೆ ಇಲ್ಲ, ನೆಲೆಯೂರಿರುವ ಎರಡು ಪಾದದಷ್ಟಾದರೂ ನೆಮ್ಮದಿ ಇದ್ದರೆ ಜೀವನವಿದು ಬಲು ಸೌಖ್ಯ. ನೆಮ್ಮದಿ ಎಂದಿಗೂ ಹುಡುಕುವ, ಅರಸುತ್ತಾ ಸಾಗಿ ಗಳಿಸುವ ವಸ್ತುವಲ್ಲ ಬದಲಿಗೆ ಅದು ತಾನಾಗಿಯೇ ಇರುವ, ಕೇವಲ ಅನುಭವಜನ್ಯವಾದ ಮನಸ್ಥಿತಿಯ ಅಂತಸ್ತು.



ವಾರಭವಿಷ್ಯ

2.7.2023 ರಿಂದ 8.7.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ–ಸಿಂಹ, ಬುಧ, ಮಿಥುನ, ಗುರು–ಮೇಷ, ಶುಕ್ರ–ಕಟಕ, ಸಿಂಹ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭ ಒತ್ತಡಭರಿತವಾಗಿರುತ್ತದೆ. ಧನಾತ್ಮಕವಾಗಿ ಚಿಂತಿಸಿ ಪರಿಹಾರದ ಮಾರ್ಗ ತೆರೆದುಕೊಳ್ಳುತ್ತದೆ. ಹಾಗೂ ಪೂರ್ವ ತಯಾರಿ ಇಲ್ಲದೆ ಯಾವ ಕೆಲಸವನ್ನೂ ಮಾಡದಿರಿ. ಲಾಡ್ಜ್ ಹಾಗೂ ಹೋಟೆಲ್ ಉದ್ಯಮದವರಿಗೆ ಹೇರಳ ಧನಲಾಭವಾಗುವುದು. ಬೃಹತ್ ಉದ್ಯಮದಾರರಿಗೆ ಉತ್ಪಾದನೆಯಲ್ಲಿ ಹೆಚ್ಚಳವಾಗುವುದು. ಕೋಪ, ದುಡುಕು ಮಾತಿನಿಂದ ಕಾರ್ಯಗೇಡು.

ಶ್ರೀನೃಸಿಂಹ ದರ್ಶನ. ಶುಭ ಸಂಖ್ಯೆ–2.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ಸಪ್ತಾಹದಲ್ಲಿ ಹೊಸ ಬಂಡವಾಳ ಹೂಡಲು, ಮನೆ, ನಿವೇಶನ ಕೊಳ್ಳಲು ಗುರುಗ್ರಹದ ಅನುಗ್ರಹವಿದೆ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನಿರೀಕ್ಷಿಸಬಹುದು. ಸರ್ಕಾರಿ ಕಚೇರಿ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಳ್ಳುವಿರಿ. ತಮ್ಮ ಕೆಲಸವಾದ ಮೇಲೆ ಕೈ ಕೊಡುವ ಸ್ನೇಹಿತರಿಂದ ದೂರವಿರಿ. ಕೃಷಿಕರಿಗೆ ನಿರೀಕ್ಷಿತ ಫಸಲಾಗಲೀ, ಬೆಲೆಯಾಗಲೀ ದೊರೆಯದೆ ನಿರಾಶೆಯಾಗುವುದು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–5.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಚಂದ್ರಬಲ ಉತ್ತಮವಾಗಿದ್ದು, ಮನೋಇಚ್ಛಿತ ಕಾರ್ಯಗಳು ಸುಲಲಿತವಾಗಿ ನಡೆಯುವುದು. ಎಲೆಕ್ಟ್ರಾನಿಕ್ ಹಾಗೂ ಕಂಪ್ಯೂಟರ್ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರದಿಂದ ಧನಲಾಭ. ಷೇರು ವ್ಯವಹಾರಗಳನ್ನು ಜಾಗೃತೆಯಿಂದ ಮಾಡಿ. ಅನ್ಯಥಾ ನಷ್ಟವನ್ನು ಅನುಭವಿಸುವಿರಿ. ವೈದ್ಯಕೀಯ ಖರ್ಚುಗಳು ಹೆಚ್ಚಾಗಬಹುದು. ವಯಸ್ಸಿಗೆ ಬಂದ ಮಕ್ಕಳ ಚಲನ–ವಲನದ ಮೇಲೆ ನಿಗಾ ಇದೆ.

ಶ್ರೀ ದೇವೀಸ್ತುತಿ. ಶುಭ ಸಂಖ್ಯೆ–6.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಾರದಾರಂಭಕ್ಕೆ ಹಣಕಾಸಿನ ವ್ಯವಹಾರಗಳು ಉತ್ತೇಜನಕಾರಿಯಾಗಿ ಇರದು. ಕೈ ತುಂಬಾ ಹಣ ಬಂದರೂ ತುಂಬಾ ಹೊತ್ತು ನಿಲ್ಲದು. ಮಾತೃಶ್ರೀಯವರ ಸಹಕಾರದಿಂದ ಸಮಸ್ಯೆಯ ಸುಳಿಯಿಂದ ಹೊರ ಬರುವಿರಿ. ವಾರದ ಉತ್ತರಾರ್ಧಕ್ಕೆ ಹೊಸ ವ್ಯಕ್ತಿಗಳ ಪರಿಚಯ, ನಿಮ್ಮ ಗುಪ್ತ ವಿಚಾರಗಳನ್ನು ಹಂಚಿಕೊಳ್ಳದಿರಿ. ಸಣ್ಣ ಆರೋಗ್ಯ ಸಮಸ್ಯೆಗಳಿರುತ್ತವೆ. ವಾಹನ ನಿಧಾನವಾಗಿ ಡ್ರೈವ್ ಮಾಡಿ ತೊಂದರೆಯಿಂದ ಬಚಾವಾಗಿ.

ಶ್ರೀ ಸುಬ್ರಹ್ಮಣ್ಯ ಸ್ತುತಿ. ಶುಭ ಸಂಖ್ಯೆ–2.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಪ್ರಾರಂಭಕ್ಕೆ ವ್ಯಾಪಾರ ವ್ಯವಹಾರಗಳು ಚುರುಕಾಗಿ ನಡೆದು ಹಣದ ಹರಿವು ಉತ್ತಮವಾಗಿರುತ್ತದೆ. ಕುಟುಂಬ ಸದಸ್ಯರಲ್ಲಿನ ಮನಸ್ತಾಪಗಳು ನಿವಾರಣೆ ಆಗುವುದು. ಸರ್ಕಾರಿ ನೌಕರರಿಗೆ ಬಡ್ತಿಯೂ, ವರ್ಗಾವಣೆಯೂ ಸಂಭವಿಸುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆ ಬರಲಿದೆ. ಆಷಾಢಮಾಸದ ನಂತರ ವಿವಾಹ ಮಾತುಕತೆಗಳು ಫಲಪ್ರದವೆನಿಸಲಿದೆ. ಪ್ರಯಾಣಗಳಿಂದ ದೇಹಾಯಾಸ.

ಶ್ರೀ ವಿಷ್ಣು ಉಪಾಸನೆ. ಶುಭ ಸಂಖ್ಯೆ–4.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಚಂದ್ರಗ್ರಹ ಸಂಚಾರ ನಿಮ್ಮ ನೆರವಿಗೆ ಇದೆ. ಮನೆಯಲ್ಲಿನ ಭಿನ್ನಾಭಿಪ್ರಾಯಗಳು ನಿವಾರಣೆ ಆಗಲಿದೆ. ಚಾಕಚಕ್ಯತೆಯಿಂದ ವೈಯಕ್ತಿಕ ಕೆಲಸ ಕಾರ್ಯಗಳನ್ನು ಸಿದ್ಧಿಸಿಕೊಳ್ಳುವಿರಿ, ಇದಕ್ಕೆ ಕುಟುಂಬ ಸದಸ್ಯರ ಸಹಾಯಹಸ್ತ ದೊರೆಯಲಿದೆ. ಗುರುಬಲವೂ ಇದ್ದು ನಿಂತು ಹೋಗಿದ್ದ ಕೆಲಸಗಳು ಮರು ಚಾಲನೆ ಹೊಂದುವುದು, ವಾರಾಂತ್ಯಕ್ಕೆ ಹಿತಕರವಾದ ಸುದ್ದಿಯೊಂದು ಬರುವುದು.

ಮನೆದೇವರ ದರ್ಶನ ಮಾಡಿ. ಶುಭ ಸಂಖ್ಯೆ–1.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಸಮಸ್ಯೆಗಳು ಬಂದಾಗ ಹಿರಿಯರ ಸಲಹೆ, ಸೂಚನೆಗಳನ್ನು ಪಡೆಯುವುದು ಜಾಣತನ. ನೀವು ಎಷ್ಟೇ ನೀತಿವಂತರಾದರೂ ಅಷ್ಟಮ ಶನಿದೇವನ ಕಾಟವನ್ನು ಇನ್ನಷ್ಟು ದಿನ ಪಡೆದುಕೊಳ್ಳಲೇಬೇಕು. ನೂತನ ಆವಿಷ್ಕಾರಗಳ ಸಾಧನೆಯಿಂದ ಮನಸ್ಸಿಗೆ ತೃಪ್ತಿ. ಹಿತ್ತಾಳೆ, ತಾಮ್ರ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಧನಾದಾಯದಲ್ಲಿ ಹೆಚ್ಚಳ. ಮನಸ್ಸಿನ ದುಗುಡ ಕಳೆಯಲು ಮನೆ ಮಂದಿಯೊಂದಿಗೆ ಹೆಚ್ಚಿನ ಸಮಯ ಕಳೆಯಿರಿ.

ಶ್ರೀಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–9.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಹೊಸ ವ್ಯಾಪಾರ ವ್ಯವಹಾರಗಳ ಪ್ರಾರಂಭವನ್ನು ಮುಂದೂಡುವುದು ಒಳಿತು. ಸಾಲ ಪತ್ರ ಹಾಗೂ ಜಾಮೀನು ಪತ್ರಗಳಿಗೆ ಸಹಿ ಹಾಕುವಾಗ ವಕೀಲರ ಸಲಹೆ ಪಡೆಯಿರಿ. ಗೋವು ಪಾಲಕರಿಗೆ, ಕ್ಷೀರೋತ್ಪನ್ನ ವಸ್ತು ಮಾರಾಟಗಾರರಿಗೆ ಉತ್ತಮ ಲಾಭ ದೊರೆಯಲಿದೆ. ಬೇಡದ ವಿಷಯಗಳಿಗೆ ಹಣ ಪೋಲಾಗುವುದು. ಸಮಾಜಘಾತುಕ ಶಕ್ತಿಗಳಿಂದ ದೂರವಿರಿ, ಅನ್ಯಥಾ ಕಷ್ಟಕ್ಕೆ ಸಿಲುಕುವಿರಿ. ವಾರದ ಕಡೆಗೆ ಶುಭ ಸುದ್ದಿ ಬರುವುದು.


ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ–4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಪೂರ್ವಾರ್ಧಕ್ಕೆ ಉತ್ಸಾಹ, ಸಂತೋಷಗಳು ನಿಮ್ಮನ್ನು ಅರಸಿ ಬರುವುದು. ನಿಮ್ಮ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಳ್ಳುವಿರಿ. ಫಲಿತಾಂಶ ನಿರೀಕ್ಷಣೆಯಲ್ಲಿರುವ ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಯಶಸ್ಸು ದೊರೆಯಲಿದೆ. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಂಭವವಿದೆ. ನಿವೇಶನ, ಗೃಹ ಹೊಂದಲು ಗುರುಕೃಪೆ ಇದೆ. ಪ್ರಯತ್ನ ನಿಮ್ಮದು. ಉಷ್ಣ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಇಂದ್ರ ಗಾಯತ್ರಿ ಪಠಿಸಿ. ಶುಭ ಸಂಖ್ಯೆ–3.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ಶುಭ ಚಂದ್ರನ ಕಾರಣ ವಿವಿಧ ಮೂಲಗಳಿಂದ ಹಣ ಕೈಸೇರಿದರೂ, ಜೇಬು ಮಾತ್ರ ಖಾಲಿ. ಕೆಲವೊಮ್ಮೆ ಸಾಲ ಮಾಡಬೇಕಾದ ಪರಿಸ್ಥಿತಿ. ಮಿತ್ರರ ಸಹಾಯಹಸ್ತ ದೊರೆಯುವುದು. ವಾರಾಂತ್ಯಕ್ಕೆ ಇಷ್ಟಾರ್ಥಗಳ ಪೂರೈಕೆ ಆದರೂ ಮನಸ್ಸಿಗೆ ದುಗುಡತೆ ಆವರಿಸಿರುತ್ತೆ. ನೌಕರಿ ಸ್ಥಳದಲ್ಲಿ ಕಿರಿಕಿರಿ ಎದುರಿಸಬೇಕಾದೀತು. ಯಾರನ್ನೂ ಎದುರು ಹಾಕಿಕೊಳ್ಳಬೇಡಿ. ಸಂಚಾರ ನಿಯಮ ಪಾಲಿಸಿ, ದಂಡ ತಪ್ಪಿಸಿಕೊಳ್ಳಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–4.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಗುರಿ ಸಾಧಿಸಲು ಗುರು ಬೇಕು. ಆದರೆ ಸದ್ಯಕ್ಕೆ ನಿಮಗೆ ಅದರ ಕೊರತೆ ಕಾಡುತ್ತಿದೆ. ಆರೋಗ್ಯದ ಕಡೆ ಹೆಚ್ಚು ಗಮನ ನೀಡಿ. ಸಾಂಸಾರಿಕವಾಗಿ ಸ್ವಲ್ಪ ಕಿರಿಕಿರಿಗಳು ಉಂಟಾದರೆ ಸಮಾಧಾನ ಚಿತ್ತದಿಂದ ಪರಿಹರಿಸಿಕೊಳ್ಳಿ. ವಾರದ ಉತ್ತರಾರ್ಧಕ್ಕೆ ನಿಮ್ಮ ಕೆಲಸಕ್ಕೆ ಸರಿಯಾದ ಪ್ರತಿಫಲ ದೊರೆಯುವುದು. ಇಷ್ಟ ಬಂಧುಮಿತ್ರರ ಸಮಾಗಮದಿಂದ ಹರ್ಷಚಿತ್ತರಾಗಿರುವಿರಿ. ವಾರದ ಕಡೆಗೆ ಜೀವನ ಶೈಲಿಯಲ್ಲಿ ಬದಲಾವಣೆ ಕಂಡುಬರುವುದು.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–8.




ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ದ್ವಿತೀಯದಲ್ಲಿರುವ ಗುರುದೇವ, ನಿಮಗೆ ಶ್ರೀರಕ್ಷೆ ನೀಡಲಿದ್ದಾರೆ. ನಿಮ್ಮ ಜಾಣ್ಮೆ ಹಾಗೂ ನಿಪುಣತೆಯಿಂದ ಸಕಲ ಕೆಲಸಗಳು ಸುಸೂತ್ರವಾಗಿ ನಡೆಯುವುದು. ಮನೆಗೆ ಅತಿಥಿ ಅಭ್ಯಾಗತರ ಆಗಮನದಿಂದ ಹಬ್ಬದ ವಾತಾವರಣ, ಧಾರಾಳ ಹಣವೂ ವ್ಯಯವಾಗುವುದು. ಹಿಡಿದ ಕೆಲಸ ಪೂರ್ಣವಾಗಲು ಗುರುಜನರು ಮಾರ್ಗದರ್ಶನ ಮಾಡುವರು. ಡ್ರೈವಿಂಗ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬುದು ನೆನಪಿರಲಿ. ಶ್ರೀ ರಾಘವೇಂದ್ರ ಉಪಾಸನೆ. ಶುಭ ಸಂಖ್ಯೆ–7.

ಮಕ್ಕಳ ಚಿತ್ರಕಥೆ

ಹಿತೈಷಿಯೊಬ್ಬರು ಹೇಳಿದ್ದು ಹೀಗೆ...!

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ವಿದ್ಯುತ್ ದರ ಏರಿಕೆಯಿಂದ ಅಕ್ಕಿ ಗಿರಣಿದಾರರ ಉದ್ಯಮಕ್ಕೆ ಹೊಡೆತ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಹಶೀಲ್ದಾರ್‌ಗೆ ತಿ.ನರಸೀಪುರ ಅಕ್ಕಿ ಗಿರಣಿದಾರರು ಮನವಿ

ತಿ.ನರಸೀಪುರ, ಜು.1– ತಿ.ನರಸೀಪುರ ತಾಲೂಕು ಅಕ್ಕಿ ಗಿರಣಿದಾರರು ವಿದ್ಯುತ್ ದರ ಹೆಚ್ಚಳದಿಂದ ಅಕ್ಕಿ ಗಿರಣಿ ಉದ್ಯಮಕ್ಕೆ ಹೊಡೆತ ಬೀಳುತ್ತಿದ್ದು, ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು ಎಂಬ ಬೇಡಿಕೆಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಶನಿವಾರ ತಹಶೀಲ್ದಾರ್ ಸಿ. ಜಿ. ಗೀತಾ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.



ವಿದ್ಯುತ್ ದರ ಹೆಚ್ಚಳದಿಂದ ಅಕ್ಕಿ ಗಿರಣಿದಾರರಿಗೆ ಆರ್ಥಿಕ ಹೊರೆ ಹೆಚ್ಚಾಗಿದೆ ಹಾಗೂ ಉದ್ಯಮಕ್ಕೆ ಭಾರೀ ಹೊಡೆತ ಬೀಳಲಿದೆ. ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಹಿಂದಿನ ರೀತಿಯಲ್ಲಿಯೇ ತಿದ್ದುಪಡಿ ಮಾಡಲು ಹೊರಟಿರುವ ಸರ್ಕಾರದ ನಿರ್ಧಾರದಿಂದ ಗಿರಣಿದಾರರು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಕಷ್ಟವಾಗಿ, ಉದ್ಯಮ ಬಹಳ ತೊಂದರೆಗೆ ಸಿಲುಕಲಿದೆ ಎಂದು ಮೈಸೂರು ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘದ ತಿ. ನರಸೀಪುರ ತಾಲೂಕು ಘಟಕವು ತಿಳಿಸಿದೆ.

ಗಿರಣಿದಾರರು ಕೃಷಿ ಮಾರುಕಟ್ಟೆಯ ಸೌಲಭ್ಯದ ಬಳಕೆ ಇಲ್ಲದ ಕಾರಣ ಗಿರಣಿದಾರರನ್ನು ಸದರಿ ಕಾಯ್ದೆಯಿಂದ ಹೊರತು ಪಡಿಸುವಂತೆ ಹಾಗೂ ಕಾಯ್ದೆಯ ಉದ್ದೇಶಗಳ ಬಗ್ಗೆ ಚರ್ಚಿಸಲು ಅವಕಾಶ ನೀಡಬೇಕು. ಗಿರಣಿದಾರರ ಹಿತಾಸಕ್ತಿ ಕಾಪಾಡುವ ದೃಷ್ಟಿಯಲ್ಲಿ ಗಿರಣಿದಾರರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಒತ್ತು ನೀಡುವಂತೆ ಅವರು ಮನವಿ ಮಾಡಿದರು.

ಕೆಇಆರ್‌ಸಿಯವರು ಕೈಗಾರಿಕೆಗಳಿಗೆ ಫಿಕ್ಸೆಡ್ ಶುಲ್ಕವನ್ನು 240 ರೂ.ನಿಂದ 350 ರೂ .ಗಳಿಗೆ ಏರಿಕೆ ಮಾಡಿದ್ದಾರೆ. ಹಾಗೂ ರಿಕವರಿ ಚಾರ್ಜಸ್ ಸಹ 50 ಪೈಸೆಯಿಂದ 2.50 ರೂ.ಗಳಿಗೆ ಏರಿಸಿರುವುದರಿಂದ ರೈಸ್ ಮಿಲ್ ಮಾಲೀಕರ ಮೇಲೆ ಪ್ರತಿ ತಿಂಗಳು 60 ರಿಂದ 70 ಸಾವಿರ ರೂ.ಗಳ ಹೊರೆ ಬೀಳುತ್ತಿದೆ.ಇದರಿಂದ ಉದ್ಯಮ ಕುಂಠಿತಗೊಳ್ಳುತ್ತಿದೆ ಎಂದರು. ಹಲ್ಲಿಂಗ್ ಮತ್ತು ಸಾಗಾಣಿಕೆ ವೆಚ್ಚವನ್ನು ಸಹ ನಮಗೆ ನೀಡಲಾಗಿಲ್ಲ. ಈ ವೆಚ್ಚವೇ ಅಧಿಕ ಪ್ರಮಾಣದಲ್ಲಿ ಬಾಕಿ ಇದ್ದು ಕೊಡಿಸಿ ಕೊಡುವಂತೆ ಅವರು ಮನವಿ ಮಾಡಿದರು.

ಜಿಲ್ಲಾ ಅಕ್ಕಿ ಗಿರಣಿದಾರರ ಸಂಘದ ಅಧ್ಯಕ್ಷ ಬಸವನಹಳ್ಳಿ ಬಸವರಾಜು, ಶಂಭುದೇವನಪುರ ಸುಗಂಧರಾಜು, ಮೂಗೂರು ಮಹೇಶ್, ಕನಕ ಸುರೇಶ್, ಯಾಚೇನಹಳ್ಳಿ ರಮೇಶ್, ದೇವೇಂದ್ರ ಗುಪ್ತ, ಸಮೀವುಲ್ಲಾ ಖಾನ್,ಸಲ್ಮಾನ್ ಖಾನ್, ಸುಧಾಕರ್, ಅನಿಲ್, ಸುನಿಲ್, ಸಲ್ಮಾನ್‌ಖಾನ್, ಮಂಜುನಾಥ್, ಬಿ.ಟಿ.ಮಹದೇವು, ಉಡದೊರೆ ರವೀಂದ್ರನಾಥ್, ಮಂಜುನಾಥ್, ಸಿದ್ದರಾಜು, ಅನೂಪ್, ಬಸವರಾಜು ಸೇರಿದಂತೆ ಅನೇಕರು ಹಾಜರಿದ್ದರು.

> ರಾಜ್ಯದಲ್ಲಿ ಬೆಳೆಯುವ ಭತ್ತದ ಜೊತೆಗೆ ಹೊರರಾಜ್ಯದ ಭತ್ತವನ್ನು ಸರ್ಕಾರವೇ ಎಂಎಸ್‌ಪಿ ದರದಲ್ಲಿ ಖರೀದಿಸಿ ರಾಜ್ಯದ ಗಿರಣಿಗಳಲ್ಲಿ ಸಂಸ್ಕರಿಸಲು ಸಿಎಂಆರ್ ಮಿಲ್ ಪಾಯಿಂಟ್ ಪ್ರಕ್ರಿಯೆಯನ್ನು ಮುಂದುವರಿಸಿದಲ್ಲಿ ಅನ್ನಭಾಗ್ಯ ಯೋಜನೆಗೆ ಸಹಕಾರಿಯಾಗುತ್ತದೆ.
> -ರೇಣುಕಾಪ್ರಸಾದ್(ಮಧು)
> ಅಕ್ಕಿ ಗಿರಣಿ ಉದ್ಯಮಿ

ಮುಚ್ಚಲ್ಪಟ್ಟಿದ್ದ ಹರಳಹಳ್ಳಿ ಸರ್ಕಾರಿ ಶಾಲೆ ಪುನರಾರಂಭ

ವಿದ್ಯಾರ್ಥಿಗಳು, ಪೋಷಕರಲ್ಲಿ ಮನೆ ಮಾಡಿದ ಸಂಭ್ರಮ



ಪಿರಿಯಾಪಟ್ಟಣ, ಜು.1– ಶಿಕ್ಷಕರ ಕೊರತೆಯಿಂದ ಮೂರು ವರ್ಷಗಳ ಹಿಂದೆ ಮುಚ್ಚಿದ್ದ ಆರ್. ಹರಳಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಶುಕ್ರವಾರ ಪುನರಾರಂಭಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು, ಶಿಕ್ಷಣ ಸಂಯೋಜಕ ಗಣೇಶ್, ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪ್ರಶಾಂತ್, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಶಿವರಾಜ್ ಅವರು ವಿದ್ಯಾರ್ಥಿಗಳೊಂದಿಗೆ ಸೇರಿ ಟೇಪ್ ಕತ್ತರಿಸುವ ಮೂಲಕ ಶಾಲೆಯನ್ನು ಸಡಗರ ಸಂಭ್ರಮದಿಂದ ಪುನರಾರಂಭಿಸಿದರು.

ಬಳಿಕ ನಡೆದ ಸಮಾರಂಭದಲ್ಲಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು, ಮೂರು ವರ್ಷಗಳ ಹಿಂದೆ ಶಾಲೆಯಲ್ಲಿದ್ದ ಶಿಕ್ಷಕರೊಬ್ಬರ ಅಕಾಲಿಕ ಮರಣದಿಂದ ಶಾಲೆ ಮುಚ್ಚಲ್ಪಟ್ಟಿತ್ತು. ಇದೀಗ ಗ್ರಾಮಸ್ಥರೆಲ್ಲ ಸೇರಿ ಶಾಲೆಯನ್ನು ಮರಳಿ ತೆರೆಯಲು ಮುಂದಾಗಿರುವುದು ಸಂತೋಷದ ವಿಷಯ. ಊರಿನ ನಿಜವಾದ ದೇವಾಲಯವೇ ಶಾಲೆ. ಶಾಲೆಯೊಂದು ತೆರೆದರೆ ದೇಶದ ಅಭಿವೃದ್ಧಿಗೆ ಪೂರಕ. ಇದೀಗ ಒಬ್ಬರು ಶಿಕ್ಷಕರನ್ನು ಬೇರೆ ಶಾಲೆಯಿಂದ ವರ್ಗಾವಣೆಗೊಳಿಸಲಾಗಿದೆ. ಮುಂದೆ ಮತ್ತೊಬ್ಬರು ಶಿಕ್ಷಕರನ್ನು ನಿಯೋಜನೆಗೊಳಿಸಲಾಗುವುದು. ಶಾಲೆ ಮತ್ತೆ ಎಂದೂ ಹಿನ್ನಡೆ ಆಗದಂತೆ ಪೋಷಕರು ಮತ್ತು ಗ್ರಾಮಸ್ಥರು ಎಚ್ಚರ ವಹಿಸಬೇಕು ಎಂದು ಹೇಳಿದರು.

ಡಯಟ್‌ನ ನಿವೃತ್ತ ಉಪನ್ಯಾಸಕ ಆರ್.ಎಸ್.ದೊಡ್ಡಣ್ಣ ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸಿದ್ದೇಶ್ ಕುಮಾರ್, ಮುಖಂಡರಾದ ಗಿರೀಶ್, ಉಮಾ ರಾಜೇಂದ್ರ ರವೀಶ್ ಕುಮಾರ್, ಎಚ. ಡಿ.ರವೀಶ್, ಬಾಬು ಜಗಜೀವನ್ ರಾಮ್ ಯುವಕ ಸಂಘದ ಅಧ್ಯಕ್ಷ ವೆಂಕಟೇಶ್, ಕಾರ್ಯದರ್ಶಿ ಅರುಣ್ ಕುಮಾರ್, ಸಹ ಕಾರ್ಯದರ್ಶಿ ಮಂಜುನಾಥ್, ಸದಸ್ಯರಾದ ಎಸ್.ರವಿ.ಸುರೇಶ್, ಅಂಬೇಡ್ಕರ್ ಯುವಕ ಸಂಘದ ಸದಸ್ಯರಾದ ಶಂಕರಪ್ಪ, ಸತೀಶ್, ಲೋಕೇಶ್ ಹಾಜರಿದ್ದರು. ಬಳಿಕ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಗುರುಗಳ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು. ಶಾಲೆಯಲ್ಲಿ ಇದೀಗ 19ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ಸರಗೂರಲ್ಲಿ ವನಮಹೋತ್ಸವಕ್ಕೆ ಚಾಲನೆ

ಸರಗೂರು, ಜು.1– ಅರಣ್ಯ ಇಲಾಖೆ ವತಿಯಿಂದ ವನ ಮಹೋತ್ಸವ ಕಾರ್ಯಕ್ರಮಕ್ಕೆ ಪಟ್ಟಣದ ಸರ್ಕಾರಿ ಬಾಲಕರ ಪ್ರೌಢಶಾಲೆ ಆವರಣದಲ್ಲಿ ವಿವಿಧ ಗಿಡಗಳನ್ನು ನೆಡುವ ಮೂಲಕ ಚಾಲನೆ ನೀಡಲಾಯಿತು.



ಸರಗೂರು ವಲಯ ಅರಣ್ಯಾಧಿಕಾರಿ ಎಸ್.ಡಿ. ಮಧು ಈ ವೇಳೆ ಮಾತನಾಡಿ, ರಾಜ್ಯದಾದ್ಯಂತ ಜುಲೈ 1ರಿಂದ ಜುಲೈ 7 ರವರೆಗೆ ನಡೆಯುವ ವನಮಹೋತ್ಸವಕ್ಕೆ ಪ್ರತಿಯೊಬ್ಬರ ಬೆಂಬಲ ಅತ್ಯಗತ್ಯ. ಸಸಿ ನೆಡುವ ಸಪ್ತಾಹ ನನ್ನ ಗಿಡ ನನ್ನ ಹೆಮ್ಮೆ ಎಂಬ ಘೋಷಣೆಯಂತೆ ಕರ್ನಾಟಕ ರಾಜ್ಯದಲ್ಲಿ 5ಕೋಟಿ ಸಸಿ ನೆಡೋಣ. ಕನ್ನಡ ನಾಡನ್ನು ಹಸಿರು ಹೊದಿಕೆಯ ಕ್ರಾಂತಿ ಮಾಡಲು ಎಲ್ಲರ ಸಹಕಾರ ಮುಖ್ಯ ಎಂದರು.

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಯಕ ಪ್ರಸಾದ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಉತ್ತಮ ಪರಿಸರ ಉಳಿಸಿ ಬೆಳಸಬೇಕಿದೆ, ಇಂದು ನಾವುಗಳು ಸಸಿ ನೆಟ್ಟರೆ ಮುಂದೆ ಇದರಿಂದ ಉಚಿತವಾಗಿ ಆಮ್ಲಜನಕ ಪಡೆಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು,

ವಲಯ ಅರಣ್ಯಾಧಿಕಾರಿ ಅಭಿಲಾಶ್, ಡಿಆರ್‌ಎಫ್‌ಗಳಾದ ಲಿಂಗರಾಜು, ಅಭಿಲಾಶ್, ಕಿರಣ್, ತ್ಯಾಗರಾಜ್, ಹಾಗೂ ಭುವನೇಶ್‌ಕುಮಾರ್, ಲೋಕೇಶ್, ಮಿಥುನ್, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸರ್ಕಾರಿ ಬಾಲಕರ ಪ್ರೌಢಶಾಲೆ ಉಪ ಪ್ರಾಂಶುಪಾಲ ಜಿ.ನಾಗೇಶ್, ಶಿಕ್ಷಕರಾದ ಸಣ್ಣಸ್ವಾಮಯ್ಯ, ಸಂಜಯ್, ಮುರಳಿ, ಯಮುನಾ, ಲೀಲಾವತಿ, ವಿಜಯ, ಶಿವಸ್ವಾಮಿ, ಸವಿತಾ, ಮಾಲಶ್ರೀ, ಶಾಲಾ ಮಕ್ಕಳು ಭಾಗಿಯಾಗಿದ್ದರು,

ಹೆಚ್.ಡಿ.ಕೋಟೆಯಲ್ಲಿ ವೈದ್ಯರ ದಿನ ಆಚರಣೆ

ಬಡರೋಗಿಗಳ ಸೇವೆ ಮಾಡುವ ಸಂಕಲ್ಪ ತೊಟ್ಟ ವೈದ್ಯರು

ಹೆಚ್.ಡಿ.ಕೋಟೆ, ಜು.1– ಬಿ.ಸಿ.ರಾಯ್ ಅವರ ಆದರ್ಶ ಪರಿಪಾಲನೆ ಮಾಡುವುದರ ಜೊತೆಗೆ ಕರ್ತವ್ಯ ನಿಷ್ಠೆಯೊಂದಿಗೆ ಬಡ ರೋಗಿಗಳ ಸೇವೆ ಮಾಡಲು ಮುಂದಾಗೋಣ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಹ ನಿರ್ದೇಶಕಿ ಡಾ.ಶಕೀಲಾ ತಿಳಿಸಿದರು.



ಪಟ್ಟಣದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಿದ್ದ ವೈದ್ಯರ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜು.1ರಂದು ಬಿ.ಸಿ.ರಾಯ್ ಅವರು ಹುಟ್ಟಿದ ದಿನ ಹಾಗೂ ಮರಣ ಹೊಂದಿದ ದಿನ ಎರಡು ಒಂದೇ ಆಗಿದ್ದು, ಬಿ.ಸಿ.ರಾಯ್ ಅವರು ಮುಖ್ಯಮಂತ್ರಿ ಆಗಿದ್ದರೂ ಕೂಡ ದಿನದಲ್ಲಿ ಒಂದು ಗಂಟೆ ರೋಗಿಗಳ ಸೇವೆಯಲ್ಲಿ ತೊಡಗುತ್ತಿದ್ದರು. ಹಾಗೂ ಬಡ ರೋಗಿಗಳು ಹಾಗೂ ಬಡ ಮಕ್ಕಳೆಂದರೆ ಇವರಿಗೆ ಅಚ್ಚುಮೆಚ್ಚು, ಈ ಮಹಾತ್ಮರ ಹಿತ ಚಿಂತನೆಯಂತೆ ಇಂದಿನ ವೈದ್ಯರುಗಳಾದ ನಾವು ಇವರ ಆದರ್ಶಗಳನ್ನು ಅಳವಡಿಸಿಕೊಂಡು ಮುಂದಿನ ದಿನಗಳಲ್ಲಿ ನಾವುಗಳು ಕೂಡ ಜನಸೇವೆಗಳನ್ನು ಮಾಡಲು ಮುಂದಾಗೋಣ ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ಮಾತನಾಡಿ, ಬಿ.ಸಿ.ರಾಯ್ ಅವರ ಆದರ್ಶ ಪರಿ ಪಾಲನೆ, ಕರ್ತವ್ಯ ನಿಷ್ಠೆಯೊಂದಿಗೆ ಬಡ ರೋಗಿಗಳ ಸೇವೆ ಮಾಡಲು ಮುಂದಾ ಗೋಣ ಎಂದು ಈ ಪವಿತ್ರ ದಿನದಂದು ಘೋಷಣೆ ಮಾಡಿದರು. ಈ ಸಂದರ್ಭ ದಲ್ಲಿ ಎಲ್ಲಾ ವೈದ್ಯಾಧಿಕಾರಿಗಳಿಗೂ ಶುಭಾಶಯಗಳು ಕೋರಿದರು. ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿ ಕಾರಿ ಡಾ.ಸೋಮಣ್ಣ, ಡಾ. ಪ್ರಜ್ವಲ್, ಅರವಳಿಕೆ ತಜ್ಞರಾದ ಡಾ.ಕಿರಣ್, ಕಿವಿ ಮೂಗು ಮತ್ತು ಗಂಟಲು ತಜ್ಞರಾದ ಡಾ.ದಿವಾ ಕರ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಪೂರ್ಣಿಮಾ, ಡಾ.ರಿತೇಶ್, ಚರ್ಮರೋಗ ತಜ್ಞರಾದ ಡಾ.ಸಹನ, ಹಾಗೂ ತಾಲೂಕು ಆರೋಗ್ಯಾಧಿಕಾರಿ ಕಚೇರಿಯ ಸಿಬ್ಬಂದಿ ವರ್ಗದವರು, ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿ ವರ್ಗದವರು, ಇನ್ನಿತರರು ಹಾಜರಿದ್ದರು.

ನಾಳೆ ಶನಿ ಮಹಾಶಾಂತಿ, ಮಹಾ ಸುದರ್ಶನ ಹೋಮ

ಮೈಸೂರು, ಜು.1– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಗುರುಪೂರ್ಣಿಮೆ ಪ್ರಯುಕ್ತ ಜು.3ರಂದು ಬೆಳಗ್ಗೆ 9.30ಕ್ಕೆ ಸಾಮೂಹಿಕ ಶನಿ ಮಹಾಶಾಂತಿಯನ್ನು ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಪ್ರತ್ಯೇಕ ಸಂಕಲ್ಪದೊಂದಿಗೆ ಮಾಡಿಸಲಾಗುತ್ತದೆ. ಅಲ್ಲದೆ ಬಾಧೆ ನಿವಾರಕ ಮಹಾ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ, ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಅಂದು ಮಧ್ಯಾಹ್ನ 12.30ಕ್ಕೆ ಮಹಾ ಪೂರ್ಣಾಹುತಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ ಮೈಕುಮಾರ್ ಜಾತಕ ವಿಮರ್ಶಕರು: 9845183392, 9342183392 ಸಂಪರ್ಕಿಸಬಹುದು.

ಜನರ ಕೆಲಸ ವಿಳಂಬ ಮಾಡಿದರೆ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ

ನಂಜನಗೂಡು, ಜು.1– ಯಾವುದೇ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳನ್ನು ಅನಗತ್ಯವಾಗಿ ವಿಳಂಬ ಮಾಡದೆ ತಕ್ಷಣ ಮಾಡಿಕೊಡಬೇಕು. ತಪ್ಪಿದ್ದಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದಾಗಿ ಶಾಸಕ ದರ್ಶನ್ ಧ್ರುವನಾರಾಯಣ ಎಚ್ಚರಿಕೆ ನೀಡಿದರು.

ನಗರದ ಬಿಳಿಗಿರಿ ಬಡಾವಣೆಯಲ್ಲಿರುವ ತಾಲೂಕು ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಶನಿವಾರ ಪತ್ರಿಕಾ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರು ನಾನೇ ಚುನಾವಣೆಯಲ್ಲಿ ನಿಂತಿರುವ ಹಾಗೆ ಕೆಲಸ ಮಾಡಿ ನನಗೆ ಅಭೂತಪೂರ್ವ ಗೆಲುವು ತಂದು ಕೊಟ್ಟಿದ್ದಾರೆ. ಹಾಗಾಗಿ ನನ್ನ ಮೇಲೆ ಸಹಜವಾಗಿಯೇ ಮತದಾರರಲ್ಲಿ ಹೆಚ್ಚಿನ ನಿರೀಕ್ಷೆಯಿದೆ. ಅವರ ನಿರೀಕ್ಷೆಗೆ ತಕ್ಕಂತೆ ಉತ್ತಮ ಹಾಗೂ ಪಾರದರ್ಶಕ ಆಡಳಿತ ನೀಡುವ ನಿಟ್ಟಿನಲ್ಲಿ ಇಲಾಖಾವಾರು ಸಭೆ ನಡೆಸಿ ಅಧಿಕಾರಿಗಳಿಗೆ ಕೆಲವು ಸೂಚನೆಗಳನ್ನು ನೀಡಿದ್ದೇನೆ ಎಂದರು.

ಈ ಹಿಂದೆ ಆಡಳಿತದಲ್ಲಿ ಭ್ರಷ್ಟಾಚಾರದ ಬಗ್ಗೆ ವ್ಯಾಪಕವಾಗಿ ದೂರುಗಳು ಕೇಳಿಬರುತ್ತಿತ್ತು. ನನ್ನ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಆಸ್ಪದ ನೀಡದೇ ಉತ್ತಮ ಆಡಳಿತ ನೀಡಿ ಸಾರ್ವಜನಿಕರಿಗೆ ಅಧಿಕಾರಿಗಳು ಸ್ಪಂದಿಸಬೇಕು. ಆ ನಿಟ್ಟಿನಲ್ಲಿ ಈಗಾಗಲೇ ಆಡಳಿತ ಯಂತ್ರಕ್ಕೆ ಚುರುಕು ನೀಡುವ ಕಾರ್ಯದಲ್ಲಿ ತೊಡಗಿರುವುದಾಗಿ ತಿಳಿಸಿದರು.

ವಿಶೇಷವಾಗಿ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ, 24X7 ಕುಡಿಯುವ ನೀರಿನ ಯೋಜನೆ ಸಮರ್ಪಕವಾಗಿ ಜಾರಿಯಾಗಿಲ್ಲ. ಇನ್ನು ಖಾತೆ ಮಾಡಿಕೊಡುವ ವಿಚಾರವಾಗಿ ಸಾರ್ವಜನಿಕರು ಸಾಕಷ್ಟು ಬಳಲಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕ್ರಮಕ್ಕೆ ಆದೇಶಿಸಿದ್ದೇನೆ. ಇನ್ನು ಗ್ರಾಮೀಣ ಭಾಗದಲ್ಲಿ ಜಲಜೀವನ್ ಮಿಷನ್ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಕಂಡಿಲ್ಲ. ಶೇ.40ರಷ್ಟು ಮಾತ್ರ ಕಾಮಗಾರಿ ಆಗಿದೆ ಮೂಲ ಸೌಕರ್ಯಗಳ ಬಗ್ಗೆ ಸಾಕಷ್ಟು ಸಮಸ್ಯೆಯಿದೆ. ಎಲ್ಲವನ್ನು ಹಂತ ಹಂತವಾಗಿ ಪರಿಹರಿಸಲಾಗುವುದು ಎಂದರು.



ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಕಳಪೆ ಕಾಮಗಾರಿಗಳ ಬಗ್ಗೆ ದೂರುಗಳು ಕೇಳಿಬಂದಿದೆ. ಸಿಟಿಜನ್ ಶಾಲೆ ಹಿಂಭಾಗದ ರಸ್ತೆಯ ಮಧ್ಯೆ ವಿಭಜಕ ಅಗತ್ಯವಿರಲಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ. ಹಾಗೆಯೇ ಮಾರುಕಟ್ಟೆ ಕಾಮಗಾರಿ ಮೇಲ್ನೋಟಕ್ಕೆ ಕಳಪೆಯಿಂದ ಕೂಡಿರುವುದು ಸ್ಥಳ ಪರಿಶೀಲನೆ ವೇಳೆ ಕಂಡುಬಂದಿದೆ. ಈ ಬಗ್ಗೆ ಸರ್ಕಾರದಿಂದಲೇ ತಜ್ಞರ ಸಮಿತಿಯಿಂದ ಮಾರುಕಟ್ಟೆ ಗುಣಮಟ್ಟ ಹಾಗೂ ಸುರಕ್ಷತೆ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಇನ್ನು ಮಾರುಕಟ್ಟೆಯಲ್ಲೇ ವ್ಯಾಪಾರ–ವಹಿವಾಟು ನಡೆಸಲು ವರ್ತಕರೊಂದಿಗೆ ಸಭೆ ನಡೆಸುವುದಾಗಿ ದರ್ಶನ್ ಹೇಳಿದರು.

ಕೋವಿಡ್ ಬಳಿಕ ಗ್ರಾಮಾಂತರ ಭಾಗದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸೇವೆ ಸಮರ್ಪಕವಾಗಿಲ್ಲ ಎಂಬ ದೂರುಗಳು ಸಾಕಷ್ಟಿವೆ. ವಿದ್ಯಾರ್ಥಿಗಳು ಹಾಗೂ ನೌಕರರು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ನಂಜನಗೂಡು ಡಿಪೋಗೆ ಅಗತ್ಯವಿರುವಷ್ಟು ಬಸ್ ಕೊರತೆ ಇರುವ ಬಗ್ಗೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ವಿಧಾನಸಭಾ ಅಧಿವೇಶನದಲ್ಲಿ ಸಾರಿಗೆ ಇಲಾಖೆ ಗಮನ ಸೆಳೆದು ಹೆಚ್ಚುವರಿ ಬಸ್ ಮಂಜೂರಾತಿಗೆ ಬೇಡಿಕೆ ಸಲ್ಲಿಸುವುದಾಗಿ ದರ್ಶನ್ ತಿಳಿಸಿದರು.

ನಂಜನಗೂಡಿನಲ್ಲಿ ಸಾಕಷ್ಟು ಕೈಗಾರಿಕೆಗಳಿವೆ. ಅವುಗಳ ಸಿಎಸ್‌ಆರ್ ನಿಧಿಯನ್ನು ನಂಜನಗೂಡಿನ ಸಮಗ್ರ ಅಭಿವೃದ್ಧಿಗೆ ವಿನಿಯೋಗಿಸುವ ನಿಟ್ಟಿನಲ್ಲಿ ಎಲ್ಲಾ ಕಾರ್ಖಾನೆಗಳ ಮಾನವ ಸಂಪನ್ಮೂಲ ಅಧಿಕಾರಿಗಳ ಸಭೆ ನಡೆಸುವುದಾಗಿ ಶಾಸಕ ದರ್ಶನ್ ಹೇಳಿದರು.

ತಾಲೂಕಿನಲ್ಲಿ ಯಥೇಚ್ಛವಾಗಿ ಕೈಗಾರಿಕೆಗಳಿದ್ದರೂ ನಿರುದ್ಯೋಗ ಸಮಸ್ಯೆಯೂ ಇದೆ. ಕಾರ್ಖಾನೆಗಳಲ್ಲಿ ಯುವಕರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಾರ್ಖಾನೆಗಳೊಂದಿಗೆ ಮಾತುಕತೆ ನಡೆಸಲಾಗುವುದು. ನಾನು ಒಬ್ಬ ಕ್ರೀಡಾಪಟುವಾಗಿದ್ದು, ರಾಜ್ಯ ಮಟ್ಟದ ಟೆನ್ನಿಸ್ ಆಟಗಾರರಾಗಿ ಪ್ರತಿನಿಧಿಸಿದ್ದೇನೆ. ಕ್ರೀಡೆಗೆ ಒತ್ತು ನೀಡುವ ನಿಟ್ಟಿನಲ್ಲಿ ಯುವಕರಿಗೆ ಆದ್ಯತೆ ನೀಡಲಿದ್ದೇನೆ ಎಂದು ಹೇಳಿದರು.

ಸಂವಾದದಲ್ಲಿ ಮಾಜಿ ಶಾಸಕ ಕಳಲೆ ಎನ್.ಕೇಶವಮೂರ್ತಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಗಂಗಾಧರ್, ಪ್ರಧಾನ ಕಾರ್ಯದರ್ಶಿ ಎಂ.ಎಸ್. ಸತ್ಯನಾರಾಯಣ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಹುಲ್ಲಹಳ್ಳಿ ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್ ಉಪಸ್ಥಿತರಿದ್ದರು.

ಇಂದು ಸೋಸಲೆಯಲ್ಲಿ ಕಾಂಗ್ರೆಸ್ ಕೃತಜ್ಞತಾ ಸಮಾರಂಭ

ಸೋಸಲೆ, ಜು.1– ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ತಾಲೂಕಿನ ಸೋಸಲೇ ಗ್ರಾಮದಲ್ಲಿ ನಾಳೆ(ಜು.2) ಕಾಂಗ್ರೆಸ್ ಪಕ್ಷದ ಕೃತಜ್ಞತಾ ಸಮಾರಂಭವನ್ನು ಏರ್ಪಡಿಸಲಾಗಿದ್ದು, ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭಾಗವಹಿಸಲಿದ್ದಾರೆ ಎಂದು ಸೋಸಲೆ ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷ ಎಂ ಪರಶಿವಮೂರ್ತಿ ತಿಳಿಸಿದ್ದಾರೆ.

ತಾಲೂಕಿನ ವೀರಪ್ಪ ಒಡೆಯರ್ ಹುಂಡಿ ಗ್ರಾಮದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೋಬಳಿ ಕೇಂದ್ರ ಸ್ಥಾನವಾದ ಸೋಸಲೆ ಗ್ರಾಮದ ಅಂಚೆ ಕಚೇರಿ ಆವರಣದಲ್ಲಿ ನಡೆಯಲಿರುವ ಸಮಾರಂಭವನ್ನು ಯಶಸ್ವಿಗೊಳಿಸಲು ಸಿದ್ಧತೆಗಳನ್ನು ಕೈಗೊಳ್ಳಲಾಗಿದ್ದು, ಸಚಿವರಿಗೆ ಅದ್ದೂರಿ ಸ್ವಾಗತ ಕೋರೋಣ ಎಂದರು.

ಸೋಸಲೆಯ ಸಮಾರಂಭವನ್ನು ಮತ್ತಷ್ಟು ಮೆರಗಿನೊಂದಿಗೆ ಅದ್ದೂರಿಯಾಗಿ ನಡೆಸಲು ಕನಿಷ್ಠ 5000ಕ್ಕೂ ಹೆಚ್ಚು ಜನರನ್ನು ಸೇರಿಸೋಣ. ಅಂದು ಸೋಸಲೆ ಗ್ರಾಮದಲ್ಲಿ ಹಬ್ಬದ ಸಂಭ್ರಮ ಕಂಡು ಬರಬೇಕು. ಹೋಬಳಿಯ ಮತದಾರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕೆಪಿಸಿಸಿ ಸದಸ್ಯ ಹಾಗೂ ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಕೃತಜ್ಞತಾ ಸಮಾರಂಭದ ವೇದಿಕೆ ಕಾರ್ಯಕ್ರಮ ಆರಂಭಗೊಂಡಿದೆ. ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ತಂಡವನ್ನು ರಚನೆ ಮಾಡಿಕೊಂಡು ಹೋಬಳಿಯ ಪ್ರತಿಯೊಂದು ಗ್ರಾಮಗಳಿಗೂ ತೆರಳಿ ಎಲ್ಲಾ ಸಮುದಾಯಗಳ ಮತದಾರರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೇವೆ ಎಂದರು.



ಸಚಿವರನ್ನು ಸೋಸಲೆ ಗ್ರಾಮಕ್ಕೆ ಅದ್ದೂರಿಯಾಗಿ ಬರಮಾಡಿಕೊಳ್ಳೋಣ. ಹೋಬಳಿಯ ಜನರು ನಿರಂತರವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿರುವುದರಿಂದ ಈಗಿನ ಸರ್ಕಾರದ ಗ್ಯಾರಂಟಿ ಸೌಲಭ್ಯಗಳನ್ನು ಮನೆ ಮನೆಗೆ ತಲುಪಿಸಲು ಪ್ರಾಮಾಣಿಕವಾಗಿ ದುಡಿಯೋಣ ಎಂದು ತಿಳಿಸಿದರು.

ಹಿರಿಯ ಮುಖಂಡ, ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಮಿತಿಯ ಸದಸ್ಯ ಸೋಸಲೆ ಮಹದೇವಸ್ವಾಮಿ, ಡೈರಿ ಕಾರ್ಯದರ್ಶಿ ನಿಂಗಯ್ಯ, ಗ್ರಾಪಂ ಸದಸ್ಯ ಉಕ್ಕಲಗೆರೆ ರಾಜು, ಮಹೇಶ್ ಕುಮಾರ್, ಹರೀಶ್, ಸುಂದರ್ ನಾಯಕ್, ಮೋಹಿನ್ ಖಾನ್, ದೇವರಾಜ್(ಗೂಳಿ) ಹಾಜರಿದ್ದರು.

ನರಸೀಪುರದಲ್ಲಿ ಕೆಂಪೇಗೌಡ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ

ನಿರ್ಮಲಾನಂದನಾಥ ಸ್ವಾಮೀಜಿಗಳನ್ನು ಭೇಟಿ ಮಾಡಿ, ದಿನಾಂಕ ನಿಗದಿ ಮಾಡಲು ತೀರ್ಮಾನ

ತಿ.ನರಸೀಪುರ ಜು.1– ಒಕ್ಕಲಿಗರ ಸ್ವಾಭಿಮಾನದ ಪ್ರತೀಕವಾಗಿರುವ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ಕಲಾ ತಂಡಗಳ ಮೆರವಣಿಗೆ ಹಾಗೂ ಬೃಹತ್ ಸಮಾವೇಶದ ಮೂಲಕ ತಾಲೂಕು ಮಟ್ಟದಲ್ಲಿ ಅದ್ದೂರಿಯಾಗಿ ಆಚರಿಸಲು ಶನಿವಾರ ನಡೆದ ಸಮುದಾಯದ ಮುಖಂಡರ ಸಭೆಯಲ್ಲಿ ನಿರ್ಧರಿಸಲಾಯಿತು.



ಜಯಂತ್ಯುತ್ಸವ ಪೂರ್ವಭಾವಿಯಾಗಿ ಪಟ್ಟಣದ ಹಳೇ ತಿರುಮಕೂಡಲು ಶ್ರೀ ಆದಿಚುಂಚನಗಿರಿ ರಜತೋತ್ಸವ ಭವನದಲ್ಲಿ ನಡೆದ ಬನ್ನೂರು ಹೋಬಳಿ ಸೇರಿದಂತೆ ತಾಲ್ಲೂಕಿನ ಒಕ್ಕಲಿಗ ಮುಖಂಡರ ಸಭೆಯಲ್ಲಿ ನರಸೀಪುರದಲ್ಲಿಯೇ ಕೆಂಪೇಗೌಡರ ಜಯಂತಿಯ ಅದ್ದೂರಿ ಆಚರಣೆಗೆ ಸಮ್ಮತಿಸಿದ ಹಿನ್ನೆಲೆಯಲ್ಲಿ ಸಮುದಾಯ ಪೂಜ್ಯ ಗುರುಗಳಾದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿದ ಬಳಿಕ ದಿನಾಂಕವನ್ನು ನಿಗದಿ ಮಾಡಲು ತೀರ್ಮಾನಿಸಲಾಯಿತು.

ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥಗೌಡ ಮಾತನಾಡಿ, ತಾಲೂಕಿನಲ್ಲಿರುವ ಸಣ್ಣ–ಪುಟ್ಟ ಸಮುದಾಯಗಳು ಕೂಡ ಸಂಭ್ರಮದಿಂದಲೇ ಜಯಂತಿ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಪ್ರಾಬಲ್ಯವಿರುವ ಒಕ್ಕಲಿಗರು ಇದುವರೆವಿಗೂ ಯಾವೊಂದು ಜಯಂತಿಯನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಿಲ್ಲ. ರಾಜ್ಯದಲ್ಲಿ ಜಾಗೃತ ಸಮುದಾಯವಾಗಿರುವ ಒಕ್ಕಲಿಗರು ತಾಲೂಕಿನಲ್ಲೂ ಸಂಘಟಿತರಾಗಿ, ಪ್ರಬಲವಾಗಿದ್ದೇವೆ ಎಂಬ ಸಂದೇಶವನ್ನು ನೀಡಲು ಕೆಂಪೇಗೌಡರ ಜಯಂತ್ಯುತ್ಸವ ಸಾಕ್ಷಿಯಾಗಬೇಕು ಎಂದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ದೊಡ್ಡ ಮಟ್ಟದ ಜಯಂತಿ ಕಾರ್ಯಕ್ರಮ ನಡೆಸಲು ಸಮುದಾಯದ ಬಂಧುಗಳು ಸಂಘಟಿತರಾಗಬೇಕು. ಆದಿಚುಂಚನಗಿರಿ ಶ್ರೀಗಳ ಭೇಟಿಯ ಬಳಿಕ ಮತ್ತೊಂದು ಸಭೆಯನ್ನು ನಡೆಸಿ, ಉತ್ಸವದ ಸಿದ್ಧತೆಗಳು ಹಾಗೂ ಗಣ್ಯರನ್ನು ಆಹ್ವಾನಿಸುವ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳೋಣ ಎಂದು ಸಲಹೆ ನೀಡಿದರು.

ಮೈಮುಲ್ ನಿರ್ದೇಶಕ ಆರ್.ಚಲುವರಾಜು ಮಾತನಾಡಿ, ಕೆಂಪೇಗೌಡರ ಜಯಂತಿ ಅರ್ಥಪೂರ್ಣವಾಗಿ ನಡೆಯಬೇಕಾದರೆ ಕಡಿಮೆ ಎಂದರೂ 7 ರಿಂದ 8 ಸಾವಿರ ಸಮುದಾಯದ ಜನರೇ ಭಾಗವಹಿಸಬೇಕು. ಜಯಂತ್ಯುತ್ಸವ ದಿನ ಅನ್ಯ ಕಾರಣಗಳ ನೆಪವೊಡ್ಡಿ ಜನರು ಗೈರು ಹಾಜರಾದರೆ ಸಂಭ್ರಮ ಕಳೆಗುಂದಲಿದೆ. ಹಾಗಾಗಿ ಸಂಘಟನೆಯ ಹೊಣೆಯನ್ನು ಸಮುದಾಯದ ಪ್ರತಿಯೊಬ್ಬ ಮುಖಂಡರು ಹೊರಬೇಕು ಎಂದು ಕರೆ ನೀಡಿದರು.

ಶ್ರೀ ಶಾರದಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹನುಮನಾಳು ಸಿದ್ದೇಗೌಡ ಮಾತನಾಡಿ, ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಪಕ್ಷಾತೀತವಾಗಿ ಆಯೋಜಿಸಿ, ಸಮುದಾಯದ ಗಣ್ಯರು ಹಾಗೂ ಜನಪ್ರತಿನಿಧಿಗಳನ್ನು ಪಕ್ಷಾತೀತವಾಗಿ ಆಹ್ವಾನಿಸಬೇಕು ಎಂದು ಸಲಹೆಯಿತ್ತರು.

ಸಭೆಯಲ್ಲಿ ಸಹಾಯಕ ಪ್ರಾಧ್ಯಾಪಕ ಪ್ರೊ.ಸಿದ್ದೇಗೌಡ, ತಾ.ಪಂ ಮಾಜಿ ಅಧ್ಯಕ್ಷ ಸಿ.ಚಾಮೇಗೌಡ ಹೈಕೋರ್ಟ್ ವಕೀಲ ರಾಜೇಶ್, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಜೆಡಿಎಸ್ ರಾಜ್ಯ ಯುವ ಉಪಾಧ್ಯಕ್ಷ ಕೆಂಪಯ್ಯನಹುಂಡಿ ಬಾಲಕೃಷ್ಣ, ಚನ್ನೇಗೌಡ, ಉದ್ಯಮಿ ಕೆ.ರಾಜೇಶ್, ಕೆ.ಟಿ.ರಂಗನಾಥ್, ಬನ್ನೂರು ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ವೈ.ಎಸ್.ರಾಮಸ್ವಾಮಿ, ಪುರಸಭೆ ಮಾಜಿ ಉಪಾಧ್ಯಕ್ಷ ಬಿ.ಎಸ್.ರಾಮಲಿಂಗೇಗೌಡ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜು, ಗುತ್ತಿಗೆದಾರ ಮಹೇಂದ್ರ, ಗ್ರಾ.ಪಂ ಮಾಜಿ ಅಧ್ಯಕ್ಷರಾದ ಬಿ.ಎಲ್. ಕೃಷ್ಣಗೌಡ, ಧನಂಜಯಗೌಡ, ಮುಖಂಡರಾದ ಎಲ್‌ಐಸಿ ಮಾದೇಗೌಡ, ಬಿ.ಎನ್.ಶಿವನಂಜೇಗೌಡ, ಎನ್.ಎಂ.ರಾಮಚಂದ್ರ, ನಾರಾಯಣಸ್ವಾಮಿ, ಜಯರಾಮ್, ಎಲ್.ಮಹದೇವಪ್ಪ ಪೈ.ಚಂದ್ರು, ಆರ್.ಚೇತನ್, ಲಕ್ಷ್ಮಣ್, ಕೇತುಪುರ ಶಿವಕುಮಾರ್, ಆರ್. ಮಣಿಕಂಠ ರಾಜ್ ಗೌಡ, ಬಾಳೆಎಲೆ ಕುಮಾರ್, ಸಿ.ಸುನೀಲ್, ನಂದೀಶ್, ಅಂಬರೀಷ್, ನಾಗೇಶ್, ಪುಟ್ಟಸ್ವಾಮಿ ಹಾಗೂ ಇನ್ನಿತರರು ಹಾಜರಿದ್ದರು.

SITES FOR SALE
MUDA APPROVED
KBL Green Wood attached.
30x40 N/F & S/F, 30x50 N/F & E/F
Near JSS 2nd Stage Layout, Mysuru
Mob: 9343248739, 9686573798, 9900466811

Looking for an YOUNG BOY who can take care of a MENTALLY CHALLENGED PERSON from 8 to 6 pm or Part Time at V.V. Mohalla, Mysuru.
Please Call 93419 34319

SHREE VINAYAKA GREEN CITY
SITES FOR SALE
MUDA APPROVED
20x30, 20x40, 25x50 & 30x60
Behind MS Ramaiah Layout
Vijayanagara 4th Stage, Mysuru
Mob: 9900466811, 9686573798, 9343248739

WANTED SITE

About
9000 to 13000
square feet of MUDA Commercial Site in
KUVEMPUNAGAR,
with clear title on the Main Road,
(Vishwamanava Double Road or New Kantharaj Urs Road preferred)

IMMEDIATE SETTLEMENT

Please contact:
Phone or WhatsApp Details
94480-64119

JOBS @ GSS

JOBS	VACANCIES
GRAPHIC DESIGNER	2
GUEST HOUSE KEEPING	1
LAYOUT SECURITY/WATCHMAN	2
LAYOUT MAINTENANCE HEAD 3+ YEARS EXPERIENCE IN MAINTENANCE, PLANTATIONS AND BEAUTIFICATION OF LAYOUTS	1

SALARY AS PER EXPERIENCE
careers@gssprojects.in | 80500-01572
GSS Projects INVEST IN MYSORE. INVEST IN GSS. **SITES @ MYSORE**

FOR RENT
A studio room attached to the Main Building. It has a room with Coffee place and bath. Rs. 6500/- monthly. Behind Gokulam Telephone Exchange Office, VV Mohalla, Mysuru-2.
Call 11:00 am onwards at 93419 34319

A domestic helper boy who can COOK and DRIVE the automatic car, 24/7 to a BRAHMIN OLD COUPLE at Jayanagar, Bangaluru.
Please Call 93419 34319 after 11:00 am

BOOKINGS OPEN FOR
Construction of Brand New Architecture Designed Houses
MUDA APPROVED
20'x40 - 33.10 Lakhs
30'x40' - 50.49 Lakhs
Near St. Joseph's Central School, Hunsur Road, Mysore.
9740767576, 8884001233

ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಕಾರ್ಯಯೋಜನೆ,
ಅರಣ್ಯ ಭವನ, ಅಶೋಕಪುರಂ, ಮೈಸೂರು–570008
Email: cfwpmys@gmail.com Ph/Fax: 0821-2483917
ಸಂಖ್ಯೆ: ಎ2/ಬಿಯುಡಿ/ಇ–ಟೆಂಡರ್/ಮೋಜಣಿ/ಸಿಆರ್–3/2023–24
ದಿನಾಂಕ: 27.06.2023

ಇ–ಟೆಂಡರ್ ಪ್ರಕಟಣೆ–03/2023–24 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
(e-procurement)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳವರ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ, ಮೈಸೂರುರವರು 2023–24ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಮೋಜಣಿ ಕೆಲಸಗಳಿಗಾಗಿ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಕೆಲಸಕ್ಕೆ ಟೆಂಡರ್‌ನ್ನು ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ದಿ: 13.07.2023 ರ ಅಪರಾಹ್ನ 4.00 ಗಂಟೆಯವರೆಗೆ ಟೆಂಡರ್ ಅನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್ ಅನ್ನು ದಿ: 15.07.2023 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು ದಿ: 17.07.2023 ರಂದು ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ಇ.ಎಂ.ಡಿ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ. ಒಂದನೇ ಇ–ಟೆಂಡರ್‌ನಲ್ಲಿ ಯಾವುದೇ ಟೆಂಡರ್‌ದಾರರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಮರು ಟೆಂಡರ್ ಅನ್ನು ದಿ: 19.07.2023ರ ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದು. ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸುವುದಿಲ್ಲ. ಮರು ಟೆಂಡರ್ ತಾಂತ್ರಿಕ ಬಿಡ್ ಅನ್ನು ದಿ: 21.07.2023 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು ದಿ: 24.07.2023 ರಂದು ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ಇನ್ನುಳಿದ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು. ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ, ಮೈಸೂರು.
DIPR/DDMYS/KSMCA/84/2023-24

WANTED
To work in Mysore city limits for a reputed Land Developer Office
* OFFICE EXECUTIVE (Male)
* CIVIL ENGINEER (Male)
(Experience in land developing).
Age: 20 to 40 years. Two wheeler is must.
Call between 10 am to 5 pm.
Mob: 9148434989

ಬೇಕಾಗಿದ್ದಾರೆ ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರಸಿದ್ಧ ಇಂಜಿನಿಯರಿಂಗ್ ಕಾರ್ಖಾನೆಗೆ

1. ಐಟಿಐ/ಡಿಪ್ಲೋಮಾ/ಇಂಜಿನಿಯರಿಂಗ್
* ಪಾಸ್ / ಫೇಲ್ / ಡ್ರಾಪ್ ಔಟ್ * ಹುಡುಗರು / ಹುಡುಗಿಯರು
* ಆಸಕ್ತಿ, ತಾಳ್ಮೆ, ಕ್ರಿಯಾಶೀಲ ಹಾಗೂ ನಂಬಿಕಸ್ಥರು
* ಫಲಿತಾಂಶ ಆಧಾರಿತವಾಗಿ ಮತ್ತು ಶ್ರಮಪಟ್ಟು ಕೆಲಸ ನಿರ್ವಹಿಸುವ ಇಚ್ಛೆಯುಳ್ಳವರು.
* ಕೆಲಸದ ಅವಶ್ಯಕತೆ ಇರುವವರು
* ಪಾಳಿಯಲ್ಲಿ ಕೆಲಸ ಮಾಡಲು ಇಚ್ಛಿಸುವವರು (ಮೊದಲನೇ ಹಾಗೂ ಎರಡನೇ ಪಾಳಿ ಮಾತ್ರ)
* ತರಬೇತಿಯ ಸಮಯದಲ್ಲಿ ಉಚಿತ ಊಟ ಮತ್ತು ವಸತಿ ಸೌಕರ್ಯವಿರುತ್ತದೆ.

2. ಅಕೌಂಟ್ಸ್ ಅಸಿಸ್ಟೆಂಟ್ – (4 ವರ್ಷ ಅನುಭವ) ಬಿಕಾಂ./ಎಂ.ಕಾಂ)

ಇಚ್ಛೆಯುಳ್ಳ ಅಭ್ಯರ್ಥಿಗಳು ಈ ನಂಬರ್ ಅನ್ನು ಸಂಪರ್ಕಿಸಿ: **9845320560**



Hi! TAXI
ONLY ONE WAY **TAXI CHARGE**
MYSORE to BANGALORE
City drop or Pick up
BANGALORE to MYSORE Airport drop or Pick up | Shakthi Nagar MYSURU
9611177599

REQUIRED FOR RETAIL STORE
1. Sales Team Lead - 1No.
2. Associate - 3Nos.
3. Central Co-ordinator - 2Nos.
4. Admin - 3Nos.
Timing 9.30 - 8.30
9611217282

ಮೈಸೂರು ಮಿತ್ರ 44
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಸೈಟು ಮಾರಾಟಕ್ಕಿದೆ
ವಿಜಯನಗರ 4ನೇ ಹಂತದ ಪಕ್ಕ
KBL ಗಾರ್ಡೆನಿಯಾ ಬಡಾವಣೆಯಲ್ಲಿ
30x40 ಅಳತೆಯ ನಿವೇಶನ ಮಾರಾಟಕ್ಕಿದೆ
(ಮಧ್ಯವರ್ತಿಗಳು ಕ್ಷಮಿಸಿ)
7975043727

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ
ಶ್ರೀನಿಧಿ ಎನ್‌ಕ್ಲೇವ್ ಬೆಳವಾಡಿ, ಮೈಸೂರು
ಬ್ಯಾಂಕ್ ಲೋನ್ ಸೌಲಭ್ಯವಿದೆ.
ಸಂಪೂರ್ಣ ಅಭಿವೃದ್ಧಿ ಹೊಂದಿದೆ | ಮನೆಗಳು ಕಟ್ಟಲ್ಪಟ್ಟಿವೆ
•20x33 | •20x40 | ಕೆಲವೇ ನಿವೇಶನಗಳು ಲಭ್ಯವಿದೆ.
ಶಾಹಿ ಗಾರ್ಮೆಂಟ್ ಹತ್ತಿರ, ಹುಂಡೈ ಕಾರು ಶೋ ರೂಂ ಹಿಂಭಾಗ
ಎಕ್ಸೆಲ್ ಪಬ್ಲಿಕ್ ಸ್ಕೂಲ್ ರಸ್ತೆ, ಬೆಳವಾಡಿ, ಮೈಸೂರು. 91484 34989



ವಿವೇಕಾನಂದ ಶಿಕ್ಷಣ ಸಂಸ್ಥೆ –ಬನ್ನೂರು
ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ
ಶಿಕ್ಷಕರು ಬೇಕಾಗಿದ್ದಾರೆ

1	ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕಕರು (ಆಂಗ್ಲ ಮಾಧ್ಯಮ)	ಡಿ.ಇಡಿ, ಬಿ.ಎ, ಬಿ.ಇಡಿ, ಇಂಗ್ಲಿಷ್, ಹಿಂದಿ, ಬಿ.ಎಸ್ಸಿ, ಎಂ.ಎಸ್ಸಿ, ಬಿ.ಇಡಿ ಗಣಿತ (PCM), ವಿಜ್ಞಾನ (CBZ)
2	ವಾರ್ಡನ್‌ಗಳು	ಬಿ.ಎ, ಬಿಎಸ್ಸಿ, ಎಂ.ಎ, ಬಿ.ಇಡಿ
3	ದೈಹಿಕ ಶಿಕ್ಷಕರು	ಬಿ.ಪಿ.ಇಡಿ, ಎಂ.ಪಿ.ಇಡಿ
4	ಕಾಲೇಜು ಉಪನ್ಯಾಸಕರು	ಇಂಗ್ಲೀಷ್, ಎಂ.ಎ

5ನೇ ತರಗತಿಯಿಂದ ಪಿಯುಸಿ ವರಗೆ ಹಾಸ್ಟೆಲ್ ಸೌಲಭ್ಯವಿರುತ್ತದೆ
ಸಂಪರ್ಕಿಸಿ: 96320 38206
78294 45993, 93413 88404

SITE FOR SALE
Near Vasanth Nagara
- Pama Enclave
- 40x60 (East)
- Bannur Road
- Near Vidya Vikas College

Contact
9035379769

COMMERCIAL SITES FOR SALE
1. 6728 Sqft North Face
2. 5240 Sqft North Face
All documents available
Near Yelwala, Attached to NH 275
For more details contact
95131 57993, 74062 84792

